# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 6 ಭಾನುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 346 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4



# ಏ.14ರ ಮಧ್ಯರಾತ್ರಿಯಿಂದಲೇ ಅನಿರ್ದಿಷ್ಟಾವಧಿ ಲಾರಿ ಮುಷ್ಕರ

**ಬೆಂಗಳೂರು, ಏ.5– ಡೀಸೆಲ್ ದರ ಏರಿಕೆ ಖಂಡಿಸಿ ಇದೇ ಏ.15ರಿಂದ ಲಾರಿ ಮಾಲೀಕರ ಸಂಘ ಮುಷ್ಕರಕ್ಕೆ ಕರೆ ನೀಡಿದೆ. ಅಂದು ರಾಜ್ಯಾದ್ಯಂತ ಎಲ್ಲಾ ಲಾರಿಗಳ ಸಂಚಾರ ಸ್ಥಗಿತಗೊಳ್ಳಲಿದ್ದು, ಗೂಡ್ಸ್ ವಾಹನಗಳು, ಏರ್‌ಪೋರ್ಟ್ ಟ್ಯಾಕ್ಸಿಗಳೂ ಸಂಪೂರ್ಣ ಬಂದ್ ಆಗಲಿವೆ.**

ಬಸ್ ಟಿಕೆಟ್, ಮೆಟ್ರೋ, ಹಾಲು, ವಿದ್ಯುತ್ ಬಳಿಕ ಡೀಸೆಲ್ ದರ ಏರಿಕೆ ಮಾಡಿ ಕರ್ನಾಟಕ ಸರ್ಕಾರ ಜನರ ಕೆಂಗಣ್ಣಿಗೆ ಗುರಿಯಾಗಿದೆ. ಈ ಬೆನ್ನಲ್ಲೇ ಲಾರಿ ಮಾಲೀಕರ ಸಂಘ ಡೀಸೆಲ್ ಬೆಲೆ ಏರಿಕೆ ವಿರುದ್ಧ ಹೋರಾಟಕ್ಕೆ ಕರೆ ನೀಡಿದೆ. ಈ ಸಂಬಂಧ ಚಾಮರಾಜಪೇಟೆಯ ಖಾಸಗಿ ಹೋಟೆಲ್‌ನಲ್ಲಿ ಶನಿವಾರ ವಾಣಿಜ್ಯ ವಾಹನಗಳ ಮಾಲೀಕರ ಸಂಘ ಸಭೆ ನಡೆಸಿದ್ದು, ಸಭೆಯ ಬಳಿಕ ಏಪ್ರಿಲ್ 14ರ ಮಧ್ಯರಾತ್ರಿಯಿಂದ ಅನಿರ್ದಿಷ್ಟಾವಧಿ ಲಾರಿ ಮುಷ್ಕರಕ್ಕೆ ಕರೆ ನೀಡಿದೆ. ಈ ಕುರಿತು ಮಾತನಾಡಿರುವ ಲಾರಿ ಅಸೋಸಿಯೇಷನ್ ಅಧ್ಯಕ್ಷ ಷಣ್ಮುಗಪ್ಪ, ಡೀಸೆಲ್ ಬೆಲೆ 7 ತಿಂಗಳಲ್ಲಿ 5 ರೂ. ಏರಿಕೆಯಾಗಿದೆ. ಇದು ಲಾರಿ ಸೇರಿದಂತೆ ವಾಣಿಜ್ಯ ವಾಹನಗಳ ಮಾಲೀಕರು ನೇಣು ಹಾಕಿಕೊಳ್ಳುವ ಸ್ಥಿತಿ ಬಂದಿದೆ. ಏನಾದರೂ ಫ್ರೀ ಕೊಡಲಿ. ಆದರೆ ಹೊಟ್ಟೆ ಮೇಲೆ ಹೊಡೆದು ದರ ಏರಿಕೆ ಮಾಡುವುದು ಸರಿಯಲ್ಲ. ಫಿಟ್ನೆಸ್ ಫೀಸ್, ಬಾರ್ಡರ್ ಚೆಕ್‌ಪೋಸ್ಟ್, ಡೀಸೆಲ್ ದರ ಸೇರಿದಂತೆ ಪ್ರಮುಖ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಮುಷ್ಕರಕ್ಕೆ ಕರೆ ನೀಡಲಾಗಿದೆ. ಏಪ್ರಿಲ್ 14ರಂದು ಅಂಬೇಡ್ಕರ್ ಜಯಂತಿ. ಅಂದು ಮಧ್ಯರಾತ್ರಿಯಿಂದಲೇ ಹೋರಾಟ ಶುರು ಮಾಡಲಿದ್ದೇವೆ. ಬೇಡಿಕೆ ಈಡೇರುವವರೆಗೆ ಕರ್ನಾಟಕದ ಒಳಗೆ ■6ನೇ ಪುಟಕ್ಕೆ

### 6 ಲಕ್ಷ ಲಾರಿಗಳ ಸಂಚಾರ ಬಂದ್



### ಯಾವೆಲ್ಲಾ ವಾಹನಗಳು ಬಂದ್?

**ಏ.15ರಿಂದ ಏರ್‌ಪೋರ್ಟ್ ಟ್ಯಾಕ್ಸಿ, ಜಲ್ಲಿ ಕಲ್ಲು, ಮರಳು ಲಾರಿ, ಗೂಡ್ಸ್ ವಾಹನಗಳು ಸೇರಿದಂತೆ 6 ಲಕ್ಷ ಲಾರಿಗಳ ಸಂಚಾರ ಬಂದ್ ಆಗಲಿದೆ. ಜೊತೆಗೆ ಅಕ್ಕಿ ಲೋಡ್, ಗೂಡ್ಸ್, ಪೆಟ್ರೋಲ್, ಡೀಸೆಲ್ ಲಾರಿಗಳನ್ನೂ ಬಂದ್ ಮಾಡಲಾಗುತ್ತದೆ. ಇದಕ್ಕೆ ಚಾಲಕರ ಸಂಘದಿಂದಲೂ ಬೆಂಬಲ ವ್ಯಕ್ತವಾಗಿದೆ. ಎಲ್ಲಾ ಬಗೆಯ ವಾಣಿಜ್ಯ ವಾಹನಗಳ 9 ಲಕ್ಷ ವಾಹನಗಳ ಸಂಚಾರ ಸ್ಥಗಿತವಾಗಲಿದೆ.**

### ಮೈಸೂರಲ್ಲಿ ನಾಳೆ ಸಭೆ

ಮೈಸೂರು, ಏ.5(ಬಿಎಲ್‌ಯು)–ಡೀಸೆಲ್ ಮೇಲಿನ ಮಾರಾಟ ತೆರಿಗೆ ಹೆಚ್ಚಳ ವಿರೋಧಿಸಿ ಲಾರಿ ಮಾಲೀಕರು ಏಪ್ರಿಲ್ 14ರ ಮಧ್ಯರಾತ್ರಿಯಿಂದ ಮುಷ್ಕರ ನಡೆಸಲು ಉದ್ದೇಶಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆಯಲ್ಲಿ ಹೋರಾಟದ ರೂಪುರೇಷೆ ಸಿದ್ಧಪಡಿಸಲು ಲಾರಿ ಮಾಲೀಕರು ಸೋಮುವಾರ ಸಭೆ ಕರೆದಿದ್ದಾರೆ.

'ಮೈಸೂರು ಮಿತ್ರ'ನಿಗೆ ಈ ವಿಷಯ ತಿಳಿಸಿದ ಮೈಸೂರು ಜಿಲ್ಲಾ ಲಾರಿ ಮಾಲೀಕರ ಸಂಘದ ಅಧ್ಯಕ್ಷ ಬಿ.ಕೋದಂಡರಾಮು, ನಗರದ ಹಳೇ ಆರ್‌ಎಂಸಿ ಮೈದಾನದಲ್ಲಿ ಸೋಮವಾರ ಮಧ್ಯಾಹ್ನ 12 ಗಂಟೆಗೆ ಲಾರಿ ಮಾಲೀಕರ ಸಭೆ ಕರೆಯಲಾಗಿದೆ ಎಂದರು. ಮೈಸೂರು ಜಿಲ್ಲೆಯಲ್ಲಿ 9 ಸಾವಿರ ಲಾರಿಗಳಿವೆ. ಎಲ್ಲಾ ಲಾರಿ ಮಾಲೀಕರನ್ನು ಸಭೆಗೆ ಆಹ್ವಾನಿಸಿದ್ದು, ಯಾವ ರೀತಿ ಹೋರಾಟ ಮಾಡಬೇಕೆಂದು ಅಭಿಪ್ರಾಯ ಸಂಗ್ರಹಿಸಲಾಗುವುದು. ಈ ಮೂಲಕ ಹೋರಾಟದ ರೂಪು ರೇಷೆಗಳನ್ನು ನಿರ್ಧರಿಸಲಾಗುವುದು ಎಂದರು.

# ಮೀಸಲಾತಿ ವಿರೋಧಿಸಿದವರೆಲ್ಲಾ ಈಗ ಮೀಸಲಾತಿ ಅನುಭವಿಸುತ್ತಿದ್ದಾರೆ!

● ಸಿಎಂ ಸಿದ್ದರಾಮಯ್ಯ ವಿಷಾದ ● ಬಾಬೂಜಿ ಜನ್ಮದಿನೋತ್ಸವದಲ್ಲಿ ಅವರ ಕೊಡುಗೆ ಸ್ಮರಣೆ



ಡಾ.ಬಾಬು ಜಗಜೀವನರಾಮ್ ಅವರ 118ನೇ ಜನ್ಮ ದಿನೋತ್ಸವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬಾಬೂಜಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ಬೆಂಗಳೂರು,ಏ.5(ಕೆಎಂಶಿ)–ಮೀಸಲಾತಿ ವಿರುದ್ಧ ಇದ್ದವರೆಲ್ಲಾ ಮೀಸಲಾತಿ ಪಡೆದು ಸವಲತ್ತು ಅನುಭವಿಸುತ್ತಿದ್ದು, ಈಗ ಮೀಸಲಾತಿ ವಿರೋಧಿಸುವವರು ಯಾರೂ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟಿದ್ದಾರೆ.

ಡಾ.ಬಾಬು ಜಗಜೀವನರಾಮ್ ಅವರ 118ನೇ ಜನ್ಮ ದಿನೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಬಾಬು ಜಗಜೀವನ್ ರಾಮ್ ಸ್ವಾತಂತ್ರ್ಯ ಪ್ರೇಮಿ, ಸಾಮಾಜಿಕ ನ್ಯಾಯದ ಪರವಾಗಿದ್ದವರು. ಅವರು ಜಾತಿ ವ್ಯವಸ್ಥೆ ಕಾರಣದಿಂದ ಸಮಾಜದಲ್ಲಿ ಅಸಮಾನತೆ ಇದೆ. ಈ ವ್ಯವಸ್ಥೆ ಇರುವವರೆಗೂ ಮೀಸಲಾತಿ ಇರಬೇಕು ಎಂಬ ಸ್ಪಷ್ಟ ನಿಲುವು ಹೊಂದಿದ್ದರು ಎಂದರು.

ಬಾಬು ಜಗಜೀವನ್ ರಾಮ್ ಕೇಂದ್ರ ಸಚಿವರಾಗಿ (ಹಸಿರು ಕ್ರಾಂತಿ) ಎಲ್ಲರಿಗೂ ಆಹಾರ ಸಿಗುವಂತೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ನಮಗೆಲ್ಲಾ ಹಿಂದೆಲ್ಲಾ ಹಬ್ಬದ ದಿನ ಮಾತ್ರ ಅನ್ನ ಸಿಗುತ್ತಿತ್ತು. ಈ ಪರಿಸ್ಥಿತಿ ಯಾರಿಗೂ ಬರಬಾರದು. ಯಾರೂ ಹಸಿವಿನಿಂದ ಮಲಗಬಾರದು ಎನ್ನುವ ಉದ್ದೇಶದಿಂದ ಅನ್ನಭಾಗ್ಯ ಜಾರಿಗೆ ತಂದೆವು. ಜಗಜೀವನ್ ರಾಮ್ ಮತ್ತು ಅಂಬೇಡ್ಕರ್ ಇಬ್ಬರಿಗೂ ಸಮಾಜದ ಕಷ್ಟ ಗೊತ್ತಿತ್ತು. ಅವುಗಳಿಗೆ ಪರಿಹಾರ ಕಂಡುಕೊಳ್ಳುವ ಮಾರ್ಗವಾಗಿ ಸಂವಿಧಾನ ಬಂತು, ನಮಗೆಲ್ಲಾ ಶಿಕ್ಷಣ ಸಿಕ್ಕಿತು.

ಮತ್ತೊಬ್ಬ ಅಂಬೇಡ್ಕರ್, ಜಗಜೀವನ್ ರಾಮ್ ನಮಗೆ ಸಿಗುವುದಿಲ್ಲ. ಆದ್ದರಿಂದ ಇವರು ಬಿಟ್ಟು ಹೋಗಿರುವ ಚಿಂತನೆ ಮತ್ತು ಕಾಳಜಿಗಳನ್ನು ಪಾಲಿಸಬೇಕು. ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಆರ್ಥಿಕ ದುರ್ಬಲರಿಗೆ ಶೇ.10 ಮೀಸಲಾತಿ ಕಲ್ಪಿಸಿದ ನಂತರ ■6ನೇ ಪುಟಕ್ಕೆ

# ಮುಸ್ಲಿಂ ಮಹಿಳೆಯರಿಗೂ ಆಸ್ತಿ ಪಾಲು ಸಿಗಲಿ: ಹೈಕೋರ್ಟ್ ಸಲಹೆ

**ಬೆಂಗಳೂರು:** ಮುಸ್ಲಿಂ ಮಹಿಳೆಯರಿಗೂ ಆಸ್ತಿಯಲ್ಲಿ ಪುರುಷರ ಸಮಾನ ಪಾಲಿಲ್ಲದ ಹಿನ್ನೆಲೆಯಲ್ಲಿ ದೇಶಾದ್ಯಂತ ಏಕರೂಪ ನಾಗರಿಕ ಸಂಹಿತೆ ಜಾರಿಗೆ ಕರ್ನಾಟಕ ಹೈಕೋರ್ಟ್ ಸಲಹೆ ನೀಡಿದೆ. ನ್ಯಾ.ಹಂಚಾಟೆ ಸಂಜೀವ್‌ಕುಮಾರ್ ಅವರಿದ್ದ ಏಕಸದಸ್ಯ ಪೀಠ ಈ ಬಗ್ಗೆ ವಿಚಾರಣೆ ನಡೆಸಿದ್ದು, ಡಾ.ಬಿ.ಆರ್.ಅಂಬೇಡ್ಕರ್ ಸಹ ಏಕರೂಪ ನಾಗರಿಕ ಸಂಹಿತೆ ಪರವಾಗಿದ್ದರು ಎಂದು ಹೇಳಿದೆ. ಸಾಂವಿಧಾನಿಕ ಸಭೆಯ ಚರ್ಚೆ ಉಲ್ಲೇಖಿಸಿರುವ ಹೈಕೋರ್ಟ್, ಸಂವಿಧಾನದ ಆರ್ಟಿಕಲ್ 44ರಲ್ಲಿ ಏಕರೂಪ ನಾಗರಿಕ ಸಂಹಿತೆ ಪ್ರಸ್ತಾಪವಿದೆ. ಅದು



ಜಾರಿಗೆ ತಂದರೆ ಮುಸ್ಲಿಂ ಮಹಿಳೆಯರಿಗೂ ಸಮಾನ ನ್ಯಾಯ ಸಿಗಲಿದೆ. ಆಸ್ತಿ ಹಕ್ಕಿನಲ್ಲಿ ಮುಸ್ಲಿಂ ಮಹಿಳೆಯರಿಗೆ ಈಗ ಸಮಾನ ಅಧಿಕಾರವಿಲ್ಲ ಎಂದು ಕರ್ನಾಟಕ ಹೈಕೋರ್ಟ್ ನ್ಯಾಯಪೀಠ ಅಭಿಪ್ರಾಯಪಟ್ಟಿದೆ. ಹಿಂದೂ ಮಹಿಳೆಯರಿಗೆ ಮಾತ್ರ ಪುರುಷರಷ್ಟೇ ಆಸ್ತಿಯಲ್ಲಿ ಸಮಾನ ಅಧಿಕಾರವಿದೆ. ಹಿಂದೂಗಳಲ್ಲಿ ಅಣ್ಣನ ಸರಿಸಮನಾಗಿ ತಂಗಿಗೂ ಪಾಲಿದೆ. ಆದರೆ, ಮಹಮ್ಮದೀಯ ಕಾನೂನಿನಲ್ಲಿ ಸರಿಸಮಾನವಾದ ಪಾಲು ನೀಡಿಲ್ಲ. ದೇಶದ ಎಲ್ಲ ಹೆಣ್ಣು ಮಕ್ಕಳೂ ಸಮಾನರು. ಧರ್ಮದ ಕಾರಣದಿಂದಾಗಿ ಮಹಿಳೆಯರ ಹಕ್ಕಿನಲ್ಲಿ ತಾರತಮ್ಯ ಮಾಡುವುದು ಸರಿಯಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಏಕರೂಪ ನಾಗರಿಕ ಜಾರಿಗೆ ತರುವ ವಿಶ್ವಾಸವಿದೆ. ಸುಪ್ರೀಂಕೋರ್ಟ್, ಹೈಕೋರ್ಟ್‌ಗಳೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿವೆ.

# ಮುಖ್ಯಮಂತ್ರಿಗಾದಿ ಗಿಟ್ಟಿಸಿಕೊಳ್ಳಲು ಸೋನಿಯಾ ಮೊರೆ ಹೋದ ಡಿಕೆಶಿ!

● ಎಲ್ಲಾ ಸಂಕಷ್ಟ ಕಾಲದಲ್ಲಿ ಪಕ್ಷ ಪಾರುಮಾಡಿದ ನನಗೆ ಪಕ್ಷ ಅಧಿಕಾರ ಹಿಡಿಯುವ ವೇಳೆ ಏರ್ಪಟ್ಟ ಒಪ್ಪಂದದಂತೆ ಅವಕಾಶ ಕಲ್ಪಿಸಿ ● ಸಿಎಂ ಸಿದ್ದರಾಮಯ್ಯ ಬಣದ ರಾಜಕೀಯ ಮೇಲಾಟಗಳ ಮನವರಿಕೆ

ಬೆಂಗಳೂರು, ಏ. 5(ಕೆಎಂಶಿ)– ಮುಖ್ಯಮಂತ್ರಿ ಗಾದಿ ತಪ್ಪಿಸಲು ವರಿಷ್ಠರ ಮೇಲೆ ಸಿದ್ದರಾಮಯ್ಯ ಹಾಗೂ ಬೆಂಬಲಿಗರ ಒತ್ತಡ ಹೆಚ್ಚಾಗುತ್ತಿದ್ದಂತೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಮೊರೆ ಹೋಗಿದ್ದಾರೆ.





ಕರ್ನಾಟಕದಲ್ಲಿ ಪಕ್ಷ ಅಧಿಕಾರ ವಹಿಸಿಕೊಳ್ಳುವ ವೇಳೆಯಲ್ಲಿ ಆಗಿರುವ ಒಪ್ಪಂದದಂತೆ ಮೇ ತಿಂಗಳಿಗೆ 2 ವರ್ಷ ಪೂರ್ಣಗೊಳ್ಳಲಿದ್ದು, ತಮಗೆ ಮುಖ್ಯಮಂತ್ರಿ ಸ್ಥಾನ ದೊರಕಿಸಿಕೊಡಿ ಎಂದು ಮನವಿ ಮಾಡಿದ್ದಾರೆ. ಕಳೆದ 4 ದಿನಗಳಿಂದ ■6ನೇ ಪುಟಕ್ಕೆ

## ವಕ್ಫ್ ಮಸೂದೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅಂಕಿತ

ನವದೆಹಲಿ, ಏ.5–ಭಾರೀ ಚರ್ಚೆಗಳ ನಂತರ ಸಂಸತ್ತಿನ ಉಭಯ ಸದನಗಳಲ್ಲಿ ಅಂಗೀಕಾರ ಪಡೆದಿದ್ದ ವಕ್ಫ್ (ತಿದ್ದುಪಡಿ) ಮಸೂದೆಗೆ ರಾಷ್ಟ್ರಪತಿ



ದ್ರೌಪದಿ ಮುರ್ಮು ಶನಿವಾರ ಅಂಕಿತ ಹಾಕಿದ್ದಾರೆ. ರಾಜ್ಯಸಭೆಯಲ್ಲಿ ಮಸೂದೆಯು 128 ಸದಸ್ಯರು ಪರ ಮತ್ತು 95 ಸದಸ್ಯರು ವಿರೋಧ ಮತ ಚಲಾಯಿಸುವ ಮೂಲಕ ಅಂಗೀಕಾರವಾಗಿತ್ತು. ಇದಕ್ಕೂ ಮುನ್ನ ಗುರುವಾರ ಮುಂಜಾನೆ ಲೋಕಸಭೆಯಲ್ಲಿ 288 ಸದಸ್ಯರು ಇದನ್ನು ಬೆಂಬಲಿಸಿದರೆ, 232 ಸದಸ್ಯರು ಅದರ ವಿರುದ್ಧ ಮತ ಚಲಾಯಿಸಿದ್ದರು. ಅಂತಿಮವಾಗಿ ಈಗ ರಾಷ್ಟ್ರಪತಿ ಅಂಕಿತ ಹಾಕಿದ್ದಾರೆ.

# ನನ್ನನ್ನು ಕೆಣಕಬೇಡಿ, ನನ್ನ ಬಳಿ ಟನ್ ಗಟ್ಟಲೆ ದಾಖಲೆಗಳಿವೆ

● ಡಿಸಿಎಂ ಡಿ.ಕೆ.ಶಿವಕುಮಾರ್‌ಗೆ ಕೇಂದ್ರ ಸಚಿವ ಕುಮಾರಸ್ವಾಮಿ ಎಚ್ಚರಿಕೆ ● ಘಜ್ನಿ, ಘೋರಿ ಮೊಹಮ್ಮದ್ ರಾಜ್ಯವನ್ನು ಆಳುತ್ತಿದ್ದಾರೆ

**ಬೆಂಗಳೂರು:** ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಶನಿವಾರ ತೀವ್ರ ವಾಗ್ದಾಳಿ ನಡೆಸಿದ ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು, ಆಕ್ರಮಣಕಾರರಾದ ಮಹಮ್ಮದ್ ಘೋರಿ, ಮಹಮ್ಮದ್ ಘಜ್ನಿ ಮತ್ತು ಮಾಲಿಕ್ ಕಫೂರ್ ರಾಜ್ಯವನ್ನು ಆಳುತ್ತಿದ್ದಾರೆ ಎಂದು ಟೀಕಿಸಿದ್ದಾರೆ.

ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಕುಮಾರಸ್ವಾಮಿ, ನಮ್ಮ ರಾಜ್ಯವು ವಿನಾಶದ ಅಂಚಿನಲ್ಲಿದೆ. ಈ ಸರ್ಕಾರದ ಅಕ್ರಮಗಳು, ಲೂಟಿ ಮತ್ತು ದರೋಡೆ ರಾಜ್ಯವನ್ನು ಈ ಹಂತಕ್ಕೆ ತಂದಿದೆ. ಮಹಮ್ಮದ್ ಘಜ್ನಿ, ಮಹಮ್ಮದ್ ಘೋರಿ ಮತ್ತು ಮಾಲಿಕ್ ಕಫೂರ್ ರಾಜ್ಯವನ್ನು ಆಳುತ್ತಿದ್ದಾರೆ. ಅವರು ವಿಧಾನ ಸೌಧದ ಮೂರನೇ ಮಹಡಿಯಲ್ಲಿ



ಕುಳಿತಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಹೆಸರನ್ನು ನೇರವಾಗಿ ಪ್ರಸ್ತಾಪಿಸದೆ ವಾಗ್ದಾಳಿ ನಡೆಸಿದರು.

ನಾನು ಈ ಸರ್ಕಾರಕ್ಕೆ ಸವಾಲು ಹಾಕುತ್ತೇನೆ. ನಲವತ್ತು ವರ್ಷಗಳ ಹಿಂದೆ, ನಾನು 46 ಎಕರೆ ಭೂಮಿಯನ್ನು ಖರೀದಿಸಿದೆ. ನಾನು ರೈತನಂತೆ ಅದನ್ನು ಪ್ರಾಮಾಣಿಕವಾಗಿ ಬೆಳೆಸಿದ್ದೇನೆ. ನಾಲ್ಕು ದಶಕಗಳಲ್ಲಿ, ಇಂತಹ ದ್ವೇಷಪೂರಿತ ರಾಜಕೀಯ ಮತ್ತು ■6ನೇ ಪುಟಕ್ಕೆ

### ಬಿಜೆಪಿ ಸರ್ಕಾರದ ಕೋವಿಡ್ ಹಗರಣ ಆರೋಪ

## ಸರ್ಕಾರಕ್ಕೆ ಮಧ್ಯಂತರ ವರದಿ ಸಲ್ಲಿಕೆ

**ಬೆಂಗಳೂರು:** ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದಿದೆ ಎನ್ನಲಾದ ಕೋವಿಡ್ ಕಾಲದ ಹಗರಣ ಆರೋಪ ಪ್ರಕರಣದ ಮಧ್ಯಂತರ ವರದಿಯನ್ನು ಜಸ್ಟೀಸ್ ಮೈಕಲ್ ಡಿ ಕುನ್ಹಾ ಆಯೋಗ ರಾಜ್ಯ ಸರ್ಕಾರಕ್ಕೆ ಸಲ್ಲಿಕೆ ಮಾಡಿದೆ.

ಕುನ್ಹಾ ಅವರು ತನಿಖೆಯ ಮಧ್ಯಂತರ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಒಪ್ಪಿಸಿದರು. ಈ ಸಂದರ್ಭದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಉಪಸ್ಥಿತರಿದ್ದರು. ಬಿಜೆಪಿ ಸರ್ಕಾರದ ಅವಧಿಯಲ್ಲಿ 2,000 ಕೋಟಿ ರೂ. ಗಿಂತಲೂ ಅಧಿಕ ಅಕ್ರಮ ನಡೆದಿದೆ ಅಂತ ಆರೋಪ ಕೇಳಿಬಂದಿತ್ತು. ಹಗರಣದ ಬಗ್ಗೆ ವರದಿ ಸಲ್ಲಿಸಲು ಕಾಂಗ್ರೆಸ್ ಸರ್ಕಾರ 2023 ಆಗಸ್ಟ್‌ನಲ್ಲಿ ನಿವೃತ್ತ ಹೈಕೋರ್ಟ್ ■6ನೇ ಪುಟಕ್ಕೆ

### ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಆತ್ಮಹತ್ಯೆ ಪ್ರತಿಧ್ವನಿ ಶಾಸಕರ ಮೇಲೆ ಎಫ್‌ಐಆರ್‌ಗೆ ಆಗ್ರಹಿಸಿ ಕುಶಾಲನಗರದಲ್ಲಿ

# ಬಿಜೆಪಿ ಭಾರಿ ಪ್ರತಿಭಟನೆ



ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಆತ್ಮಹತ್ಯೆಗೆ ಕಾರಣರಾದ ಕಾಂಗ್ರೆಸ್ ಶಾಸಕರಿಬ್ಬರ ವಿರುದ್ಧವೂ ಎಫ್‌ಐಆರ್ ದಾಖಲಿಸಿ, ಬಂಧಿಸಬೇಕೆಂದು ಆಗ್ರಹಿಸಿ ಬಿಜೆಪಿ ಕಾರ್ಯಕರ್ತರು ಕುಶಾಲನಗರದ ಡಿವೈಎಸ್‌ಪಿ ಕಚೇರಿಗೆ ಮುತ್ತಿಗೆ ಹಾಕಿ, ಭಾರಿ ಪ್ರತಿಭಟನೆ ನಡೆಸಿದರು.

ಮಡಿಕೇರಿ,ಏ.5–ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಆತ್ಮಹತ್ಯೆಗೆ ಕಾರಣರಾದ ಕಾಂಗ್ರೆಸ್ ಶಾಸಕರ ಹೆಸರನ್ನು ಎಫ್‌ಐಆರ್‌ನಲ್ಲಿ ದಾಖಲಿಸಿ, ಅವರನ್ನು ಬಂಧಿಸಬೇಕೆಂದು ಆಗ್ರಹಿಸಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರು ಕುಶಾಲನಗರದ ಡಿವೈಎಸ್‌ಪಿ ಕಚೇರಿಗೆ ಮುತ್ತಿಗೆ ಹಾಕಿ, ಪ್ರತಿಭಟನೆ ನಡೆಸಿದರು.


ಕಾಂಗ್ರೆಸ್ ಸರಕಾರ, ಶಾಸಕ ಎ.ಎಸ್.ಪೊನ್ನಣ್ಣ, ಡಾ.ಮಂತರ್ ಗೌಡ, ತೆನ್ನೀರಾ ಮೈನಾ ವಿರುದ್ಧ ಘೋಷಣೆ ಕೂಗಿದ ಪ್ರತಿಭಟನಾಕಾರರು ವಿನಯ್ ಸೋಮಯ್ಯ ಆತ್ಮಹತ್ಯೆಗೆ ಕಾರಣರಾದವರ ವಿರುದ್ಧ ಪ್ರಕರಣ ದಾಖಲಿಸಬೇಕು. ತಪ್ಪಿತಸ್ಥರನ್ನು ತಕ್ಷಣವೇ ಬಂಧಿಸಬೇಕೆಂದು ಒತ್ತಾಯಿಸಿದರು. ಸೋಮಯ್ಯ ಸಾವಿಗೆ ನ್ಯಾಯ ಸಿಗುವವರೆಗೂ ಹೋರಾಟ ಮುಂದುವರೆಸುವುದಾಗಿ ಎಚ್ಚರಿಸಿದರು.

**ಎಫ್‌ಐಆರ್ ದಾಖಲಿಸಿ:** ಸ್ಥಳದಲ್ಲಿದ್ದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ■6ನೇ ಪುಟಕ್ಕೆ

## ಇದೆಲ್ಲ ಬಿಜೆಪಿಯವರ ರಾಜಕೀಯ ಷಡ್ಯಂತರ

### ಕೊಡಗಿನ ಶಾಸಕದ್ವಯರ ಆಕ್ರೋಶ

ಮಡಿಕೇರಿ,ಏ.5– ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಸಾವಿನಲ್ಲಿ ಬಿಜೆಪಿ, ಹೆಣದ ಮುಂದೆ ರಾಜಕೀಯ ಷಡ್ಯಂತ್ರ ಮಾಡುವ ಪ್ರವೃತ್ತಿಯನ್ನು ಮುಂದುವರೆಸಿರುವುದು ಖಂಡನೀಯ ಎಂದು ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಮಾತನಾಡಿದರು.

ಕೊಡಗಿನಾದ್ಯಂತ ಇಬ್ಬರು ಶಾಸಕರು ಕಳೆದ ಎರಡು ವರ್ಷಗಳಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳನ್ನು ಸಹಿಸಲಾರದೇ ಮತ್ಸರದಿಂದ ಬಿಜೆಪಿ ಈಗ ವಿನಯ್ ಸಾವಿನ ಪ್ರಕರಣವನ್ನು ಬಳಸಿಕೊಂಡು ರಾಜಕೀಯ ಮಾಡುತ್ತಿದೆ ಎಂದು ಸುದ್ದಿಗೋಷ್ಠಿಯಲ್ಲಿ ದೂರಿದರು. ವಿನಯ್‌ನನ್ನು ಸರಿಯಾಗಿ ನೋಡಿಕೊಳ್ಳದ ಬಿಜೆಪಿಯೇ ಅವನ ಸಾವಿಗೆ ಕಾರಣವೇ ಹೊರತು ಬೇರೆ ಯಾರೂ ಅಲ್ಲ. ■6ನೇ ಪುಟಕ್ಕೆ

ಮೈಸೂರು ಮಿತ್ರ

ಭಾನುವಾರ 6 ಏಪ್ರಿಲ್ 2025

# ಬದುಕಲು ಗಾಳಿ ಶುದ್ಧೀಕರಣ ಉಪಕರಣ ಬಳಸುವ ದಿನ ದೂರವಿಲ್ಲ

## ಅದಮ್ಯ ಚೇತನ ಫೌಂಡೇಷನ್ ಅಧ್ಯಕ್ಷೆ ತೇಜಸ್ವಿನಿ ಅನಂತಕುಮಾರ್ ಆತಂಕ



ಅಭ್ಯುದಯ ಮಹಿಳಾ ಸಮಾಜದ 30ನೇ ವಾರ್ಷಿಕೋತ್ಸವ ಸಮಾರಂಭವನ್ನು ಅದಮ್ಯ ಚೇತನ ಫೌಂಡೇಷನ್ ಅಧ್ಯಕ್ಷೆ ತೇಜಸ್ವಿನಿ ಅನಂತಕುಮಾರ್ ಉದ್ಘಾಟಿಸಿದರು.

ಮೈಸೂರು, ಏ.5(ಬಿಎಲ್‌ಯು)– ರಾಷ್ಟ್ರ ರಾಜಧಾನಿ ದೆಹಲಿಯಂತೆ ಬೆಂಗಳೂರಿನಲ್ಲಿ ಕೂಡ ಗಾಳಿ ಶುದ್ಧೀಕರಣ ಉಪಕರಣ ಇಟ್ಟುಕೊಂಡು ಬದುಕುವ ದಿನ ದೂರವಿಲ್ಲ ಎಂದು ಅದಮ್ಯ ಚೇತನ ಫೌಂಡೇಷನ್ ಅಧ್ಯಕ್ಷೆ ತೇಜಸ್ವಿನಿ ಅನಂತಕುಮಾರ್ ಎಚ್ಚರಿಸಿದರು.

ಮೈಸೂರಿನ ವಿಶ್ವೇಶ್ವರನಗರದ ಮೈಸೂರು ಬಿಲ್ಡರ್ಸ್ ಚಾರಿಟೆಬಲ್ ಟ್ರಸ್ಟ್ ಸಭಾಂಗಣದಲ್ಲಿ ಅಭ್ಯುದಯಂ ಮಹಿಳಾ ಸಮಾಜದ 30ನೇ ವಾರ್ಷಿಕೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ದೆಹಲಿಯಂತೆ ಬೆಂಗಳೂರಿನಲ್ಲೂ ಮಾಲಿನ್ಯದ ವಾತಾವರಣ ನಿರ್ಮಾಣವಾದರೆ ಜನರ ಬದುಕು ಶೋಚನೀಯವಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಉತ್ತಮ ಪರಿಸರ ನಿರ್ಮಾಣವಾದರೆ ಮಾಲಿನ್ಯದ ಸವಾಲುಗಳನ್ನು ಸಮರ್ಥವಾಗಿ ಎದುರಿಸಬಹುದು. ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬರು ಮರಗಿಡ ಬೆಳೆಸಬೇಕು.

ಗಣಿಗಾರಿಕೆಯಿಂದ ವಾತಾವರಣದಲ್ಲಿ ವಿಷಾನಿಲ ಸೇರ್ಪಡೆಗೊಳ್ಳುತ್ತಿದೆ. ಇದರಿಂದ ಇಂಗಾಲ ಹೆಚ್ಚಾಗುತ್ತಿದೆ. ಈ ಹಿನ್ನೆಲೆ ಪರಿಸರಕ್ಕೆ ವಿರುದ್ಧವಾದ ಯಾವುದೇ ಚಟುವಟಿಕೆ ನಡೆಸಬಾರದು ಎಂದು ಸಲಹೆ ನೀಡಿದರು.

ಎಲ್ಲಿ ನೋಡಿದರೂ ಕಸದ ರಾಶಿ ಕಾಣಸಿಗುತ್ತಿದೆ. ತ್ಯಾಜ್ಯ ಗಬ್ಬು ವಾಸನೆ ಬೀರುತ್ತಿದೆ. ಇದನ್ನು ಮುಕ್ತ ಮಾಡುವ ನಿಟ್ಟಿನಲ್ಲಿ ಈಗಲೇ ಎಚ್ಚೆತ್ತುಕೊಳ್ಳಬೇಕು. ಪ್ಲಾಸ್ಟಿಕ್‌ಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿ ಮರುಬಳಕೆಗೆ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ತಾಯಿಯ ಎದೆ ಹಾಲಿನಿಂದ ಹಿಡಿದು ತಿನ್ನುವ ಆಹಾರ, ಉಪ್ಪು ಸೇರಿದಂತೆ ಮನುಷ್ಯನ ರಕ್ತದ ಕಣಗಳಲ್ಲಿ ಮೈಕ್ರೋ ಪ್ಲಾಸ್ಟಿಕ್‌ಗಳು ಸೇರುತ್ತದೆ ಎಂದು ಎಚ್ಚರಿಸಿದರು. ಇಂದಿನ ಪರಿಸ್ಥಿತಿಯಲ್ಲಿ ಸಂಪೂರ್ಣವಾಗಿ ಪರಿಸರಸ್ನೇಹಿಯಾದ ಬದುಕು ಸಾಧ್ಯವಿಲ್ಲ. ಆದರೆ ಪರಿಸರ ಮಾಲಿನ್ಯದ ಘೋರ ದುಷ್ಪರಿಣಾಮವನ್ನು ತಡೆದು ಬದುಕಬೇಕು. ಪಶ್ಚಿಮ ಘಟ್ಟಗಳಿಗೆ ಪೆಟ್ಟು ಬೀಳದಂತೆ ನೈಸರ್ಗಿಕ ಸಂಪನ್ಮೂಲಗಳನ್ನು ಕಾಪಾಡಿಕೊಳ್ಳಬೇಕು ಎಂದರು. ಪ್ರತಿ ವ್ಯಕ್ತಿಗೆ ಆಮ್ಲಜನಕದ ಉಸಿರಾಟಕ್ಕೆ 7 ಮರಗಳು ಅವಶ್ಯ. ವಿಪರ್ಯಾಸವೆಂದರೆ ಬೆಂಗಳೂರಿನ ಹತ್ತು ಜನರಿಗೆ ಒಂದು ಮರವಿದೆ. ಈ ಹಿನ್ನೆಲೆ ಮರಗಿಡ ಬೆಳೆಸಿ ಪರಸರ ಸಂಕ್ಷಣೆ ಮಾಡಬೇಕು ಎಂದು ಸಲಹೆ ನೀಡಿದರು.

ಅಭ್ಯುದಯ ಮಹಿಳಾ ಸಮಾಜದ ಅಧ್ಯಕ್ಷೆ ಡಾ.ಸುಶೀಲಾ ನಾಗರಾಜು, ಗೌರವಾಧ್ಯಕ್ಷೆ ಲೋಕೇಶ್ವರಿ, ಉಪಾಧ್ಯಕ್ಷೆ ಶೈಲಜಾ, ಗೌರವ ಕಾರ್ಯದರ್ಶಿ ಜಯರಾಂ ವೇದಿಕೆಯಲ್ಲಿ ಉಪಸ್ಥಿತರಿದ್ದರು.

# ಮೈಸೂರಲ್ಲಿ ಜವಾರಿ ಕಾಳು ಮೇಳಕ್ಕೆ ಚಾಲನೆ

- ನೂರಕ್ಕೂ ಹೆಚ್ಚು ದ್ವಿದಳ ಧಾನ್ಯ ಪ್ರದರ್ಶನ, ಮಾರಾಟ
- ಸಾವಯವ ಕಾಳು ಖರೀದಿಗೆ ಮುಗಿಬಿದ್ದ ಜನ



ನಂಜರಾಜ ಬಹದ್ದೂರ್ ಕಲ್ಯಾಣ ಮಂಟಪದಲ್ಲಿ ನಡೆದ ಕಾಳು ಮೇಳಕ್ಕೆ ನಟಿ ಅಕ್ಷತಾ ಪಾಂಡವಪುರ ಚಾಲನೆ ನೀಡಿದರು.

ಮೈಸೂರು,ಏ.5(ಎಂಟಿವೈ)– ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಇದೇ ಮೊದಲ ಬಾರಿಗೆ ಎರಡು ದಿನಗಳ ಜವಾರಿ ಕಾಳು ಮೇಳ ಆರಂಭವಾಗಿದ್ದು, ಒಂದೇ ವೇದಿಕೆಯಲ್ಲಿ ಸಾವಯವ ಪದ್ಧತಿಯಲ್ಲಿ ಬೆಳೆದ ನೂರಕ್ಕೂ ಹೆಚ್ಚು ದ್ವಿದಳ ಧಾನ್ಯಗಳು ಗ್ರಾಹಕರನ್ನು ಆಕರ್ಷಿಸುತ್ತಿವೆ.

ಮೈಸೂರಿನ ಸಹಜ ಸಮೃದ್ಧ, ವಿಶ್ವ ಆಗ್ರೋ ಟೆಕ್ ಮತ್ತು ಬಯೋಟೆಕ್ ಸಂಯುಕ್ತಾಶ್ರಯದಲ್ಲಿ ಆಯೋಜಿಸಿರುವ ಜವಾರಿ ಕಾಳು ಮೇಳಕ್ಕೆ ಶನಿವಾರ ರಾಜ್ಯ ಪ್ರಶಸ್ತಿ ವಿಜೇತ ನಟಿ ಅಕ್ಷತಾ ಪಾಂಡವಪುರ ರಾಗಿ ಬೀಸುವ ಕಲ್ಲಿನಲ್ಲಿ ಅಲಸಂದೆಕಾಳನ್ನು ಬೀಸುವ ಮೂಲಕ ಚಾಲನೆ ನೀಡಿದರು.

ಬಳಿಕ ಅವರು ಮಾತನಾಡಿ, ಪ್ರತಿಯೊಬ್ಬರು ಪ್ರತಿದಿನ ಬೆಳಗಿನ ಉಪಹಾರದಿಂದ ರಾತ್ರಿ ಭೋಜನದವರೆಗೂ ತಾವು ಸೇವಿಸುವ ಆಹಾರದಲ್ಲಿ ಒಂದಲ್ಲಾ ಒಂದು ಕಾಳನ್ನು ಅವಲಂಬಿಸಿರುತ್ತೇವೆ. ಬಹುತೇಕ ಆಹಾರ ಪದಾರ್ಥ ತಯಾರಿಕೆಯಲ್ಲಿ ಕಾಳುಗಳನ್ನು ಬಳಸುತ್ತೇವೆ. ಆದರೆ, ಇತ್ತೀಚಿನ ದಿನಗಳಲ್ಲಿ ರಿಯಾಯಿತಿ ದರಕ್ಕಾಗಿ ಕಾಳುಗಳನ್ನು ಹೆಚ್ಚಾಗಿ ಆನ್‌ಲೈನ್ ಅಥವಾ ಸೂಪರ್ ಮಾರ್ಕೆಟ್‌ನಲ್ಲಿ ಖರೀದಿಸುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿದೆ. ಆರೋಗ್ಯ ಕಾಪಾಡಿಕೊಳ್ಳುವುದಕ್ಕಾಗಿ ಸಾವಯವ ಪದ್ಧತಿಯಲ್ಲಿ ಬೆಳೆದ ಕಾಳನ್ನು ಬಳಸುವುದು ಸೂಕ್ತ. ಅದರಲ್ಲೂ ರೈತರಿಂದ ನಡೆಯುವ ಮೇಳಗಳಲ್ಲಿ ಕಾಳು ಸೇರಿದಂತೆ ಇನ್ನಿತರ ದವಸ ಧಾನ್ಯ ಖರೀದಿಸುವುದರಿಂದ ರೈತರಿಗೆ ಉತ್ತೇಜನ ನೀಡಿದಂತಾಗುತ್ತದೆ. ಕೃಷಿ ಚಟುವಟಿಕೆಯನ್ನು ಪ್ರೋತ್ಸಾಹಿಸಿದಂತಾಗುತ್ತದೆ ಎಂದರು.

ಮೈಸೂರಿನಲ್ಲಿ ಸಹಜ ಸಮೃದ್ಧ ವೇದಿಕೆ ವತಿಯಿಂದ ಆಯೋಜಿಸಿರುವ ಕಾಳು ಮೇಳದಲ್ಲಿ 100ಕ್ಕೂ ಹೆಚ್ಚು ಬಗೆಯ ಕಾಳುಗಳನ್ನು ಪ್ರದರ್ಶನ ಹಾಗೂ ಮಾರಾಟಕ್ಕೆ ಇಟ್ಟಿರುವುದು ಶ್ಲಾಘನೀಯ. ಬೇರೆ ಬೇರೆ ಪ್ರದೇಶದಲ್ಲಿ ಬೇರೆ ಬೇರೆ ವಿಧದ ಕಾಳು ಬೆಳೆಯಲಾಗುತ್ತದೆ. ಉತ್ತರ ಕರ್ನಾಟಕ ಭಾಗದಲ್ಲಿ ಬೆಳೆಯುವ ಕಾಳನ್ನು ದಕ್ಷಿಣ ಕರ್ನಾಟಕದ ಜನರಿಗೂ, ದಕ್ಷಿಣ ಕರ್ನಾಟಕ ಭಾಗದಲ್ಲಿ ಬೆಳೆಯುವ ಕಾಳನ್ನು ಉತ್ತರ ಕರ್ನಾಟಕ ಭಾಗದ ಜನರಿಗೂ ತಲುಪಿಸಲು ಇಂತಹ ಮೇಳಗಳು ಸಹಕಾರಿಯಾಗುತ್ತವೆ. ಮೈಸೂರಿಗರು ಕಾಳುಗಳನ್ನು ಖರೀದಿಸುವ ಮೂಲಕ ರೈತರಿಗೆ ಪ್ರೋತ್ಸಾಹ ನೀಡಬೇಕು ಎಂದು ಮನವಿ ಮಾಡಿದರು.

ಸಹಜ ಸಮೃದ್ಧ ಸಂಸ್ಥೆಯ ನಿರ್ದೇಶಕ ಕೃಷ್ಣಪ್ರಸಾದ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ಚೇಂಜ್ ಮೇಕರ್ ಪ್ರಶಸ್ತಿ ಪುರಸ್ಕೃತೆ ಬೀಬಿಜಾನ್, ಕೃಷಿಕಲಾ ಸಂಸ್ಥೆಯ ಸಂಸ್ಥಾಪಕಿ ಸೀಮಾ ಪ್ರಸಾದ್, ವಿಶ್ವ ಆಗ್ರೋ ಟೆಕ್ ಸಂಸ್ಥಾಪಕ ಚಂದ್ರನ್ ಬೊಮ್ಮಯ್ಯ ಇನ್ನಿತರರಿದ್ದರು.

# ವಿದ್ಯುತ್ ಸಮಸ್ಯೆ ನಿವಾರಿಸಲು ಆಗ್ರಹಿಸಿ ರೈತರ ಪ್ರತಿಭಟನೆ

## ರೈತರನ್ನು ನಿರ್ಲಕ್ಷಿಸುತ್ತಿರುವ ಕೇಂದ್ರ, ರಾಜ್ಯ ಸರ್ಕಾರಗಳು



ವಿದ್ಯುತ್ ಸಮಸ್ಯೆಗಳನ್ನು ಬಗೆಹರಿಸಲು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘದಿಂದ ಶನಿವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಏ.5(ಜಿಎ)–ವಿದ್ಯುತ್ ಸಮಸ್ಯೆಗಳನ್ನು ಬಗೆಹರಿಸಲು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಮೈಸೂರು ತಾಲೂಕು ಘಟಕದ ವತಿಯಿಂದ ವಿಜಯನಗರದಲ್ಲಿರುವ ಸೆಸ್ಕ್ ಪ್ರಧಾನ ಕಚೇರಿ ಮುಂಭಾಗ ಶನಿವಾರ ಪ್ರತಿಭಟನೆ ನಡೆಸಲಾಯಿತು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೈತರನ್ನು ಸಂಪೂರ್ಣ ನಿರ್ಲಕ್ಷ್ಯ ಮಾಡುತ್ತಾ ಆಡಳಿತ ನಡೆಸುತ್ತಿವೆ. ಕೇಂದ್ರ ಸರ್ಕಾರ ವಿದ್ಯುತ್ ನೀತಿ ಜಾರಿಗೆ ತರಲು ಮುಂದಾಗಿದ್ದು, ಕೃಷಿ ಪಂಪ್‌ಸೆಟ್‌ದಾರರ ಆಧಾರ್ ಅನ್ನು ಲಿಂಕ್ ಮಾಡಿ, ಮುಂದೆ ಸ್ಮಾರ್ಟ್ ಮೀಟರ್ ಅಳವಡಿಸುವ ಹುನ್ನಾರ ನಡೆಸಿದೆ. ಹೊಸ ವಿದ್ಯುತ್ ಸಂಪರ್ಕ ಪಡೆಯಲು ರೈತರೇ ಲಕ್ಷಾಂತರ ರೂಪಾಯಿ ಹೊರೆ ಹೊರಬೇಕಾದ ಪರಿಸ್ಥಿತಿ ಉಂಟಾಗಿದೆ. ರೈತರ ಪಂಪ್‌ಸೆಟ್‌ಗೆ ನೀಡುತ್ತಿರುವ ವಿದ್ಯುತ್ ಅನ್ನು ಲೋಡ್ ಶೆಡ್ಡಿಂಗ್ ಮಾಡುತ್ತಿರುವುದರಿಂದ ಪ್ರತಿದಿನ ಬೆಳಗಿನ ಸಮಯದಲ್ಲಿ 7 ಗಂಟೆಗಳ ಕಾಲ ವಿದ್ಯುತ್ ನೀಡಲಾಗುತ್ತಿದೆ ಎಂದು ಹೇಳುತ್ತಿರುವುದು ಸುಳ್ಳು. ಹಲವಾರು ಕಡೆ 4–5 ಗಂಟೆ ಕೂಡ ವಿದ್ಯುತ್ ನೀಡುತ್ತಿಲ್ಲ ಎಂದು ಆರೋಪಿಸಿದರು.


ವಿದ್ಯುತ್ ದರವನ್ನು ಆಗಿಂದ್ದಾಗೆ ಹೆಚ್ಚಿಸುತ್ತಿರುವುದು ಸಾರ್ವಜನಿಕರಿಗೆ ಹಾಗೂ ರೈತರಿಗೆ ತೊಂದರೆಯಾಗುತ್ತಿದೆ. ಬೇಸಿಗೆ ಕಾಲ ಪ್ರಾರಂಭವಾಗಿದ್ದು, ಉಷ್ಣಾಂಶ ಅತಿ ಹೆಚ್ಚಿದ್ದು, ಕೃಷಿ ಪಂಪ್‌ಸೆಟ್ ಮೂಲಕ ವ್ಯವಸಾಯ ಮಾಡುವ ರೈತರಿಗೆ ವಿದ್ಯುತ್ ಸರಬರಾಜು ಸರಿಯಾದ ಸಮಯಕ್ಕೆ ಇಲ್ಲದಿರುವುದರಿಂದ ಹಲವಾರು ತೊಂದರೆ ಉಂಟಾಗುತ್ತಿದೆ ಎಂದು ದೂರಿದರು.

ಪ್ರತಿಭಟನೆಯಲ್ಲಿ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಮರಂಕಯ್ಯ, ಜಿಲ್ಲಾ ಕಾರ್ಯದರ್ಶಿ ನಾಗನಹಳ್ಳಿ ವಿಜೇಂದ್ರ, ಮೈಸೂರು ತಾಲೂಕು ಅಧ್ಯಕ್ಷ ಆನಂದೂರು ಪ್ರಭಾಕರ್, ಮುಖಂಡರಾದ ಮಂಡಕಳ್ಳಿ ಮಹೇಶ್, ಚಂದ್ರಶೇಖರ್, ರಾಘವೇಂದ್ರ, ಬಸಪ್ಪನಾಯಕ್, ಮೈದನಹಳ್ಳಿ ಮಹೇಶ್ ಇನ್ನಿತರರು ಪಾಲ್ಗೊಂಡಿದ್ದರು.

### ಹಕ್ಕೊತ್ತಾಯಗಳು

ಸರ್ಕಾರ ತೀರ್ಮಾನಿಸಿದಂತೆ ಪಂಪ್‌ಸೆಟ್‌ಗಳಿಗೆ ಪ್ರತಿ ದಿನ ಹಗಲಿನ ವೇಳೆ ಕನಿಷ್ಠ 7 ಗಂಟೆಗಳ ಕಾಲ ವಿದ್ಯುತ್ ನೀಡಬೇಕು. ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋದರೆ ನಿಗದಿತ ಕಾಲಾವಧಿಯೊಳಗೆ ಹೊಸ ಟ್ರಾನ್ಸ್‌ಫಾರ್ಮರ್ ಅಳವಡಿಸಬೇಕು. ತಾಂತ್ರಿಕ ತೊಂದರೆಗಳನ್ನು ಮುಂದಿಟ್ಟುಕೊಂಡು ವಿದ್ಯುತ್ ಸರಬರಾಜು ನಿಲ್ಲಿಸಬಾರದು. ರೈತರು ಹೊಸ ವಿದ್ಯುತ್ ಸಂಪರ್ಕ ಪಡೆಯಲು ಹಿಂದಿನ ರೀತಿಯೇ ಅಕ್ರಮ–ಸಕ್ರಮ ಜಾರಿಗೆ ತರಬೇಕು. ಹೊಸ ಸಂಪರ್ಕ ಪಡೆದುಕೊಳ್ಳಲು ರೈತರೇ ಸ್ವಂತ ವೆಚ್ಚ ಭರಿಸಬೇಕೆಂಬ ನಿಯಮ ಕೈಬಿಟ್ಟು, ಹಳೇ ಪದ್ಧತಿ ಮುಂದುವರೆಸಬೇಕು. ಸ್ಮಾರ್ಟ್ ಮೀಟರ್ ಅಳವಡಿಕೆ ಯೋಜನೆ ಕೈಬಿಡಬೇಕು. ವಿದ್ಯುತ್ ಖಾಸಗೀಕರಣ ಮಾಡಲು ಹೊರಟಿರುವುದನ್ನು ಸ್ಥಗಿತಗೊಳಿಸಬೇಕು. ಗೃಹ ಬಳಕೆ ವಿದ್ಯುತ್ ಕನಿಷ್ಠ ದರ ಮತ್ತು ವಿದ್ಯುತ್ ದರ ಏರಿಕೆ ಮಾಡಿರುವುದನ್ನು ಕೂಡಲೇ ಹಿಂಪಡೆಯಬೇಕು.

# ನರೇಂದ್ರ ಅವರಿಗೆ ಹುಟ್ಟುಹಬ್ಬದ ಶುಭಾಶಯ



ಹುಟ್ಟುಹಬ್ಬ ಆಚರಿಸಿಕೊಂಡ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ನರೇಂದ್ರ ಅವರನ್ನು ಕೆಪಿಸಿಸಿ ಸಂಯೋಜಕರಾದ ಬಂಡಿಪಾಳ್ಯ ವಿಜಯ್‌ಕುಮಾರ್, ಐಎನ್‌ಟಿಯುಸಿ ಯುವ ಘಟಕದ ಉಪಾಧ್ಯಕ್ಷ ನಾಗರಾಜ್, ರಾಜ್ಯ ಕಾರ್ಯದರ್ಶಿ ಪುಟ್ಟರಾಜ ಯಾದವ್, ಯುವ ಘಟಕದ ಕಾರ್ಯದರ್ಶಿ ನಾರಾಯಣ, ಕ್ಯಾತನಹಳ್ಳಿ ಗ್ರಾಪಂ ಉಪಾಧ್ಯಕ್ಷ ಪ್ರಸನ್ನ, ಉದ್ಯಮಿ ಪಡುವಾರಳ್ಳಿ ಹರೀಶ್, ಕಾಂಗ್ರೆಸ್ ಮುಖಂಡ ಬೆಳವಾಡಿ ಮಂಜುನಾಥ್, ಸುತ್ತೂರು ಗಾಪಂ ಮಾಜಿ ಅಧ್ಯಕ್ಷ ರವಿ, ಹಳೆ ಕಾಮನಕೊಪ್ಪಲು ಕರಿಗೌಡ, ಶಿವು, ಡಿಎಸ್‌ಎಸ್ ಮುಖಂಡ ಮುರುಡಗಳ್ಳಿ ಮಂಜುನಾಥ್, ಮಹೇಶ್ ಇತರರು ಅಭಿನಂದಿಸಿ, ಶುಭಾಶಯ ಕೋರಿದರು.

# ಕುಂಬಾರಕೊಪ್ಪಲು ಬಳಕೆದಾರರ ಸಹಕಾರ ಸಂಘಕ್ಕೆ ಆಯ್ಕೆ...



ಕುಂಬಾರಕೊಪ್ಪಲು ಬಳಕೆದಾರರ ಸಹಕಾರ ಸಂಘದ ಅಧ್ಯಕ್ಷರಾಗಿ ಮಂಜಪ್ಪ, ಉಪಾ ಧ್ಯಕ್ಷರಾಗಿ ಶಿವಕುಮಾರ್ ಅವಿರೋಧವಾಗಿ ಆಯ್ಕೆಯಾದರು. ನಿರ್ದೇಶಕರಾಗಿ ವೈ.ಭೈರಪ್ಪ, ತಿಮ್ಮಪ್ಪ, ಸಿದ್ದೇಗೌಡ, ಸತೀಶ್ ಚಂದ್ರ, ಶಿವಣ್ಣ, ಸಿದ್ದಮ್ಮ, ಪುಟ್ಟಮ್ಮ, ಟಿ.ರಘು, ಶಿವ ಕುಮಾರ್ (ಶರತ್)ಆಯ್ಕೆಯಾದರು. ಈ ವೇಳೆ ಚೇತನ್ ವಿಷಕಂಠೇಗೌಡ, ರಾಮ್ ಪ್ರಸಾದ್, ಮೈಸೂರು ರಕ್ಷಣಾ ವೇದಿಕೆ ಉಪಾಧ್ಯಕ್ಷ ಕುಮಾರ್‌ಗೌಡ, ಶ್ರೀನಿವಾಸ್, ತಮ್ಮಣ್ಣ, ಶಿವು, ಸಂಜು ಉಪಸ್ಥಿತರಿದ್ದರು.

# ನಾಳೆ ವಿಶ್ವ ಆರೋಗ್ಯ ದಿನಾಚರಣೆ ಅಂಗವಾಗಿ ಜಾಗೃತಿ ಜಾಥಾ

ಮೈಸೂರು, ಏ.5– ವಿಶ್ವ ಆರೋಗ್ಯ ದಿನಾಚರಣೆಯ ಪ್ರಯುಕ್ತ ಏ.7 ರಂದು ಬೆಳಗ್ಗೆ 7 ಗಂಟೆಯಿಂದ 8 ಗಂಟೆಯವರೆಗೆ ಹಾರ್ಟ್ ಸಂಸ್ಥೆಯು ಶ್ರೀ ನಟರಾಜ ನರ್ಸಿಂಗ್ ಕಾಲೇಜಿನ ಸಹಯೋಗದೊಂದಿಗೆ ಜಾಥಾ ನಡೆಸಲು ಆಯೋಜಿಸಿದೆ.

ಈ ಜಾಥಾವು ಮೈಸೂರಿನ ಗಾಂಧಿ ವೃತ್ತದಿಂದ ಆರಂಭವಾಗಿ ಚಲುವಾಂಬ ಆಸ್ಪತ್ರೆಯ ಆವರಣದಲ್ಲಿ ಮುಕ್ತಾಯಗೊಳ್ಳಲಿದ್ದು, ಈ ಜಾಥಾಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸೇವೆಗಳ ಮೈಸೂರು ವಿಭಾಗದ ವಿಭಾಗೀಯ ಸಹ ನಿರ್ದೇಶಕ ಡಾ. ಕೆ.ಹೆಚ್. ಪ್ರಸಾದ್ ಚಾಲನೆ ನೀಡಲಿದ್ದಾರೆ.

# ಇಂದು ಗಾನೋತ್ಸವ

ಮೈಸೂರು,ಏ.5(ಜಿಎ)–ಗಾಯಕಿ ಎಸ್.ಜಾನಕಿ ಮತ್ತು ಡಾ.ರಾಜ್‌ಕುಮಾರ್ ಹುಟ್ಟುಹಬ್ಬದ ಅಂಗವಾಗಿ ಎಸ್.ಜಾನಕಿ ಮೆಲೋಡಿಸ್ ಸಂಸ್ಥೆ ವತಿಯಿಂದ ಏ.6 ರಂದು ನಾದಬ್ರಹ್ಮ ಸಂಗೀತ ಸಭಾದಲ್ಲಿ ಗಾನೋತ್ಸವ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಮುಖ್ಯಸ್ಥೆ ಪಿ.ಕೆ.ಲಕ್ಷ್ಮಿದೇವಮ್ಮ ತಿಳಿಸಿದರು. ಅಂದು ಕನ್ನಡದ ಸುಮಾರು 50 ಗೀತೆ ಹಾಡಲಾಗುವುದು. ಇದು ಉಚಿತ ಪ್ರವೇಶದ ಕಾರ್ಯಕ್ರಮ ಎಂದರು.

# ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ಶ್ರೀರಾಮಮಂದಿರ:** ಶ್ರೀ ರಾಮಚಂದ್ರ ಸ್ವಾಮಿಗಳವರ 50ನೇ ವರ್ಧಂತ್ಯುತ್ಸವ, ಸೀತಾ ಕಲ್ಯಾಣ, ಶ್ರೀರಾಮ ಪಟ್ಟಾಭಿಷೇಕ, ಹನುಮಂತೋತ್ಸವ, ಕುಂಭಾಭಿಷೇಕ ಮಹೋತ್ಸವ, ಬೆಳಗ್ಗೆ 7ಕ್ಕೆ ಶ್ರೀರಾಮನವಮಿ ಪ್ರಯುಕ್ತ ವಿಶೇಷ ಅಭಿಷೇಕ, ಪೂಜೆ, ಅಲಂಕಾರ, ಶ್ರೀ ಆದಿತ್ಯ ಗ್ರಹ ಹೋಮ, ಬೆಳಗ್ಗೆ 10ರಿಂದ ವಿದ್ವಾನ್ ಹೆಚ್.ಎಲ್. ಶಿವಶಂಕರಸ್ವಾಮಿ ಮತ್ತು ತಂಡದವರಿಂದ ವಿಶೇಷ ತಾಳವಾದ್ಯ ಸಂಗೀತ ಲಹಲಹರಿ ಕಾರ್ಯಕ್ರಮ, ಸಂಜೆ 6 ರಿಂದ ಶ್ರೀ ಸೀತಾರಾಮ ಭಜನಾ ಮಂಡಳಿಯಿಂದ ಭಜನೆ, ಸಂಜೆ 7.30 ರಿಂದ ವಿದುಷಿ ಶ್ರೀಮತಿ ರೇಖಾ ವೆಂಕಟೇಶ್ ಮತ್ತು ಶಿಷ್ಯ ವೃಂದದವರಿಂದ ಗಾಯನ, ಸ್ಥಳ: ಶ್ರೀರಾಮಮಂದಿರ, ಜಯನಗರ.

■ **ಸಿಗ್ಮಾ ಆಸ್ಪತ್ರೆ :** ವಿಶ್ವ ಕಿಡ್ನಿ ದಿನಾಚರಣೆ ಪ್ರಯುಕ್ತ ಉಚಿತ ಕಿಡ್ನಿ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಸಿಗ್ಮಾ ಆಸ್ಪತ್ರೆ, ಸರಸ್ವತಿಪುರಂ, ಬೆಳಗ್ಗೆ 8 ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಕುತ್ತಿಗೆ ಹಾಗೂ ಬೆನ್ನು ನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಅಧಿಕ ರಕ್ತದೊತ್ತಡ ಚಿಕಿತ್ಸಾ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ,. ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ.

■ **ಡಾ. ಚಂದ್ರಶೇಖರ ಫೌಂಡೇಷನ್ ಟ್ರಸ್ಟ್, ಕಾವೇರಿ ಆಯುರ್ವೇದಿಕ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ :** ಸ್ವರ್ಣಪ್ರಾಶನ ಕಾರ್ಯಕ್ರಮ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್, ಕೆಬಿಎಲ್ ಲೇಔಟ್, ಬೆಳಗ್ಗೆ 9.30 ರಿಂದ.

■ **ಪರಮಹಂಸ ಯೋಗ ಮಹಾವಿದ್ಯಾಲಯ ಇಂಟರ್ ನ್ಯಾಷನಲ್ ಯೋಗ ಸ್ಕೂಲ್ :** ಶ್ರೀರಾಮ ನವಮಿ, ಬೆಳಗ್ಗೆ 9 ರಿಂದ ಶ್ರೀ ರಾಮ ಭಜನೆ, ಉಪಸ್ಥಿತರು: ಜಿಲ್ಲಾ ಆಯುಷ್ ಅಧಿಕಾರಿ ಡಾ.ರೇಣುಕಾದೇವಿ, ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಕೆ.ದಶರಥ್, ಪ್ರೊ.ಎಸ್. ಗಿರೀಶ್, ಯೋಗಾಚಾರ್ಯ ಎಂ.ಎಸ್.ರಮೇಶ್‌ಕುಮಾರ್, ಯೋಗ ಪ್ರವೀಣ ಶಿವಪ್ರಕಾಶ್ ಗುರೂಜಿ, ಸ್ಥಳ: 7ನೇ ಕ್ರಾಸ್, ಯೋಗ ಪಾರ್ಕ್ ಪಕ್ಕ, ರಾಮಕೃಷ್ಣನಗರ.

■ **ಸ್ಪಂದನ ಸಾಂಸ್ಕೃತಿಕ ಪರಿಷತ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ವಿಸ್ಮಯ ಪ್ರಕಾಶನ :** ರಾಜ್ಯ ಮಟ್ಟದ 'ಯುಗಾದಿ ಕವಿ–ಕಾವ್ಯ ಸಂಭ್ರಮ'ದ ಅಂಗವಾಗಿ ದಿನವಿಡೀ ಯುಗಾದಿ ಕವಿಮೇಳ, ನಾಲ್ವಡಿ ಕೃಷ್ಣರಾಜ ಒಡೆಯರ್ ಸಮಾಜಮುಖಿ ಹಾಗೂ ಸ್ವಾಮಿ ವಿವೇಕಾನಂದ ಸದ್ಭಾವನಾ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿವಿ ವಿಶ್ರಾಂತ ಕುಲಪತಿ ಡಾ.ಸಬಿಹಾ ಭೂಮಿಗೌಡ, ಅಧ್ಯಕ್ಷತೆ: ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಪ್ರಶಸ್ತಿ ಪ್ರದಾನ: ಕವಯಿತ್ರಿ ಡಾ. ಲತಾ ರಾಜಶೇಖರ್ ಹಾಗೂ ಎಡಿಸಿ ಡಾ.ಪಿ. ಶಿವರಾಜು, ಮುಖ್ಯ ಅತಿಥಿಗಳು: ಮೈಸೂರು ವಿವಿ ಮಾಜಿ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ. ನಿಂಗರಾಜ್ ಗೌಡ, ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಶಿಕ್ಷಕ ಲಯನ್ ನಾ. ಗಂಗಾಧರಪ್ಪ, ಮಂಡ್ಯದ ಹಿರಿಯ ಸಾಹಿತಿ ಮತ್ತು ಸಂಘಟಕ ಬನ್ನಂಗಾಡಿ ಸಿದ್ದಲಿಂಗಯ್ಯ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10ಕ್ಕೆ.



## ಇಂದಿನ ಪಂಚಾಂಗ

**6.04.2025 ಭಾನುವಾರ, ಮಳೆ ನಕ್ಷತ್ರ: ರೇವತಿ 31.03.2025 ರಿಂದ 12.04.2025 ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ನವಮಿ, ನಕ್ಷತ್ರ: ಪುನರ್ವಸು, ರಾಹುಕಾಲ: ಸಂಜೆ 4.30ರಿಂದ 6ರವರೆಗೆ**

■ **ಸಹಜ ಸಮೃದ್ಧ:** ಜವಾರಿ ಕಾಳು ಮೇಳ, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ಬೆಳಗ್ಗೆ 10ರಿಂದ.

■ **ಬಿಎಸ್‌ಹೆಚ್‌ಐಪಿ:** ವಿಶ್ವ ಆರೋಗ್ಯ ದಿನದ ಅಂಗವಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ಬೆಳಗ್ಗೆ 10 ರಿಂದ ಸಂಜೆ 4 ರವರೆಗೆ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ ಬೆಳಗ್ಗೆ 10ಕ್ಕೆ.

■ **ಬಸವ ಸಮಿತಿ :** ಶರಣ ಸಂಗಮ, ಡಾ. ಶ್ರೀ ಶಿವಕುಮಾರ ಸ್ವಾಮಿಗಳವರ 118ನೇ ಜಯಂತಿ, ಬಿ. ಶಿವಕುಮಾರಸ್ವಾಮಿ ಅವರಿಂದ 12ನೇ ಶತಮಾನದಲ್ಲಿ ಮಹಿಳೆಯರ ಸ್ಥಾನಮಾನ ಕುರಿತು ಪ್ರವಚನ, ಮಾದೇಶ್ ಅವರಿಂದ ವಚನ ಗಾಯನ, ಅಧ್ಯಕ್ಷತೆ : ಬಸವ ಸಮಿತಿ ಉಪಾಧ್ಯಕ್ಷೆ ಶುಭಮಣಿ, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಎಐಡಿಎಸ್‌ಓ ಮೈಸೂರು ಜಿಲ್ಲಾ ಸಮಿತಿ :** ಜಿಲ್ಲಾ ಮಟ್ಟದ ವ್ಯಕ್ತಿತ್ವ ವಿಕಸನ ಶಿಬಿರ, ಸ್ಥಳ: ಎಐಡಿಎಸ್‌ಓ ಕಚೇರಿ, ಡಿ. ಸುಬ್ಬಯ್ಯ ರಸ್ತೆ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ರಾಜ್ಯ ವೈಚಾರಿಕ ಚಿಂತಕರ ವೇದಿಕೆ, ನಮೋ ಯೋಗ ಭವನ:** ವಿಶ್ವ ಮಹಿಳಾ ದಿನಾಚರಣೆ, ಮೈಸೂರು ಮಾಣಿಕ್ಯ ರತ್ನ ಪ್ರಶಸ್ತಿ ಪ್ರದಾನ, ಉದ್ಘಾಟನೆ: ಕಾರ್ಯ ನಿರ್ವಾಹಕ ಇಂಜಿನಿಯರ್ ಎಸ್.ಬಿ.ಅನಿತಾ, ಸಾಧಕರಿಗೆ ಗೌರವ ಸಮರ್ಪಣೆ: ಮಾಜಿ ಅಧ್ಯಕ್ಷೆ ಪಿ.ರಾಜೇಶ್ವರಿ, ಸ್ಥಳ: ನಮೋ ಯೋಗ ಭವನ, ರಾಮಾನುಜ ರಸ್ತೆ, ಸಂಜೆ 4ಕ್ಕೆ.

■ **ಸಮಾಜವಾದಿ ಅಧ್ಯಯನ ಕೇಂದ್ರ ಟ್ರಸ್ಟ್ :** ಪ್ರಸನ್ನ ಅವರ ಆಕ್ಟಿಂಗ್ ಅಂಡ್ ಬಿಯಾಂಡ್ ಪುಸ್ತಕ ಬಿಡುಗಡೆ ಸಮಾರಂಭ, ಉಪಸ್ಥಿತರು : ಲೇಖಕ ಶಶಿಧರ ಡೋಂಗ್ರೆ, ಲೇಖಿಕ ಪ್ರೀತಿ ನಾಗರಾಜ್, ರಂಗ ನಿರ್ದೇಶಕ ಪ್ರಸನ್ನ, ಸ್ಥಳ: ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ, ಹಾರ್ಡ್ವಿಕ್ ಶಾಲೆ ಆವರಣ, ಜೆಎಲ್‌ಬಿ ರಸ್ತೆ, ಸಂಜೆ 5ಕ್ಕೆ.

■ **ಶ್ರೀ ಗಾಯತ್ರಿ ರಾಮಮಂದಿರ :** ಶ್ರೀ ರಾಮ ತಾರಕ ಮಂತ್ರ, ಶ್ರೀ ಮಹಾಲಕ್ಷ್ಮಿ ಭಜನಾ ಮಂಡಳಿಯ ಶ್ರೀಮತಿ ಸುಧಾ ಸುಂದರೇಶ್ವರನ್ ತಂಡದವರಿಂದ ದೇವರನಾಮಗಳು, ಸ್ಥಳ: ರಾಮಮಂದಿರ, ರಾಜೇಂದ್ರನಗರ, ಸಂಜೆ 6ಕ್ಕೆ.

■ **ಶ್ರೀ ಸೀತಾರಾಮ ದೇವಾಲಯ :** ಶ್ರೀರಾಮನವಮಿ, ಬೆಳಗ್ಗೆ 10.30ರಿಂದ ವಿಶೇಷ ಅಭಿಷೇಕ, ಸುಗಂಧ ಭರಿತ ಪುಷ್ಪಾಲಂಕಾರ, ಸಂಜೆ 6ರಿಂದ ಶ್ರೀನಿವಾಸ ತಂಡದವರಿಂದ ದೇವರನಾಮ, ಸ್ಥಳ: ಶ್ರೀ ಸೀತಾರಾಮ ದೇವಾಲಯ, ಸಿದ್ಧಾರ್ಥನಗರ.

## ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ–ಡಾ.ವಿ.ರಂಗನಾಥ್, 6.15–ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಸಿ. ವಿಶ್ವನಾಥ್, ಪಿ.ಎಸ್. ರಂಜನಿ, ವ್ಯಾಖ್ಯಾನ–ಡಾ.ಹೆಚ್.ಎಂ. ಕಲಾಶ್ರೀ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಯೋಗ ಕುರಿತ ವಿಶೇಷ ಸರಣಿ–ಮಹಾಯೋಗ, ವಿಷಯ: ಮಕ್ಕಳಿಗಾಗಿ ಯೋಗ, ಭಾಗವಹಿಸುತ್ತಾರೆ–ಪ್ರತಿಮಾ. ಡಿ, ನಿರ್ಮಾಣ–ನಂದನ್‌ಕುಮಾರ್. ಎಲ್. ಒ, 8.35 ಕನ್ನಡ ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ–ವಿಶ್ವ ಆರೋಗ್ಯ ದಿನಾಚರಣೆ ಸಂದರ್ಭದಲ್ಲಿ ಆರೋಗ್ಯಕರ ಆರಂಭ ಆಶಾದಾಯಕ ಭವಿಷ್ಯ ಕುರಿತು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಹಾಗೂ ಚೆಲುವಾಂಬ ಆಸ್ಪತ್ರೆಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರಾದ ಡಾ.ಶಿಲ್ಪಾ. ಎನ್. ವಿಜಯ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ –ಕಥೆ ಹೇಳೀಯೋ ಹಾಡು ಹೇಳೀಯೋ ನೇರ ಫೋನ್ ಇನ್ ಕಾರ್ಯಕ್ರಮ, 10.30 KRISH -TRISH and Balty boy ನಾವು ಭಾರತೀಯರು–ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ, 10.45 ಮಕ್ಕಳ ಮಂಟಪ ಮೈಸೂರಿನ ವಿಜಯನಗರ 4ನೇ ಹಂತದಲ್ಲಿರುವ ರಾಷ್ಟ್ರೋತ್ಥಾನ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.10 ಅಯೋಧ್ಯೆಯ ಶ್ರೀರಾಮ ಜನ್ಮಭೂಮಿ ಮಂದಿರ ಹಾಗೂ ಕನಕಭವನದಲ್ಲಿ ನಡೆಯಲಿರುವ ಶ್ರೀರಾಮನವಮಿ ಉತ್ಸವದ ನೇರ ವೀಕ್ಷಕ ವಿವರಣೆ **ಮಧ್ಯಾಹ್ನ:** 12.35 ದೇವರನಾಮ, 12.45 ಜನಪದ ಸಂಗೀತ–ಟಿ. ನರಸೀಪುರ ತಾಲೂಕು ಬನ್ನೂರು ಹೋಬಳಿ ಯಾಚೇನಹಳ್ಳಿಯ ಚೆನ್ನಾಜಮ್ಮ ಮತ್ತು ಸಂಗಡಿಗರಿಂದ ದಂಡಿನ ಮಾರಮ್ಮನ ಹಾಡು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ ಮಹಿಳೆಯರ ನೇತೃತ್ವದಲ್ಲಿ ಅಭಿವೃದ್ಧಿ ಈ ವಿಷಯ ಕುರಿತು ಮಾಹಿತಿ ನೀಡುತ್ತಾರೆ, ಪತ್ರಕರ್ತೆ ದಿವ್ಯಹೆಗಡೆ ಕಬ್ಬಿನಗದ್ದೆ, 1.20 ಭಾವಗೀತೆಗಳು–ಡಾ.ಎ.ಡಿ. ಶ್ರೀನಿವಾಸನ್, 2.40 ಕನ್ನಡ ಚಲನಚಿತ್ರ ಧ್ವನಿ ವಾಹಿನಿ –ಶ್ರೀ ಸತ್ಯನಾರಾಯಣ ಪೂಜಾಫಲ, 3.00 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಯಕ್ಷಗಾನ–ತಾಳಮದ್ದಲೆ, ಪ್ರಸಂಗ–ಶ್ರೀರಾಮ ನಿರ್ಯಾಣ, ಪ್ರಸ್ತುತಿ–ಪುತ್ತೂರು ಬೆಟ್ಟಂಪಾಡಿಯ ಕರ್ನಾಟಕ ಯಕ್ಷ ಭಾರತಿಯ ಕಲಾವಿದರು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.51 ಕೃಷಿರಂಗ, ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್.ಕೇಶವಮೂರ್ತಿ, ಆರ್.ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿ ಲೋಕ, ಕೃಷಿ ದರ್ಪಣ, ವಾರದ ಕೃಷಿರಂಗ–ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ ಪ್ರಸ್ತುತಿ: ಆರ್.ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ– ಮೈಸೂರಿನ ರಾಜಮಾತೆ ರಾಣಿ ಕೆಂಪನಂಜಮ್ಮಣ್ಣಿ, ಮಾತನಾಡುತ್ತಾರೆ ಗಜಾನನ ಶರ್ಮ, 8.00 ನಾದ ಮೀಮಾಂಸೆ–ಕರ್ನಾಟಕ ಶಾಸ್ತ್ರೀಯ ಸಂಗೀತದ ರೂಪು ರೇಷೆ ಕುರಿತ ಸರಣಿ ಸಂಶೋಧನೆ ಹಾಗೂ ಸಾಹಿತ್ಯ–ಡಾ.ಸಿ.ಎ.ಶ್ರೀಧರ್, ಪ್ರಸ್ತುತಿ–ಜಿ.ಕೆ.ರವೀಂದ್ರಕುಮಾರ್, 9.15–ರಂಗಗೀತೆಗಳು–ಜಿ.ಆರ್.ರಾಮಚಂದ್ರ, 10.00 ರವಿವಾರದ ಅಖಿಲ ಭಾರತ ಸಂಗೀತ ಸಭಾ, ವಿದುಷಿ. ಶ್ರಾಬಣಿ ಬಿಸ್‌ವಾಸ್–ಸಿತಾರ್ ವಾದನ

■ **ರಂಗಾಯಣ :** ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ಆ ಊರು ಈ ಊರು ನಾಟಕ ಪ್ರದರ್ಶನ, ನಿರ್ದೇಶನ : ಯತೀಶ್ ಎನ್. ಕೊಳ್ಳೇಗಾಲ, ಸ್ಥಳ: ಭೂಮಿಗೀತ, ರಂಗಾಯಣ, ಸಂಜೆ 6.30ಕ್ಕೆ.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟೆಬಲ್ ಟ್ರಸ್ಟ್ :** ಶ್ರೀ ರಾಮೋತ್ಸವ, ಪ್ರವೀಣ್ ಗೋಡ್ಖಿಂಡಿ, ಶಡಜ್ ಗೋಡ್ಖಿಂಡಿ ಅವರಿಂದ ದ್ವಂದ್ವ ಕೊಳಲು ವಾದನ, ಪಂಡಿತ್ ಇಶಾನ್ ಘೋಶ್–ತಬಲ, ಸ್ಥಳ: ಆಲಮ್ಮನವರ ಛತ್ರ ಕುಂಚಿಟಿಗರ ಸಂಘ, ಶ್ರೀರಾಮಪೇಟೆ, ಸಂಜೆ 6.30 ರಿಂದ.

■ **ಶ್ರೀ ರಾಮ ಸೇವಾ ಮಂಡಲಿ :** 72ನೇ ವರ್ಷದ ಶ್ರೀ ರಾಮೋತ್ಸವ, ಬೆಳಗ್ಗೆ 9ಕ್ಕೆ ವಿಶೇಷ ಪೂಜಾ ಕಾರ್ಯಕ್ರಮಗಳು, ಸಂಜೆ 6.30ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ, ಉದ್ಘಾಟನೆ: ಶಾಸಕ ಟಿ.ಎಸ್.ಶ್ರೀವತ್ಸ, ವಿದ್ವಾನ್ ಹೆಚ್.ಎಲ್. ಶಿವಶಂಕರಸ್ವಾಮಿ ಮತ್ತು ವೃಂದದವರಿಂದ ಲಯಲಹರಿ ವಿಶೇಷ ತಾಳವಾದ್ಯ ಕಛೇರಿ, ಸ್ಥಳ: ಶ್ರೀರಾಮ ಸೇವಾ ಮಂಡಲಿ, ವಿದ್ಯಾರಣ್ಯಪುರಂ.

■ **ಶ್ರೀ ಶಂಕರ ಜಯಂತಿ ಸಭಾ :** ಶ್ರೀರಾಮನವಮಿ ಕಾರ್ಯಕ್ರಮಗಳು, ಬೆಳಗ್ಗೆ 9.30ರಿಂದ ಅಭಿಷೇಕ, ಅರ್ಚನೆ, ಪೂಜಾ ಕಾರ್ಯಕ್ರಮ, ಮಹಾಮಂಗಳಾರತಿ, ಸಂಜೆ 5ರಿಂದ ವಿದುಷಿ ಭಾಗ್ಯಲಕ್ಷ್ಮಿ ಕೆ. ಮತ್ತು ಕು. ನಾಗಶ್ರೀ ಹೆಚ್.ಎಲ್. ಹಾಗೂ ಸಂಗಡಿಗರಿಂದ ಕರ್ನಾಟಕ ಸಂಗೀತ, ಸ್ಥಳ: ಸಮುದಾಯ ಭವನ, ತೆಂಗಿನ ತೋಪು, ಸರಸ್ವತಿಪುರಂ.

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್ :** 16ನೇ ವರ್ಷದ ವಸಂತ ನವರಾತ್ರಿ ಮಹೋತ್ಸವ, ಬೆಳಗ್ಗೆ 8.30ರಿಂದ ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ನವಾವರಣ ಪೂಜೆ, ಶ್ರೀಚಕ್ರಾರ್ಚನೆ, ಸಂಜೆ 5.30ರಿಂದ ಸಗ್ರಹ ಮಖ ನವಚಂಡಿಯಾಗ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮಿಪುರಂ.

■ **ಶ್ರೀರಾಮ ಸೇವಾ ಮಂಡಲಿ ಚಾರಿಟೆಬಲ್ ಟ್ರಸ್ಟ್:** 31ನೇ ಶ್ರೀ ರಾಮನವಮಿ ಸಂಗೀತೋತ್ಸವ, ಬೆಳಗ್ಗೆ 10.30ಕ್ಕೆ ಶ್ರೀ ರಾಮತಾರಕ ಹೋಮ (ಶ್ರೀರಾಮ ಸಹಸ್ರನಾಮ ಹೋಮ), ಸಂಜೆ 5.15ಕ್ಕೆ ತನುಶ್ರೀ ಚಿನ್ಮಯಿ–ಶ್ರೀಲಲಿತ–ಸುಮುಖ ಅವರಿಂದ ಗಾಯನ, ವಿದ್ವಾನ್ ಹೆಚ್.ಕೆ. ವೆಂಕಟರಾಮ ಅವರಿಂದ ದ್ವಂದ್ವ ಪಿಟೀಲು ವಾದನ, ವಿದ್ವಾನ್ ಅನೂರು ಅನಂತಕೃಷ್ಣ ಶರ್ಮ–ಮೃದಂಗ, ವಿದ್ವಾನ್ ಜಿ.ಎಸ್. ರಾಮಾನುಜನ್–ಘಟಂ, ಸ್ಥಳ: ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿ.ವಿ.ಮೊಹಲ್ಲಾ.

■ **ಜಾಗತಿಕ ಲಿಂಗಾಯತ ಮಹಾಸಭಾ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ಮೈಸೂರು ನಗರ:** ವಚನ ದರ್ಶನ ಮಿಥ್ಯ ವರ್ಸಸ್ ಸತ್ಯ ಗ್ರಂಥ ಬಿಡುಗಡೆ ಸಮಾರಂಭ, ಸಾನ್ನಿಧ್ಯ: ಶ್ರೀ ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ: ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಧ್ವಜಾರೋಹಣ: ಶ್ರೀ ಸಿದ್ದಮಲ್ಲ ಸ್ವಾಮೀಜಿ, ಸಾನ್ನಿಧ್ಯ: ಶ್ರೀ ಶರತ್‌ಚಂದ್ರ ಸ್ವಾಮೀಜಿ, ಸ್ಥಳ: ಶ್ರೀ ನಟರಾಜ ಸಭಾ ಭವನ, ಶ್ರೀ ಹೊಸಮಠ, ಬೆಳಗ್ಗೆ 11ಕ್ಕೆ.

■ **ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನ, ಧಾರ್ಮಿಕ ದತ್ತಿ ಇಲಾಖೆ:** ಚಾಂದ್ರಮಾನ ಶ್ರೀ ರಾಮ ನವಮಿ ಪ್ರಯುಕ್ತ ಶನಿ ಮಹಾಶಾಂತಿ ನವಗ್ರಹ ಹೋಮ ಮಹಾಗಣಪತಿ ಹೋಮ, ಬೆಳಗ್ಗೆ 8.30 ರಿಂದ 10ವರೆಗೂ ಹಾಗೂ ಬೆಳಗ್ಗೆ 11:30ಕ್ಕೆ ಪೂರ್ಣಾಹುತಿ ಮಹಾಮಂಗಳಾರತಿ ಆನಂತರ ಭಕ್ತಾದಿಗಳಿಗೆ ತೀರ್ಥ ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನ, ಇರ್ವಿನ್ ರಸ್ತೆ.

■ **ವಿಶ್ವ ಮೈತ್ರಿ ಬುದ್ಧ ವಿಹಾರ, ತಥಾಗತ ಬುದ್ಧ ವಿಹಾರ, ದಲಿತ ವಿದ್ಯಾರ್ಥಿ ಒಕ್ಕೂಟ ಮತ್ತು ಸಂಶೋಧಕರ ಸಂಘ, ಮೈಸೂರು ವಿವಿ :** ಮಾನವ ಮೈತ್ರಿ ಸಂಪದ ಸಮ್ಮೇಳನ, ಗೋಷ್ಠಿ –1, ಬೆಳಗ್ಗೆ 9 ರಿಂದ ದುಂಡು ಮೇಜಿನ ಸಭೆ, ಸಾನ್ನಿಧ್ಯ : ಬಂತೆ ದೀನಾ, ಅಧ್ಯಕ್ಷತೆ : ರಾಜ್ಯ ಎಸ್‌ಸಿ, ಎಸ್‌ಟಿ ನೌಕರರ ಸಂಘದ ಅಧ್ಯಕ್ಷ ಚಂದ್ರಶೇಖರಯ್ಯ; ಗೋಷ್ಠಿ–2, ಬೆಳಗ್ಗೆ 11ರಿಂದ ಸಾನ್ನಿಧ್ಯ: ಬಂತೇ ಸುಗತಪಾಲ, ಜ್ಞಾನಪ್ರಕಾಶ ಸ್ವಾಮೀಜಿ, ಉದ್ಘಾಟನೆ: ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಉಪಸ್ಥಿತರು : ಸಂಸದ ಸುನೀಲ್ ಬೋಸ್, ಶಾಸಕರಾದ ಡಾ.ಯತೀಂದ್ರ, ದರ್ಶನ್ ಧ್ರುವನಾರಾಯಣ್, ಕೆ.ಹರೀಶ್‌ಗೌಡ, ಶ್ರೀವತ್ಸ, ಅಹಿಂದ ಜವರಪ್ಪ; ಗೋಷ್ಠಿ–3, ಮಧ್ಯಾಹ್ನ 2ರಿಂದ, ಸಾನ್ನಿಧ್ಯ: ಸುಗತಪಾಲ ಬಂತೇಜಿ, ಅಧ್ಯಕ್ಷತೆ: ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್, ಸ್ಥಳ:ವಿಜ್ಞಾನ ಭವನ, ಮಾನಸಗಂಗೋತ್ರಿ.

■ **ಶ್ರೀ ಚಾಮುಂಡೇಶ್ವರಿ ದೇವಸ್ಥಾನ ಜೈ ಅನ್ನಪೂರ್ಣೇಶ್ವರಿ ಟ್ರಸ್ಟ್:** ಶ್ರೀ ದುರ್ಗಾ ಹೋಮ, 19ನೇ ವರ್ಷದ ಪ್ರತಿಷ್ಠಾಪನೆ, ಬ್ರಹ್ಮ ಕಲಶಾಭಿಷೇಕ ಮಹೋತ್ಸವ, ಸಂಜೆ 6ಕ್ಕೆ ಶ್ರೀ ದೇವರ ಉತ್ಸವ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸ್ಥಳ: ಶ್ರೀ ಚಾಮುಂಡೇಶ್ವರಿ ದೇವಸ್ಥಾನ, ರೈಲ್ವೆ ಕಾಲೋನಿ.

### ಮಾದಹಳ್ಳಿಯಲ್ಲಿಂದು, ಮೈಸೂರು ತಾಲೂಕು

■ **ವ್ಯವಸ್ಥಾಪಕರು:** ಶ್ರೀ ವೀರಭದ್ರೇಶ್ವರ, ಶ್ರೀ ಮಹದೇಶ್ವರ, ಶ್ರೀ ಬಸವೇಶ್ವರಸ್ವಾಮಿ ಮತ್ತು ಶ್ರೀ ಸಿದ್ದಪ್ಪಾಜಿ ದೇವಸ್ಥಾನಗಳ ಜೀರ್ಣೋದ್ಧಾರ, ಅಂಕಸ್ಥಾಪನೆ, ಕಳಸಾರೋಹಣ ಮಹೋತ್ಸವ, ಬೆಳಗ್ಗೆ 4.30 ರಿಂದ ವಿಮಾನ ಕಳಶಾರೋಹಣ, ಯಂತ್ರ ಸ್ಥಾಪನೆ, ಅಷ್ಟಬಂಧನ, ಪ್ರಾಣ ಪ್ರತಿಷ್ಠೆ, ಪಂಚಬ್ರಹ್ಮ ಹೋಮ, ಬೆಳಗ್ಗೆ 8.30 ರಿಂದ ಪ್ರಧಾನ ಹೋಮ, ಮಹಾಪೂರ್ಣಾಹುತಿ, ಕುಂಭಾಭಿಷೇಕ, ನೇತ್ರೋನ್ಮೀಲನ, ಕದಳೀಛೇದನ, ಮಹಾ ನೈವೇದ್ಯ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ.

### ಕೆ.ಆರ್.ನಗರದಲ್ಲಿಂದು

■ **ಶ್ರೀ ರಾಮ ಸೇವಾ ಸಮಿತಿ:** ಶ್ರೀ ರಾಮೋತ್ಸವ, ಚಂಪಕ ಅಕಾಡೆಮಿ ವಿದುಷಿ ಶ್ರೀಮತಿ ನಾಗಲಕ್ಷ್ಮಿ ನಾಗರಾಜನ್ ಮತ್ತು ವೃಂದದವರಿಂದ ಭರತನಾಟ್ಯ, ಸ್ಥಳ: 6ರಿಂದ.

# ಎಸ್‌ಡಿಎಂ–ಐಎಂಡಿನ 2023–25ನೇ ಸಾಲಿನ 227 ಸ್ನಾತಕೋತ್ತರ ಪದವೀಧರರಿಗೆ ಪದವಿ ಪ್ರದಾನ

## ಆಧುನಿಕತೆಗೆ ಅನುಗುಣವಾಗಿ ತಂತ್ರಜ್ಞಾನ ಬಳಕೆ ಉತ್ತಮ; ಟಿವಿಎಸ್ ಆಟೋಮೊಬೈಲ್ ಸಲ್ಯೂಷನ್ಸ್‌ನ ಸಿಇಓ ನಟರಾಜನ್ ಶ್ರೀನಿವಾಸನ್ ಅಭಿಮತ

ಮೈಸೂರು, ಏ.5(ಎಂಕೆ)– ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್ಸಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್ಮೆಂಟ್(ಎಸ್‌ಡಿಎಂ–ಐಎಂಡಿ)ನಲ್ಲಿ 2023–25ನೇ ಸಾಲಿನಲ್ಲಿ ಡಿಪ್ಲೊಮಾ ಇನ್ ಮ್ಯಾನೇಜ್‌ಮೆಂಟ್‌ನಲ್ಲಿ ಸ್ನಾತಕೋತ್ತರ ಪದವಿ(ಪಿಜಿಡಿಎಂ) ಪಡೆದ 227 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಕಾಲೇಜು ಆವರಣದಲ್ಲಿ ಶನಿವಾರ ನಡೆದ 30ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಎಸ್‌ಡಿಎಂ–ಐಎಂಡಿ ಮುಖ್ಯಸ್ಥರೂ ಆದ ರಾಜ್ಯಸಭಾ ಸದಸ್ಯ ಡಾ.ಡಿ.ವೀರೇಂದ್ರ ಹೆಗಡೆ, ಪದವಿ ಪ್ರದಾನ ಮಾಡಿದರು. 'ಹಣಕಾಸು' ವಿಷಯದಲ್ಲಿ ಜಿ.ರ್ಯೋಗಾನಂದನ್, 'ಮಾನವ ಸಂಪನ್ಮೂಲ ನಿರ್ವಹಣೆ' ವಿಷಯದಲ್ಲಿ ನಿಷ್ಠಾ ಬರ್ಗಿ ಮತ್ತು ಹೆಲೆನ್ ಪೀಟರ್, 'ಮಾರ್ಕೆಟಿಂಗ್' ವಿಷಯದಲ್ಲಿ ಎಂ. ಯಶಸ್ವಿನಿ, 'ಕಾರ್ಯಾಚರಣೆ' ವಿಷಯದಲ್ಲಿ ಸಚಿನ್ ಕುಮಾರ್, 'ಸಿಸ್ಟಂ' ವಿಷಯದಲ್ಲಿ ಭಾವಿಕಾ ಜೋಶಿ, 'ಅತ್ಯುತ್ತಮ ಶೈಕ್ಷಣಿಕ ಸಾಧನೆ'ಗೆ ಶ್ವೇತಾ ಕೃಷ್ಣ ಮತ್ತು ಭಾವಿಕಾ ಜೋಶಿ ಹಾಗೂ 'ಒಟ್ಟಾರೆ ಉತ್ತಮ ಸಾಧನೆ'ಗೆ ಶ್ವೇತಾ ಕೃಷ್ಣ ಚಿನ್ನದ ಪದಕಗಳನ್ನು ಪಡೆದರು.



ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್ಸಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್ಮೆಂಟ್(ಎಸ್‌ಡಿಎಂ–ಐಎಂಡಿ)ನ 30ನೇ ವಾರ್ಷಿಕ ಘಟಿಕೋತ್ಸವದಲ್ಲಿ 227 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಎಸ್‌ಡಿಎಂ–ಐಎಂಡಿ ಮುಖ್ಯಸ್ಥರೂ ಆದ ರಾಜ್ಯಸಭಾ ಸದಸ್ಯ ಡಾ.ಡಿ.ವೀರೇಂದ್ರ ಹೆಗಡೆ, ಟಿವಿಎಸ್ ಆಟೋಮೊಬೈಲ್ ಸಲ್ಯೂಷನ್ಸ್‌ನ ಸಿಇಓ ನಟರಾಜನ್ ಶ್ರೀನಿವಾಸನ್ ಮತ್ತಿತರರು ಉಪಸ್ಥಿತರಿದ್ದರು.

ಘಟಿಕೋತ್ಸವದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಟಿವಿಎಸ್ ಆಟೋಮೊಬೈಲ್ ಸಲ್ಯೂಷನ್ಸ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ(ಸಿಇಓ) ನಟರಾಜನ್ ಶ್ರೀನಿವಾಸನ್ ಮಾತನಾಡಿ, ಆಧುನಿಕತೆಗೆ ಅನುಗುಣವಾಗಿ ತಂತ್ರಜ್ಞಾನ ಬಳಕೆ ಉತ್ತಮ. ತಂತ್ರಜ್ಞಾನಕ್ಕೆ ಗ್ರಾಹಕರಾಗದೆ, ನಮ್ಮ ಕಲಿಕೆ ಮತ್ತು ಅಭಿವೃದ್ಧಿಗೆ ಸದ್ಬಳಕೆ ಮಾಡಿಕೊಳ್ಳುವಂತೆ ಸಲಹೆ ನೀಡಿದರು.

ತಪ್ಪುಗಳಿಂದ ಹೆಚ್ಚಾಗಿ ಕಲಿಯುತ್ತೇವೆ. ಆದರೆ, ತಪ್ಪುಗಳು ಪುನರಾವರ್ತನೆಯಾಗದಂತೆ ಎಚ್ಚರಿಕೆಯಿಂದ ಗಮನವಿಟ್ಟು ಕಲಿಯಬೇಕು. ತಂಡವಾಗಿ ಮಾಡುವ ಕೆಲಸ ಪರಿಣಾಮಕಾರಿಯಾಗಿರಲಿದ್ದು, ಪರಸ್ಪರ ನಂಬಿಕೆ ಮತ್ತು ವಿಶ್ವಾಸ ಹೆಚ್ಚಿಸಲಿದೆ. ಕಾರ್ಪೋರೇಟ್ ವ್ಯವಸ್ಥೆ ವೇಗವಾಗಿ ಬೆಳೆಯುತ್ತಿದ್ದು, ಬೆಳವಣಿಗೆಗೆ ಅನುಗುಣವಾಗಿ ರೂಪುಗೊಳ್ಳುವುದು, ಕೌಶಲ್ಯತೆಗಳನ್ನು ಕರಗತ ಮಾಡಿಕೊಳ್ಳುವುದು ಅನಿವಾರ್ಯವಾಗಿದೆ ಎಂದು ಕಿವಿಮಾತು ಹೇಳಿದರು.

ಎಸ್‌ಡಿಎಂಐಎಂಡಿ ಮುಖ್ಯಸ್ಥರೂ ಆದ ರಾಜ್ಯಸಭಾ ಸದಸ್ಯ ಡಾ.ಡಿ.ವೀರೇಂದ್ರ ಹೆಗಡೆ ಮಾತನಾಡಿ, ಪ್ರತಿಯೊಬ್ಬರ ಯಶಸ್ಸು ವೈಯಕ್ತಿಕ ಬೆಳವಣಿಗೆಗೆ ಸೀಮಿತವಾಗದೆ ಸಮಾಜದಲ್ಲಿರುವ ಇತರರ ಜೀವನದಲ್ಲಿಯೂ ಬದಲಾವಣೆ ತರುವಂತಿರಬೇಕು. ಪ್ರತಿಯೊಬ್ಬರಿಗೆ ಸವಾಲುಗಳು ಎದುರಾಗುವುದು ಸಹಜ. ಆದರೆ ಸವಾಲುಗಳನ್ನು ಸ್ವೀಕರಿಸಿ, ಗೆದ್ದು ಸಮಾಜಕ್ಕೆ ತಮ್ಮದೇ ಕೊಡುಗೆ ನೀಡಬೇಕು. ತಮ್ಮಲ್ಲಿರುವ ಸಾಮರ್ಥ್ಯವನ್ನು ಅನ್ವೇಷಣೆಗೆ ಮತ್ತು ಸ್ವಯಂ ಅರಿವಿಗಾಗಿ ಬಳಕೆ ಮಾಡಿಕೊಳ್ಳುವಂತೆ ತಿಳಿಹೇಳಿದರು.


ಮುಖ್ಯವಾಗಿ ನಿಮ್ಮನ್ನು ನೀವು ಏನೆಂದು ಅರಿತುಕೊಳ್ಳುವುದೇ ಜೀವನದ ಪ್ರಮುಖ ಪಾಠವಾಗಿರಲಿದ್ದು, ಆಗಾಗ ತಮ್ಮ ಜೀವನದಲ್ಲಿ ಮಾರ್ಗದರ್ಶಕರು, ಹಿತೈಷಿಗಳು ಬಂದು ಸಲಹೆ ನೀಡುತ್ತಿರುತ್ತಾರೆ. ಕಲಿಕೆ ಎಂಬುದು ಜೀವನ ಪರ್ಯಂತ ನಡೆಯುವ ಪ್ರಕ್ರಿಯೆಯಾಗಿದ್ದು, ಕಲಿಕೆಯ ಜೊತೆ ಜೊತೆಗೆ ನಾಯಕತ್ವದ ಗುಣಗಳನ್ನು ಮೈಗೂಡಿಸಿಕೊಳ್ಳುವಂತೆ ತಿಳಿಸಿದರು.

ಡಿ.ಸುರೇಂದ್ರಕುಮಾರ್, ಮೊಹಮ್ಮದ್ ಮಿನ್ಹಾಜ್, ಮೌಸುಮಿ ಸೆಂಗುಪ್ತಾ, ಶ್ರೇಯಸ್ ಕುಮಾರ್, ಮುತ್ತು ಕುಮಾರ್, ನಿಶಿತ್ ಜೈನ್, ವಿಜು ಪರಮೇಶ್ವರ್, ನಾಗರಾಜ್ ಇಜಾರಿ, ವಿಜಯ್ ಮಾನೆ, ಎಸ್‌ಡಿಎಂ ಐಎಂಡಿ ನಿರ್ದೇಶಕ ಡಾ.ಎಸ್.ಎನ್. ಪ್ರಸಾದ್ ಮತ್ತಿತರರು ಉಪಸ್ಥಿತರಿದ್ದರು.

## ಡಾ.ಬಾಬು ಜಗಜೀವನ್ ರಾಮ್ ಅವರಿಗೆ ನಮನ



ಮೈಸೂರಿನ ರೈಲ್ವೆ ನಿಲ್ದಾಣದ ಮುಂಭಾಗದಲ್ಲಿರುವ ಬಾಬು ಜಗಜೀವನ್ ರಾಮ್ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಚಿತ್ರದಲ್ಲಿ ಬಿಜೆಪಿ ಮುಖಂಡರಾದ ಎಸ್.ಮಹದೇವಯ್ಯ, ಎಂ.ಅನಿಲ್ ಕುಮಾರ್, ಮಾಜಿ ಉಪ ಮೇಯರ್ ಶೈಲೇಂದ್ರ, ರಾಜ್ಯ ಎಸ್ಸಿ ಮೋರ್ಚಾ ಉಪಾಧ್ಯಕ್ಷ ಶ್ರೀನಿವಾಸ್, ಮೈಸೂರು ಗ್ರಾಮಾಂತರ ಮೀನುಗಾರರ ಪ್ರಕೋಷ್ಠ ಸಂಚಾಲಕ ಡಿ.ಮಹೇಶ ನಾಯಕ, ವಕೀಲ ಶಿವರಾಜ್, ಕಚೇರಿಯ ಕಾರ್ಯದರ್ಶಿ ಸೋಮಶೇಖರ್ ಸ್ವಾಮಿ, ಕಾರ್ಯಕರ್ತರು ಉಪಸ್ಥಿತರಿದ್ದರು.



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಜಗಜೀವನ ರಾಮ್ ಜಯಂತಿ ಅಂಗವಾಗಿ ಬಿಜೆಪಿ ನಾಯಕರೂ ಆದ ಚಲನಚಿತ್ರ ನಾಯಕ ನಟ ಎಸ್.ಜಯಪ್ರಕಾಶ್ (ಜೆಪಿ) ಅವರು ಬಾಬೂಜಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ಪದಾಧಿಕಾರಿಗಳಾದ ಸೋಮಶೇಖರ್, ರವೀಶ್, ಪ್ರಕಾಶ್, ಪಾಪಣ್ಣ, ಅನಿಲ್‌ಕುಮಾರ್, ಶಿವರಾಜ್, ಮಹೇಶ್ ಗೌಡ ಮತ್ತು ಹನುಮಂತೇಗೌಡ ಇನ್ನಿತರರು ಹಾಜರಿದ್ದರು.

## ಪರೀಕ್ಷಾ ತರಬೇತಿ

ಮೈಸೂರು, ಏ.5(ಎಂಕೆ)– ಕರ್ನಾಟಕ ಮುಕ್ತ ವಿವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದಿಂದ ಆಯೋಜಿಸಿರುವ 50 ದಿನಗಳ ಐಎಎಸ್ ಮತ್ತು ಕೆಎಎಸ್ ಪರೀಕ್ಷೆಗಳ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಏ.9 ರೊಳಗೆ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಲು ದೂ.ಸಂ. 0821–2515944/9964760090 ಸಂಪರ್ಕಿಸಬಹುದಾಗಿದೆ ಎಂದು ಕರಾಮುವಿ ಕುಲಸಚಿವ ಪ್ರೊ. ಕೆ.ಬಿ. ಪ್ರವೀಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮನೆ ಮುಂದೆ ಕಸ ಗುಡಿಸುತ್ತಿದ್ದ ಮಹಿಳೆ ಬಚಾವ್; ಆದರೆ...

# ವಾಯು ವಿಹಾರಿಯ ಸರ ಕದ್ದ ಖದೀಮರು

ಮೈಸೂರು, ಏ. 5(ಆರ್‌ಕೆ, ಎಸ್‌ಬಿಡಿ)– ಇಬ್ಬರು ಖದೀಮರು ವಾಯು ವಿಹಾರ ಮಾಡುತ್ತಿದ್ದ ಮಹಿಳೆಯ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿರುವ ಘಟನೆ ಮೈಸೂರಿನ ಮಂಡಿ ಮೊಹಲ್ಲಾದಲ್ಲಿ ನಡೆದಿದ್ದು, ಇದಕ್ಕೂ ಮುನ್ನ ಮತ್ತೋರ್ವ ಮಹಿಳೆಯ ಸರ ಕಳವಿಗೆ ವಿಫಲ ಯತ್ನ ನಡೆಸಿದ್ದಾರೆ.

ಶುಕ್ರವಾರ ಬೆಳ್ಳಂಬೆಳಗ್ಗೆ ಬಿಳಿ ಬಣ್ಣದ ಸ್ಕೂಟರ್‌ನಲ್ಲಿ ರಸ್ತೆಗಿಳಿದ ಇಬ್ಬರು ಖದೀಮರು, ವೀರನಗೆರೆ ಮಂಟಪ ರಸ್ತೆಯಲ್ಲಿ ಮನೆ ಮುಂಭಾಗ ಕಸ ಗುಡಿಸುತ್ತಿದ್ದ ಮಹಿಳೆಯ ಮಾಂಗಲ್ಯ ಸರ ಕಳವು ವಿಫಲವಾದಾಗ 15 ನಿಮಿಷದಲ್ಲೇ ಮಂಡಿ ಮೊಹಲ್ಲಾದ ರತನ್‌ಸಿಂಗ್ ಗಲ್ಲಿಯಲ್ಲಿ ವಾಕಿಂಗ್ ಮಾಡುತ್ತಿದ್ದ ಮಹಿಳೆಯ 35 ಗ್ರಾಂ ಚಿನ್ನದ ಮಾಂಗಲ್ಯ ಸರವನ್ನು ಎಗರಿಸಿ, ಪರಾರಿಯಾಗಿದ್ದಾರೆ.

**ವಿಫಲ ಯತ್ನ:** ವೀರನಗೆರೆ ಮಂಟಪ ರಸ್ತೆ ನಿವಾಸಿ ಸಿ.ಎನ್.ಶಿಲ್ಪಾ(37) ಅವರು ಎಂದಿನಂತೆ ಶುಕ್ರವಾರ ಬೆಳಗ್ಗೆ 6.25ರಲ್ಲಿ ಮನೆ ಮುಂಭಾಗ ಕಸ ಗುಡಿಸುತ್ತಿದ್ದಾಗ ಬಿಳಿ ಬಣ್ಣದ ಸ್ಕೂಟರ್‌ನಲ್ಲಿ ಇಬ್ಬರು ಖದೀಮರು ಬಂದಿದ್ದಾರೆ. ಹಿಂಬದಿಯಲ್ಲಿ ಕುಳಿತಿದ್ದವನು ಏಕಾಏಕಿ ಶಿಲ್ಪಾ ಅವರ ಕೊರಳಿನಲ್ಲಿದ್ದ ಸುಮಾರು 40 ಗ್ರಾಂ ಚಿನ್ನದ ಮಾಂಗಲ್ಯ ಸರ ಕಿತ್ತುಕೊಳ್ಳಲು ಯತ್ನಿಸಿದ್ದಾನೆ. ಈ ವೇಳೆ ಶಿಲ್ಪಾ ಅವರು ಸರವನ್ನು ಗಟ್ಟಿಯಾಗಿ ಹಿಡಿದುಕೊಂಡು ಕಿರುಚಿದ್ದರಿಂದ ಖದೀಮರು ಬರಿಗೈಯಲ್ಲಿ ಪರಾರಿಯಾಗಿದ್ದಾರೆ. ಸರ ತುಂಡಾದರೂ ಅದೃಷ್ಟವಶಾತ್ ಖದೀಮರ ಪಾಲಾಗಿಲ್ಲ.

**ಎಗರಿಸೇಬಿಟ್ಟರು:** ವೀರನಗೆರೆಯಿಂದ ಪರಾರಿಯಾದ ಖದೀಮರು ಕೇವಲ 15 ನಿಮಿಷದಲ್ಲಿ ಸಮೀಪದ ರತನ್‌ಸಿಂಗ್ ಗಲ್ಲಿಯಲ್ಲಿ ಚಿನ್ನದ ಸರ ಎಗರಿಸುವಲ್ಲಿ ಸಫಲರಾಗಿದ್ದಾರೆ. ಎಂದಿನಂತೆ ಈ ಗಲ್ಲಿಯಲ್ಲಿ ಬೆಳಗ್ಗೆ 6.45ರಲ್ಲಿ ವಾಯು ವಿಹಾರ ಮಾಡುತ್ತಿದ್ದ ಮಂಡಿ ಮೊಹಲ್ಲಾ ವೆಸ್ಲಿ ರಸ್ತೆ 3ನೇ ಕ್ರಾಸ್ ನಿವಾಸಿ ಬದ್ರಿನಾರಾಯಣ ಅವರ ಪತ್ನಿ ಎಸ್.ಲಲಿತಾ(53) ಅವರ ಸುಮಾರು 35 ಗ್ರಾಂ ಮಾಂಗಲ್ಯ ಸರವನ್ನು ಕಿತ್ತುಕೊಂಡಿದ್ದಾರೆ. ಈ ವೇಳೆ ಲಲಿತಾ ಅವರು ಕಿರುಚಿಕೊಂಡಿದ್ದರಿಂದ ಸಾರ್ವಜನಿಕರು ತಕ್ಷಣ ಧಾವಿಸಿ, ಖದೀಮರ ಬೆನ್ನತ್ತಿದರಾದರೂ ಅವರು ಸಾಡೇ ರಸ್ತೆ, ಹಳೇ ಆರ್‌ಎಂಸಿ ಜಂಕ್ಷನ್ ಮೂಲಕ ವೇಗವಾಗಿ ಪರಾರಿಯಾಗಿದ್ದಾರೆ.

**ಇಬ್ಬರೂ ಯುವಕರು:** ಬಿಳಿ ಬಣ್ಣದ ಸ್ಕೂಟರ್‌ನಲ್ಲಿ ಬಂದಿದ್ದ ಖದೀಮರಿಬ್ಬರು 25 ವರ್ಷದೊಳಗಿನ ಯುವಕರು. ಸ್ಕೂಟರ್ ಓಡಿಸುತ್ತಿದ್ದವನು ಕೆಂಪು, ಬಿಳಿ ಹಾಗೂ ನೀಲಿ ಬಣ್ಣ ಮಿಶ್ರಿತ ಫುಲ್‌ಓವರ್ ಟಿ–ಶರ್ಟ್ ಧರಿಸಿದ್ದರೆ ಹಿಂಬದಿಯಲ್ಲಿದ್ದವನು ಕೆಂಪು ಬಣ್ಣ ಜರ್ಕಿನ್ ಹಾಕಿದ್ದ ಎಂದು ಮಹಿಳೆಯರು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಸರ ಕಳವು ಯತ್ನ ಸಂಬಂಧ ಲಷ್ಕರ್ ಠಾಣೆ ಹಾಗೂ ಸರ ಕಳವು ಸಂಬಂಧ ಮಂಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮಂಡಿ ಠಾಣೆ ಇನ್‌ಸ್ಪೆಕ್ಟರ್ ನಾಗೇಶ್ ಹಾಗೂ ಸಿಬ್ಬಂದಿ ಸ್ಥಳ ಮಹಜರು ನಡೆಸಿ, ಸಿಸಿ ಕ್ಯಾಮರಾ ಫುಟೇಜ್‌ಗಳ ನೆರವಿನಿಂದ ಆರೋಪಿಗಳ ಪತ್ತೆಗೆ ಶೋಧ ನಡೆಸುತ್ತಿದ್ದಾರೆ.



# ನರೇಗಾ ಯೋಜನೆಯ ಮೈಸೂರು ತಾಲೂಕು ವ್ಯಾಪ್ತಿ 'ಸ್ತ್ರೀ ಚೇತನ' ಅಭಿಯಾನಕ್ಕೆ ಚಾಲನೆ

ಮೈಸೂರು, ಏ.5(ಎಸ್‌ಬಿಡಿ)– ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ 'ಸ್ತ್ರೀ ಚೇತನ' ಅಭಿಯಾನಕ್ಕೆ ಮೈಸೂರಿನಲ್ಲಿ ಶನಿವಾರ ಚಾಲನೆ ದೊರಕಿತು.

ನರೇಗಾ ಯೋಜನೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಹೆಚ್ಚಿಸುವ ಉದ್ದೇಶದಿಂದ ಏಪ್ರಿಲ್‌ನಿಂದ ಜೂನ್‌ವರೆಗೆ 'ಸ್ತ್ರೀ ಚೇತನ' ಅಭಿಯಾನ ಹಮ್ಮಿಕೊಂಡಿದ್ದು, ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಶನಿವಾರ ಗ್ರಾಮೀಣ ಮಹಿಳೆಯರಿಗೆ ಉದ್ಯೋಗ ಚೀಟಿ ವಿತರಿಸುವ ಮೂಲಕ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಸಿ.ಕೃಷ್ಣ ಚಾಲನೆ ನೀಡಿದರು.



ಮೈಸೂರು ತಾಪಂ ಇಓ ಸಿ.ಕೃಷ್ಣ 'ಸ್ತ್ರೀ ಚೇತನ' ಅಭಿಯಾನಕ್ಕೆ ಚಾಲನೆ ನೀಡಿ, ಮಹಿಳೆಯರಿಗೆ ನರೇಗಾ ಉದ್ಯೋಗ ಚೀಟಿ ವಿತರಿಸಿದರು.

ಈ ವೇಳೆ ಮಾತನಾಡಿದ ಅವರು, ಗ್ರಾಮೀಣ ಭಾಗದ ಅಭಿವೃದ್ಧಿ ಜೊತೆಗೆ ಅಲ್ಲಿನ ಜನರಿಗೆ ನೂರು ದಿನಗಳ ಉದ್ಯೋಗ ನೀಡುವ ಮಹಾತ್ಮ ಗಾಂಧಿ ನರೇಗಾ ಯೋಜನೆ ಕಾಮಗಾರಿಗಳಲ್ಲಿ ಮಹಿಳೆಯರು ಹೆಚ್ಚಾಗಿ ಭಾಗವಹಿಸುವಂತೆ ಪ್ರೋತ್ಸಾಹಿಸಬೇಕಿದೆ. ಈ ಸಾಲಿನಿಂದ ಉದ್ಯೋಗ ಖಾತರಿ ಯೋಜನೆಯಡಿ ನೀಡುವ ಕೂಲಿಯ ಮೊತ್ತವು 349 ರಿಂದ 370 ರೂ.ಗೆ ಹೆಚ್ಚಳವಾಗಿದೆ. ಕುಟುಂಬವೊಂದಕ್ಕೆ ನೂರು ದಿನಗಳ ಕೆಲಸ ಖಾತರಿ ಇದ್ದು, ವಾರ್ಷಿಕ 37 ಸಾವಿರ ರೂ. ಗಳಿಸಬಹುದಾಗಿದೆ. ಅಲ್ಲದೆ, ಈ ಯೋಜನೆಯಡಿ ವೈಯಕ್ತಿಕ ಕಾಮಗಾರಿಗಳನ್ನೂ ಪಡೆದು ಆರ್ಥಿಕವಾಗಿ ಸಬಲರಾಗಬಹುದು ಎಂದು ತಿಳಿಸಿದರು.

ವೃದ್ಧರು, ವಿಶೇಷ ಚೇತನರು ಹಾಗೂ ಲಿಂಗತ್ವ ಅಲ್ಪಸಂಖ್ಯಾತರಿಗೆ ಕೆಲಸದಲ್ಲಿ ರಿಯಾಯ್ತಿಯ ಅವಕಾಶವೂ ಇದೆ. ಹಾಗಾಗಿ ಗ್ರಾಮೀಣ ಜನರಿಗೆ ಆರ್ಥಿಕ ಶಕ್ತಿ ತುಂಬುವ ನರೇಗಾ ಯೋಜನೆಯಲ್ಲಿ ಮಹಿಳೆಯರು ಹೆಚ್ಚಾಗಿ ಪಾಲ್ಗೊಳ್ಳಬೇಕು. ಈ ನಿಟ್ಟಿನಲ್ಲಿ ತಾಲೂಕಿನ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ 'ಸ್ತ್ರೀ ಚೇತನ' ಅಭಿಯಾನ ನಡೆಸಿ, ಯೋಜನೆಯಲ್ಲಿ ಪ್ರಗತಿ ಸಾಧಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಎನ್‌ಆರ್‌ಎಲ್‌ಎಂ ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕಿ ಎ.ಆರ್.ಆಶಾ, ಜಿಲ್ಲಾ ವ್ಯವಸ್ಥಾಪಕ ಬಸವರಾಜು, ತಾಲೂಕು ಕಾರ್ಯಕ್ರಮ ವ್ಯವಸ್ಥಾಪಕ ಬಿ.ಆರ್.ನಾಗರಾಜು, ವಲಯ ಮೇಲ್ವಿಚಾರಕ ಪರಶಿವಮೂರ್ತಿ, ಡಿಇಓ ರಂಜಿತ ಸೇರಿದಂತೆ ಎಂಬಿಕೆ, ಎಲ್‌ಸಿಆರ್‌ಪಿ, ಕೃಷಿ ಸಖಿ, ಪಶು ಸಖಿ ಇನ್ನಿತರ ಸಿಬ್ಬಂದಿಗಳಿದ್ದರು.

## ತಾಯಿ ನಿಂದಿಸಿದ ಸಹೋದ್ಯೋಗಿ ಹತ್ಯೆ

# ಕಾರ್ಮಿಕನಿಗೆ 5 ವರ್ಷ ಸಜೆ, 25 ಸಾವಿರ ದಂಡ

## ಮೈಸೂರಿನ 3ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಿಂದ ತೀರ್ಪು

ಮೈಸೂರು,ಏ.5(ಪಿಎಂ)– ತನ್ನ ತಾಯಿ ಬಗ್ಗೆ ಆವಾಚ್ಯ ಶಬ್ಧಗಳಲ್ಲಿ ನಿಂದಿಸಿದ್ದ ಕಾರಣಕ್ಕೆ ಆವೇಶದಲ್ಲಿ ಹಲ್ಲೆ ನಡೆಸಿ, ಸಹೋದ್ಯೋಗಿ ಕಾರ್ಮಿಕನಾಗಿ ಜೊತೆಯಲ್ಲೇ ಕೆಲಸ ಮಾಡುತ್ತಿದ್ದ ಚಿಕ್ಕಪ್ಪನ ಮಗನನ್ನೇ ಹತ್ಯೆಗೈದಿದ್ದ ಹಂತಕನಿಗೆ ಮೈಸೂರಿನ 3ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, 5 ವರ್ಷ ಸಜೆ ಮತ್ತು 25 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದೆ.

ನಂಜನಗೂಡಿನ ತಾಂಡ್ಯಾ ಕೈಗಾರಿಕಾ ಪ್ರದೇಶದಲ್ಲಿರುವ ಅವಿಷ್ಕಾರ್ ಸ್ಟೋನ್ ಫ್ಯಾಕ್ಟರಿಯಲ್ಲಿ ಪಾಲಿಷ್ ಕೆಲಸ ಮಾಡಿಕೊಂಡಿದ್ದ ಅಂಗ್ರೇಜ್ ರಾಮ್ ಶಿಕ್ಷೆಗೆ ಗುರಿಯಾದವ. ಈತ ಮೂಲತಃ ರಾಜಸ್ಥಾನದ ನಾಗ್ಪುರ್ ಜಿಲ್ಲೆಯ ಜಹೇಲ್ ತಾಲೂಕಿನ ಏವಾಡ್ ಗ್ರಾಮದ ನಿವಾಸಿ. 2022ರ ಅ.24ರಂದು ಈತ ತನ್ನ ಸಹೋದ್ಯೋಗಿ ಕಾರ್ಮಿಕ ಸುರೇಶ ಎಂಬಾತನ ಮೇಲೆ ಹಲ್ಲೆ ನಡೆಸಿದ್ದ. ಪರಿಣಾಮ ತೀವ್ರ ರಕ್ತಸ್ರಾವದಿಂದ ಸುರೇಶ ಸ್ಥಳದಲ್ಲೇ ಮೃತಪಟ್ಟಿದ್ದ.

ಅಂಗ್ರೇಜ್ ರಾಮ್‌ನು ಸದರಿ ಸ್ಟೋನ್ ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಸೇರಿದ ನಂತರ ಈತನ ಚಿಕ್ಕಪ್ಪನ ಮಕ್ಕಳಾದ ಸುರೇಶ ಮತ್ತು ಮುಖೇಶ ಕೂಡ ರಾಜಸ್ಥಾನದಿಂದ ಅದೇ ಸ್ಟೋನ್ ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದರು. ಈ ಮೂವರು ಫ್ಯಾಕ್ಟರಿಯಿಂದ ಕೊಟ್ಟಿದ್ದ ರೂಮ್‌ನಲ್ಲಿ ಜೊತೆಯಾಗಿ ವಾಸವಾಗಿದ್ದರು. 2022ರ ಅ.24ರಂದು ಅಂಗ್ರೇಜ್ ರಾಮ್ ಮತ್ತು ಸುರೇಶ ರೂಮಿನ ಹೊರಗಡೆ ಮಾತನಾಡುತ್ತಿದ್ದರು. ಈ ವೇಳೆ ಸುರೇಶನು ಅಂಗ್ರೇಜ್ ರಾಮನ ತಾಯಿಯನ್ನು ನಿಂದಿಸಿದ್ದಾನೆ. ಇದರಿಂದ ಕೋಪಗೊಂಡ ಅಂಗ್ರೇಜ್ ರಾಮನು ಮರದ ರೀಪೀಸ್ ಪಟ್ಟಿಯಿಂದ ಸುರೇಶನ ಮೇಲೆ ಹಲ್ಲೆ ನಡೆಸಿದ್ದು, ತೀವ್ರ ರಕ್ತಸ್ರಾವದಿಂದ ಸುರೇಶ ಸ್ಥಳದಲ್ಲೇ ಮೃತಪಟ್ಟಿದ್ದನು.

ಈ ಸಂಬಂಧ ಮೃತನ ತಮ್ಮ ಮುಖೇಶ್ ನೀಡಿದ ದೂರಿನ ಮೇರೆಗೆ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕ ಶಿವನಂಜಶೆಟ್ಟಿಯವರು ತನಿಖೆ ನಡೆಸಿ (ಮೊಕದ್ದಮೆ ಸಂಖ್ಯೆ 235/2022, ಎಸ್‌ಸಿ ಸಂಖ್ಯೆ 72/2023) ಆರೋಪಿಯ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ಮೈಸೂರಿನ 3ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಕೆ.ಭಾಗ್ಯರವರು, ಭಾರತೀಯ ದಂಡ ಸಂಹಿತೆಯ ಕಲಂ 304ರಡಿಯಲ್ಲಿ ಅಪರಾಧ' ರುಜುವಾತಾಗಿದೆ ಎಂದು ತೀರ್ಮಾನಿಸಿ, ಅಂಗ್ರೇಜ್ ರಾಮನಿಗೆ 5 ವರ್ಷ ಸಜೆ ಹಾಗೂ 25 ಸಾವಿರ ರೂ. ದಂಡ ವಿಧಿಸಿದ್ದಾರೆ. ಅಲ್ಲದೆ, ದಂಡ ಪಾವತಿಸಲು ತಪ್ಪಿದ್ದಲ್ಲಿ 1 ವರ್ಷದ ಸಜೆ ವಿಧಿಸಿ ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕರಾದ ಟಿ.ಹೆಚ್.ಲೋಲಾಕ್ಷಿ ವಾದಿಸಿರುತ್ತಾರೆ ಎಂದು ಪ್ರಕಟಣೆ ತಿಳಿಸಿದೆ.

## ಇಂದು ಕ್ಯಾತಮಾರನಹಳ್ಳಿಯಲ್ಲಿ ಸಭೆ

ಮೈಸೂರು,ಏ.5– ಕ್ಯಾತಮಾರನಹಳ್ಳಿಯ ವಿವಾದಿತ ಸ್ಥಳದಲ್ಲಿ ಅರೆಬಿಕ್ ಶಾಲೆ ತೆರೆಯಲು ಜಿಲ್ಲಾಧಿಕಾರಿಯವರು ನೀಡಿರುವ ಆದೇಶವನ್ನು ವಿರೋಧಿಸಿ ಏ.6ರಂದು ಬೆಳಗ್ಗೆ 11 ಗಂಟೆ ಶ್ರೀ ಹುಲಿಯಮ್ಮ ದೇವಸ್ಥಾನದ ಆವರಣದಲ್ಲಿ ಕ್ಯಾತಮಾರನಹಳ್ಳಿಯ ಹುಲಿಯಮ್ಮ ದೇವಸ್ಥಾನ ಟ್ರಸ್ಟ್ ವತಿಯಿಂದ ಸ್ಥಳೀಯರು ಮತ್ತು ಟ್ರಸ್ಟಿಗಳ ಸಭೆ ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟ್‌ನ ಪ್ರಕಟಣೆ ತಿಳಿಸಿದೆ.

## ನಕ್ಕರೆ ಅದೇ ಸ್ವರ್ಗ

ಕಿಟ್ಟಿ : ಪುಟ್ಟಿ ಸ್ನಾನ ಆಯ್ತಾ?
ಪುಟ್ಟಿ : ನಾನು ನಿನ್ನಷ್ಟು ಸೋಮಾರಿ ಅಲ್ವೋ? ಒಂದು ತಿಂಗಳ ಮುಂಚೆನೇ ಸ್ನಾನ ಮಾಡ್ಕೊಂಡು ಬಿಟ್ಟಿದ್ದೀನಿ?

ಮೈಸೂರು ಮಿತ್ರ
ಭಾನುವಾರ, 6 ಏಪ್ರಿಲ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

## ಅಮೃತ ವಾಹಿನಿ.........

ಸೋಲುಗಳಿಂದ ಯಾವತ್ತೂ ಕಂಗೆಡಬೇಡಿ. ಯಾಕೆಂದರೆ, ಅತ್ಯಂತ ಯಶಸ್ವಿ ಎನಿಸಿರುವ ಗಣಿತ ಆರಂಭವಾಗುವುದು ಶೂನ್ಯದಿಂದಲೇ. – ಎಪಿಜೆ ಅಬ್ದುಲ್ ಕಲಾಂ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಿನ್ನಲ್ಲಿ ನೀ ಹುಡುಕು, ಅರಿಷಡ್ವರ್ಗಗಳ ಹೊರ ಹಾಕು.

## ನಿಮ್ಮ ಪತ್ರಗಳು

### ಬಂಡೀಪುರ ಅರಣ್ಯದಲ್ಲಿ ರಾತ್ರಿ ವಾಹನ ಸಂಚಾರ ನಿಷೇಧ ತೆಗೆದುಹಾಕಬಾರದು



ಮಾನ್ಯರೆ,

ಈಗಿನ ಕಾಂಗ್ರೆಸ್ ಸರ್ಕಾರ ಬಂಡೀಪುರ ರಾಷ್ಟ್ರೀಯ ಉದ್ಯಾನವನದ ಮೂಲಕ ಹೋಗುವ ರಾಷ್ಟ್ರೀಯ ಹೆದ್ದಾರಿ 766ರಲ್ಲಿ ರಾತ್ರಿ ಸಂಚಾರ ನಿಷೇಧವನ್ನು ತೆಗೆದುಹಾಕಲು ಚಿಂತನೆ ನಡೆಸಿದೆ ಎಂದು ಹೇಳಲಾಗುತ್ತಿದೆ.

ಇತ್ತೀಚೆಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಉಪ ಚುನಾವಣಾ ಪ್ರಚಾರದಲ್ಲಿ ಈ ನಿಷೇಧವನ್ನು ತೆಗೆದುಹಾಕುವ ಬಗ್ಗೆ ಹೇಳಿಕೆ ನೀಡಿದ್ದಾರೆ. ಈ ನಿರ್ಧಾರ ವನ್ಯಜೀವಿಗಳ ಭದ್ರತೆಗೆ ತುಂಬಾ ಅಪಾಯವನ್ನುಂಟು ಮಾಡಬಹುದು.

2004 ರಿಂದ 2007 ರ ನಡುವೆ ಸುಮಾರು 93 ವನ್ಯಜೀವಿಗಳು ರಸ್ತೆಯಲ್ಲಿ ವಾಹನಗಳಿಂದ ಕೊಲ್ಲಲ್ಪಟ್ಟಿದ್ದವು. ಆದರೆ 2009 ರಲ್ಲಿ ರಾತ್ರಿ ಸಂಚಾರ ನಿಷೇಧವನ್ನು ಜಾರಿಗೆ ತಂದ ನಂತರ, ಈ ರೀತಿಯ ಪ್ರಾಣಹಾನಿ ಬಹಳಷ್ಟು ಕಡಿಮೆಯಾಗಿದೆ. ಅರಣ್ಯದ ವಾತಾವರಣ ಮತ್ತು ವನ್ಯಜೀವಿಗಳ ನಿರಂತರ ಸಂಚಾರಕ್ಕೆ ಇದು ಸಹಾಯಕವಾಗಿದೆ.

ಈಗಾಗಲೇ ಒಂದು ಪರ್ಯಾಯ ಮಾರ್ಗವನ್ನು ಅಭಿವೃದ್ಧಿಪಡಿಸಲಾಗಿದೆ. ಅದು ವಿರಾಜಪೇಟೆಯಿಂದ ಕುಟ್ಟಾ ಮೂಲಕ ಕಣ್ಣೂರಿಗೆ ಸಂಪರ್ಕ ಕಲ್ಪಿಸುತ್ತದೆ. ಆದ್ದರಿಂದ ಮೂಲವಾದ ಅವಶ್ಯಕತೆ ಇಲ್ಲದೆ ಈ ನಿಷೇಧವನ್ನು ತೆಗೆಯುವುದು ಸರಿಯಲ್ಲ. ಇದು ರಾಜಕೀಯ ಉದ್ದೇಶಕ್ಕಾಗಿ ಮಾಡಲಾಗುತ್ತಿರುವ ಕ್ರಮವಾಗಿದೆ ಎಂದು ಭಾಸವಾಗುತ್ತಿದೆ.

ಪ್ರಾಣಿಗಳು ಮಾತಾಡಲಾಗದು. ಆದರೆ ನಾವು ಅವುಗಳ ಪರವಾಗಿ ಮಾತಾಡಬೇಕು. ಈ ನಿಷೇಧವು ಪ್ರಾಣಿಗಳ ರಕ್ಷಣೆಗೆ ಬಹುಮುಖ್ಯವಾಗಿದೆ.

–ಶಶಾಂಕ್ ಹೊಳ್ಳ, ಕಾನೂನು ವಿದ್ಯಾರ್ಥಿ, ಮೈಸೂರು

### ಮಳೆ: ಬೆಂಗಳೂರಿಗೆ ಬೇಕಿದೆ ಶಾಶ್ವತ ಪರಿಹಾರ

ಮಾನ್ಯರೆ,

ಬೆಂಗಳೂರಿಗೆ ಪ್ರತಿ ಬಾರಿಯೂ ಮಳೆ ಬಿದ್ದಾಗ ಸಮಸ್ಯೆಗಳು ಒಂದರ ಮೇಲೊಂದರಂತೆ ಕಾಣ ಸಿಗುತ್ತವೆ. ಅದರಲ್ಲೂ ತುಸು ಜೋರಾಗಿ ಮಳೆ ಬಿದ್ದಾಗಲೆಲ್ಲಾ ಮರಗಳು ಹಾಗೂ ವಿದ್ಯುತ್ ಕಂಬಗಳು ರಸ್ತೆಗೆ ಉರುಳಿ ಬೀಳುವುದು, ಮನೆಗಳಿಗೆ ಮಳೆ ನೀರು ನುಗ್ಗಿದಾಗ ಜನರು ಪರದಾಡುವುದು, ರಸ್ತೆಗಳು ನದಿಗಳಂತೆ ಮಾರ್ಪಟ್ಟು, ರಸ್ತೆ ಮೇಲೆ ಮೊಣಕಾಲುದ್ದ ಕೊಳಚೆ ನೀರು ಮಿಶ್ರಿತ ಮಳೆ ನೀರಿನಲ್ಲೇ ವಾಹನಗಳು, ಆಟೋಗಳು, ಬಸ್‌ಗಳು, ಡೆಲಿವರಿ ಬಾಯ್‌ಗಳು, ಪಾದಚಾರಿಗಳು ಅದರಲ್ಲಿಯೇ ಸಂಚರಿಸಲು ನರಕಯಾತನೆ ಪಡುವುದು ಮಾಮೂಲಿಯಾಗಿ ಬಿಟ್ಟಿದೆ.

ಪ್ರತಿ ಬಾರಿ ಮಳೆ ಬಿದ್ದಾಗಲೆಲ್ಲಾ ಸ್ಥಳೀಯ ಬಿಬಿಎಂಪಿ ಹಾಗೂ ಸರ್ಕಾರಗಳು ತುಸು ಪರಿಹಾರ ಕ್ರಮಗಳನ್ನು ಕೈಗೊಂಡು, ತದನಂತರ ಸಮಸ್ಯೆಗಳು ಹಾಗೆಯೇ ಶಾಶ್ವತವಾಗಿ ಉಳಿಯಲು ಬಿಡುವುದು ತರವಲ್ಲ. ಜನರ ಬಳಿ ತೆರಿಗೆ ಪಡೆಯುವ ಸರ್ಕಾರಗಳು ಸುಳ್ಳು ಭರವಸೆ ಕೊಟ್ಟು ಮೂಲಸೌಕರ್ಯ ಒದಗಿಸುವಲ್ಲಿ ವಿಫಲವಾಗುವುದು ಶೋಭೆಯು ಅಲ್ಲ. ಬ್ರ್ಯಾಂಡ್ ಬೆಂಗಳೂರು ಹೆಸರಿನಡಿ ಸರ್ಕಾರ ನಗರವನ್ನು ಸಮಗ್ರ ಅಭಿವೃದ್ಧಿ ಮಾಡುವುದಾಗಿ ಹೇಳುತ್ತಿದೆ. ಇಲ್ಲಿ ನೋಡಿದರೆ ಬೆಂಗಳೂರಿಗೆ ಮಳೆ ಬಂದಾಗಲೆಲ್ಲಾ ಪ್ರವಾಹ ಸೃಷ್ಟಿಯಾಗುತ್ತದೆ. ಮಳೆ ಬಂದಾಗ ಪರಿಹಾರ ಕ್ರಮಗಳನ್ನು ಸರ್ಕಾರ ಅನುಸರಿಸುವ ಬದಲು, ಎಷ್ಟೇ ಮಳೆ ಬಿದ್ದರು ಯಾವುದೇ ಸಮಸ್ಯೆಗಳು ಉಂಟಾಗದಂತೆ ಹಾಗೂ ಸಮಸ್ಯೆಗಳು ಮರುಕಳಿಸದಂತೆ ಕಟ್ಟುನಿಟ್ಟಿನ ಶಾಶ್ವತ ಪರಿಹಾರಗಳನ್ನು ಬೆಂಗಳೂರಿನಲ್ಲಿ ಕೈಗೊಳ್ಳಬೇಕಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.


### ಬಸ್ಸುಗಳಲ್ಲಿ ಪಾರದರ್ಶಕ ಸ್ಟಿಕ್ಕರ್ ಬಳಕೆ ಸೂಕ್ತ

ಮಾನ್ಯರೆ,

ಮೈಸೂರು ನಗರ ಸಾರಿಗೆಗೆ ಸುಂದರ ಬಸ್ಸುಗಳು ಬಂದಿವೆ. ಬಸ್ಸಿನಲ್ಲಿ ನಿಂತು ಕೊಂಡು ಪ್ರಯಾಣ ಮಾಡುವ ಪ್ರಯಾಣಿಕರಿಗೆ ಬಸ್ಸು ಎಲ್ಲಿ ಸಾಗುತ್ತಿದೆ ಎಂದು ಕಾಣುವ ಹಾಗೆ ಕಿಟಕಿಗಳ ಮೇಲ್ಭಾಗದಲ್ಲಿ ಗಾಜುಗಳನ್ನು ಅಳವಡಿಸಿರುತ್ತಾರೆ. ಆದರೆ ಆ ಗಾಜುಗಳ ಮೇಲೆ ಜಾಹೀರಾತುಗಳ ಸ್ಟಿಕ್ಕರ್‌ಗಳನ್ನು ಅಂಟಿಸಿರುವುದರಿಂದ ಒಳಗೆ ನಿಂತು ಪ್ರಯಾಣ ಮಾಡುವವರಿಗೆ ಬಸ್ಸು ಎಲ್ಲಿ ಹೋಗುತ್ತಿದೆ ಎಂದು ತಿಳಿಯಲು ಬಗ್ಗಿ ಕಿಟಕಿ ಮೂಲಕ ನೋಡಬೇಕು. ಅದು ಅತ್ಯಂತ ಮುಜುಗರದ ಸಂಗತಿಯಾಗಿರುತ್ತದೆ.

ಇಂದು ಪ್ರಪಂಚ ಜಾಹೀರಾತುಮಯ ಮತ್ತು ಆದಾಯ ತರುವ ಸಂಪನ್ಮೂಲ. ಇದರಿಂದ ಬಸ್ಸುಗಳ ಗಾಜಿನ ಮೇಲೆ ಪಾರದರ್ಶಕ ಜಾಹೀರಾತಿನ ಸ್ಟಿಕ್ಕರ್ ಅಂಟಿಸಿದರೆ ಒಳಗಿರುವವರಿಗೆ ಹೊರಗಡೆಯ ದೃಶ್ಯ ಕಾಣಿಸುತ್ತದೆ ಮತ್ತು ಹೊರಗಡೆಯಿಂದ ನೋಡುವವರಿಗೆ ಜಾಹೀರಾತು ಕಾಣುತ್ತದೆ. ಆದುದರಿಂದ ಇನ್ನು ಮುಂದೆ ಗಾಜಿನ ಮೇಲೆ ಅಂಟಿಸುವ ಜಾಹೀರಾತು ಕಡ್ಡಾಯವಾಗಿ ಪಾರದರ್ಶಕ ಸ್ಟಿಕ್ಕರ್ ಆಗಿರಬೇಕೆಂದು ಜಾಹೀರಾತು ನೀಡುವವರಿಗೆ ಮನವರಿಕೆ ಮಾಡಿ ಪಾರದರ್ಶಕ ಜಾಹೀರಾತಿನ ಸ್ಟಿಕ್ಕರ್ ಮಾತ್ರ ಅಂಟಿಸಬೇಕೆಂದು ನಗರ ಸಾರಿಗೆಯವರನ್ನು ಕೋರುತ್ತೇನೆ. ಆ ಜಾಹಿರಾತಿನ ಅವಧಿ ಮುಗಿದ ನಂತರ ಅದನ್ನು ಗಾಜಿಗೆ ಯಾವುದೇ ತೊಂದರೆಯಾಗದಂತೆ ತೆಗೆದು ಹಾಕುವುದು ಜಾಹೀರಾತುದಾರರ ಜವಾಬ್ದಾರಿಯಾಗಿ ಮಾಡಬೇಕು. ಇಲ್ಲವಾದರೆ ಜಂಬೂ ಸರ್ಕಸ್ ಹೋಗಿ ಅರು ತಿಂಗಳಾದರೂ ಅದರ ಜಾಹೀರಾತು ಮಾತ್ರ ಓಡಾಡುತ್ತಿರುತ್ತದೆ.

– ಅರಕೆರೆ ದೇವರಾಜು, ಮೈಸೂರು.



ಅಡಗೂರು ಹೆಚ್.ವಿಶ್ವನಾಥ್
ಸಾಹಿತಿ–ರಾಜಕಾರಣಿ
ಮೊ: 9663996390

ಹಳ್ಳಿ ಹಕ್ಕಿ ಹಾಡು



# ಹಸಿದ ಶಾಲಾ ಮಕ್ಕಳ ಹೊಟ್ಟೆ ತುಂಬಿಸಿದ 'ಮಧ್ಯಾಹ್ನದ ಬಿಸಿಯೂಟ'



ರಾಜ್ಯದಲ್ಲಿ, 1998ರ ಕೊನೆಯ ಭಾಗದಲ್ಲಿ ನಮ್ಮ ಎಸ್.ಎಂ. ಕೃಷ್ಣ ಅವರ ಸರ್ಕಾರ ಅಸ್ತಿತ್ವಕ್ಕೆ ಬಂತು. ಅವರು, ನನ್ನನ್ನು ಶಾಲಾ ಶಿಕ್ಷಣ ಖಾತೆಯುಳ್ಳ ಸಚಿವನನ್ನಾಗಿ ಮಾಡಿ, ತಮ್ಮ ಸಂಪುಟದಲ್ಲಿ ಸ್ಥಾನ ಕೊಟ್ಟರು.

ಒಂದು ಸಾರಿ ನಾನು ಮತ್ತು ನಮ್ಮ ಇಲಾಖೆ ಅಧಿಕಾರಿಗಳು ಗುಲ್ಬರ್ಗಾದಿಂದ ಬೆಂಗಳೂರಿಗೆ ವಾಪಸ್ಸಾಗಲು ಹೈದರಾಬಾದ್ ವಿಮಾನ ನಿಲ್ದಾಣಕ್ಕೆ ಹೋಗುತ್ತಿದ್ದಾಗ, ಮಾರ್ಗ ಮಧ್ಯದಲ್ಲಿ ಯಾವುದೋ ಕಾರ್ಯ ನಿಮಿತ್ತ ನಮ್ಮ ಕಾರುಗಳನ್ನು ನಿಲ್ಲಿಸಿದೆವು. ಆ ಸಂದರ್ಭದಲ್ಲಿ ಒಬ್ಬ ಹೆಣ್ಣು ಮಗಳು ಗುಲ್ಬರ್ಗಾದ ಸುಡುಬಿಸಿಲಿನಲ್ಲಿ, ಕಾಲಿಗೆ ಚಪ್ಪಲಿಯೂ ಇಲ್ಲದೆ ಆ ಡಾಂಬರು ರಸ್ತೆಯಲ್ಲಿ ಬಹಳ ತರಾತುರಿಯಲ್ಲಿ ಹೋಗುತ್ತಿದ್ದಳು. ಆ ಹೆಣ್ಣು ಮಗಳನ್ನು ನಾವುಗಳು ನಿಲ್ಲಿಸಿ, ಯಾಕಾಗಿ ನೀನು ಇಷ್ಟೊಂದು ಬಿರ ಬಿರನೇ, ಅದೂ ಈ ಸುಡು ಬಿಸಿಲಿನಲ್ಲಿ ಹೋಗುತ್ತಿದ್ದೀಯಾ ಎಂದು ಕೇಳಿದಾಗ ಅವಳ ಉತ್ತರ; ನೋಡ್ರೀ ಸರ್ರ್ ಬೆಳಿಗ್ಗೆ ನನ್ನ ಮಗುವನ್ನು ಶಾಲೆಗೆ ಬಿಟ್ಟು ನಾನು ಈ ಕಡೆ ಕೂಲಿಗೆ ಬಂದಿದ್ದೀನ್ರಿ. ಇಷ್ಟು ಹೊತ್ತಾಯ್ತು ನನ್ನ ಮಗು ಅನ್ನಕ್ಕಾಗಿ ಯಾರ ಮನೆ ಬಾಗಿಲ ಬಡಿತಾ ಇದೆಯೋ ಎಂದು ದುಃಖಭರಿತವಾಗಿ ನುಡಿದಳು.

ಹಾಗಾದರೆ ಮಗುವಿಗೆ ತಿನ್ನಿಸಲು ರೊಟ್ಟಿ, ಅನ್ನ ಮಾಡಿಟ್ಟು ಬಂದಿದ್ದೀಯೋ ಹೇಗೆ? ಎಂದು ಕೇಳಿದಾಗ, ಅದಕ್ಕೆ ಆಕೆ ಕೊಟ್ಟ ಉತ್ತರ; ಇಲ್ರೀ ಸರ್ ಮನೆಯಲ್ಲಿ ಏನೂ ಇಲ್ಲ. ಅಲ್ಲಿ ಎಲ್ಲಿಯಾದರೂ, ಯಾರ ಮನೆಯಲ್ಲಾದರೂ ತಿರಿದು ತಿನ್ನಿಸಿ ಬರಬೇಕು ಎಂದರು. ಆ ತಾಯಿಯ ಕರುಳಿನ ಉತ್ತರ ನಮ್ಮೆಲ್ಲರ ಎದೆಗೆ ಇರಿದಂತಾಯ್ತು. ಈ ಕಡೆ ಮಗುವಿಗೆ ತಿನ್ನಿಸಲು ಮನೆಯಲ್ಲಿ ಏನೂ ಇಲ್ಲ. ಆ ಕಡೆ ಒಂದು ಹೊತ್ತಿನ ಕೂಲಿ ಹೋಯ್ತು ಆ ಹೆಣ್ಣು ಮಗಳಿಗೆ ಸಾಂತ್ವನ ಹೇಳಿ, ಕಳಿಸಿಕೊಟ್ಟ ಬಳಿಕ ನಾವುಗಳು ಅಲ್ಲಿಂದ ಹೊರಟು ಹೈದ್ರಾಬಾದ್ ವಿಮಾನ ನಿಲ್ದಾಣ ತಲುಪಿದೆವು.

ಅಂದು ವಿಮಾನ ಎರಡು ಗಂಟೆ ತಡವಾಗಿತ್ತು. ಒಳ್ಳೇದೇ ಆಯ್ತು ಅಂತಾ, ನಾವೆಲ್ಲರೂ ಅಲ್ಲಿಯೇ ಕುಳಿತು ಆ ಮಗುವಿನ ತಾಯಿಯ ಕರುಳಿನ ಕಥೆಯನ್ನೇ ಚರ್ಚೆ ಮಾಡುತ್ತಾ ಗಂಭೀರವಾಗಿ ಯೋಚಿಸಿದೆವು. ಯಾವುದೇ ಸರಕಾರಕ್ಕೆ ಹೃದಯ, ಮನಸ್ಸು ನಿಜವಾಗಿಯೂ ಇದ್ದರೆ ಇಂತಹ ಮಕ್ಕಳಿಗೆ **ಮಧ್ಯಾಹ್ನದ ಊಟ** ಕೊಡುವ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಅದಕ್ಕಾಗಿ ಯೋಜನೆಯೊಂದನ್ನು ರೂಪಿಸಲೇಬೇಕೆಂದು ಅಲ್ಲಿ ನಿಶ್ಚಯಿಸಿದೆವು. ನಾಳೆಯೇ ಮುಖ್ಯಮಂತ್ರಿಗಳನ್ನು ಭೇಟಿಯಾಗಿ ಅದರ ಬಗ್ಗೆ ಚರ್ಚಿಸಬೇಕೆಂದು ತೀರ್ಮಾನಿಸಿಕೊಂಡೆವು. ಅಲ್ಲಿಂದಲೇ ಮುಖ್ಯಮಂತ್ರಿಗಳ ಆಪ್ತ ಅಧಿಕಾರಿಗಳಿಗೆ ಫೋನ್ ಮಾಡಿ ಸಮಯ ನಿಗದಿ ಮಾಡಿಕೊಂಡೆವು.

ಮುಂದಿನ ದಿನ ನಿಗದಿತ ಸಮಯಕ್ಕೆ ನಮ್ಮ ಮುಖ್ಯಮಂತ್ರಿಗಳಾದ ಎಸ್.ಎಂ.ಕೃಷ್ಣರನ್ನು ಕಂಡು, ಗುಲ್ಬರ್ಗಾದ ಬಳಿ ನಾವು ಕಣ್ಣಾರೆ ಕಂಡ ಮಗುವಿನ ತಾಯಿಯ ಕರುಳಿನ ವೇದನೆಯನ್ನು ತಿಳಿಸಿದೆವು. ಅವರೂ ವಿಷಯವನ್ನು ಗಂಭೀರವಾಗಿ ತೆಗೆದುಕೊಂಡರು. ಕಣ್ಣಾರೆ ಅವರ ಉತ್ತರ; ನಿಮ್ಮ ಯೋಜನೆಗೆ ಸರಕಾರದಲ್ಲಿ ಹಣದ ಕೊರತೆ ಇದೆಯಲ್ಲಾ ಎಂದರು. ಆಗ ನಾವುಗಳು; ಸಾರ್

> ಇಂದು ನಮ್ಮ ಜನಪ್ರತಿನಿಧಿಗಳು, ಅಧಿಕಾರಶಾಹಿ ನಾಡ ಭವಿಷ್ಯವನ್ನು ಮರೆತು ಒಂದೊಂದು ರಾಜಕೀಯ ಪಕ್ಷದ ಪರವಾಗಿ ನಿಂತು ತಮಗೆ ಜನಾದೇಶ ಕೊಟ್ಟ ಜನರನ್ನು ಮರೆತು ಮೆರೆಯುತ್ತಿರುವುದು ನಿಜಕ್ಕೂ ವಿಷಾದನೀಯ.

ಯೋಜನೆಗೆ ಹಣದ ದಾರಿಯನ್ನು ಸಹ ಕಂಡುಕೊಂಡಿದ್ದೇವೆ. ಅದಕ್ಕೆ ನಿಮ್ಮ ಅಪ್ಪಣೆ ಅಷ್ಟೇ ಬೇಕಾಗಿರುವುದು. ಅದಕ್ಕೆ ಅವರು; ಹಾಗಾದರೆ ನಿಮ್ಮ ಪ್ರಯತ್ನ ಮುಂದುವರೆಯಲಿ ಎಂದು ಹಸಿರು ನಿಶಾನೆ ತೋರಿದರು.

ಮುಖ್ಯಮಂತ್ರಿಗಳ ಸಲಹೆಯಂತೆ ನಮ್ಮ ಖಾಸಗಿ ಶಿಕ್ಷಣ ಸಂಸ್ಥೆಗಳು ಬರೀ ಹತ್ತು ಮಕ್ಕಳಿಗೆ ಒಂದು ತರಗತಿ ತೆರೆದು ಅದಕ್ಕೆ ಅನುದಾನ ಪಡೆದುಕೊಳ್ಳುವುದು ಮತ್ತು ಶಿಕ್ಷಕರನ್ನು ನೇಮಿಸಿಕೊಳ್ಳುವುದು ಸಾಮಾನ್ಯ ವಾಡಿಕೆಯಾಗಿ ಬಿಟ್ಟಿತ್ತು. ಅದನ್ನು ತಪ್ಪಿಸಲು ಸರ್ವೀಸ್ ರೂಲ್ಸ್‌ಗೆ ತಿದ್ದುಪಡಿ ತರುವುದು ಮೊದಲ ಕೆಲಸವಾಗಿತ್ತು. ತಿದ್ದುಪಡಿ ತರಲು ಕಾನೂನಿನ ಕ್ರಮಗಳಿಗಾಗಿ ಸಿದ್ಧತೆ ನಡೆಸಿ, ಅದಕ್ಕಾಗಿ ಶಾಲಾ ಆಡಳಿತ ಮಂಡಳಿಗಳು ತಕರಾರು ಇದ್ದರೆ ಸರಕಾರಕ್ಕೆ ಸಲ್ಲಿಸುವುದೆಂದು ಸುತ್ತೋಲೆ ಹೊರಡಿಸಲಾಯಿತು. ಇದರಿಂದ ಸುಖಾಸುಮ್ಮನೆ ಅನುದಾನ ಪಡೆದುಕೊಳ್ಳುತ್ತಿದ್ದ ಶಾಲಾ ಆಡಳಿತ ಮಂಡಳಿಗಳು ಕೆರಳಿ ಕೆಂಡವಾದವು. ಸುಖಾಸುಮ್ಮನೆ ಸರ್ಕಾರದಿಂದ ಅನುದಾನ ಪಡೆಯುತ್ತಿದ್ದ ಇಂತಹ ಆಡಳಿತ ಮಂಡಳಿಗೆ ನಾವು ತಂದಂತಹ ಕಟ್ಟುನಿಟ್ಟಿನ ನಿಯಮ ಬಲವಾದ ಪೆಟ್ಟಾಗಿತ್ತು. ಎಲ್ಲಾ ಸಮುದಾಯದ ಶಾಲಾ ಆಡಳಿತ ಮಂಡಳಿ ವ್ಯವಸ್ಥಾಪಕರು, ಧರ್ಮಾಧಿಕಾರಿಗಳು ದೊಡ್ಡ ಮಟ್ಟದ ವಿರೋಧ ಮಾಡಿದರು. ಕೊನೆಗೆ ಆಡಳಿತ ಮಂಡಳಿಗಳು ರಾಜ್ಯ ಹೈಕೋರ್ಟ್ ಮೆಟ್ಟಿಲೇರಿ ಸರಕಾರದ ವಿರುದ್ಧ ತೊಡೆ ತಟ್ಟಿ ನಿಂತವು.

ನಮ್ಮ ಶಿಕ್ಷಣ ಇಲಾಖೆಯೂ ಆಡಳಿತ ಮಂಡಳಿಗಳ ವಿರುದ್ಧ ಕೋರ್ಟಿನಲ್ಲಿ ಕಾನೂನು ಸಮರ ಸಾರಲೇಬೇಕಾಯಿತು. ಆಡಳಿತ ಮಂಡಳಿಗಳು, ಕೋರ್ಟ್‌ನಲ್ಲಿ ಸ್ವಾತಂತ್ರ್ಯಪೂರ್ವದಿಂದಲೂ ನಾವುಗಳು ನಮ್ಮ ಆಸ್ತಿಗಳನ್ನು ಅಡವಿಟ್ಟು ಸಂಸ್ಥೆಗಳನ್ನು ನಡೆಸುತ್ತಿದ್ದೇವೆ. ಈಗ ಸರಕಾರ ಏಕಾಏಕಿ ಅನುದಾನವನ್ನು ಕಾನೂನಿನ ಮೂಲಕ ಕಡಿತ ಮಾಡಿ, ನಮ್ಮನ್ನು ನಿಯಂತ್ರಿಸಲು ಹೊರಟಿರುವುದು ಸರಿಯಲ್ಲ ಎಂಬ ವಾದವನ್ನು ಪ್ರಬಲವಾಗಿ ಮುಂದಿಟ್ಟವು.

ಅದಕ್ಕೆ ನಮ್ಮ ಶಿಕ್ಷಣ ಇಲಾಖೆಯು ಪ್ರತಿಯಾಗಿ, ಸರ್ಕಾರದ ಖಜಾನೆಯ ಹಣ ಹೇಗೆ ಪೋಲಾಗುತ್ತಿದೆ ಎಂದು ವಿವರಿಸಿದ್ದೆವು. ಮಠಗಳಲ್ಲಿ, ಮಸೀದಿಗಳಲ್ಲಿ, ಚರ್ಚ್‌ಗಳಲ್ಲಿ ಧರ್ಮಾಧಿಕಾರಿಗಳ ಕಾರ್ ಡ್ರೈವರ್‌ಗಳಿಂದ ಹಿಡಿದು, ಅಡುಗೆಯವರು, ಸೌದೆ ಒಡೆಯುವವರು, ಬಟ್ಟೆ ಒಗೆಯುವವರು, ಕ್ಲೀನಿಂಗ್ ಮಾಡುವವರು ಮುಂತಾಗಿ ಎಲ್ಲರ ಸಂಬಳವನ್ನು ಸರ್ಕಾರದಿಂದಲೇ ಮರೆಮಾಚಿ ಪಡೆಯುತ್ತಿದ್ದಾರೆ ಎಂಬ ಸತ್ಯವನ್ನು



ಕರ್ನಾಟಕ ರಾಜ್ಯದಲ್ಲಿ ಮೊಟ್ಟ ಮೊದಲ ಬಾರಿಗೆ ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಅರಕೇರಾದಲ್ಲಿ 9.11.2001ರಂದು ಶಾಲಾ ಮಕ್ಕಳಿಗೆ ಬಿಸಿಯೂಟ ಯೋಜನೆಗೆ ಚಾಲನೆ ನೀಡಿದ ಸಂದರ್ಭ.

ಕೋರ್ಟಿನ ಮುಂದೆ ಮಂಡಿಸುವುದರೊಂದಿಗೆ; ಇಂತಹವುಗಳಿಗೆ ಕಡಿವಾಣ ಹಾಕಿ ಉಳಿಸಿದ ಹಣವನ್ನು ಮಧ್ಯಾಹ್ನದ ಮಕ್ಕಳ ಬಿಸಿ ಊಟಕ್ಕೆ ಉಪಯೋಗಿಸುವ ಮೂಲಕ, ಹಸಿದ ಮಕ್ಕಳಿಗೆ ಅನ್ನ ಕೊಟ್ಟು, ಅಕ್ಷರ ಕಲಿಸುವ ಬೃಹತ್ ಯೋಜನೆಯ ಸ್ವರೂಪವನ್ನು ಕೋರ್ಟ್‌ಗೆ ಮನವರಿಕೆ ಮಾಡಿಕೊಟ್ಟೆವು. ಬೆಂಗಳೂರು ಲಾ ಕೋರ್ಟ್, ಲಾಯರ್‌ಗಳ ಅಸೋಸಿಯೇಷನ್ ಅಧ್ಯಕ್ಷರ ಮೂಲಕ ನ್ಯಾಯಾಧೀಶರುಗಳ ಗಮನಕ್ಕೆ ಸರ್ಕಾರದ ಇಂತಹ ಮಹದುದ್ದೇಶವನ್ನು ಪರೋಕ್ಷವಾಗಿ ತಲುಪಿಸುವಂತಹ ಸಾಹಸವನ್ನು ಸಹ ಮಾಡಲಾಯಿತು.

ವಾದ–ಪ್ರತಿವಾದಗಳ ನಂತರ ನಾಡಿನ ಉಚ್ಚ ನ್ಯಾಯಾಲಯ ನಾಡಿನ ಮಕ್ಕಳ ಅನ್ನ–ಅಕ್ಷರ–ಅಭಿವೃದ್ಧಿ–ಭವಿಷ್ಯದ ಬೆಳವಣಿಗೆಯ ದೃಷ್ಟಿಯ ನೆಲೆಗಟ್ಟಿನಲ್ಲಿ ತೀರ್ಮಾನವನ್ನು ಸರಕಾರದ ಪರವಾಗಿ ಘೋಷಿಸಿತು. ಇದು ಇಷ್ಟಕ್ಕೆ ನಿಲ್ಲಲಿಲ್ಲ. ಆಡಳಿತ ಮಂಡಳಿಯವರು ಹೈಕೋರ್ಟ್ ತೀರ್ಪಿನ ವಿರುದ್ಧ ದೇಶದ ಸುಪ್ರೀಂ ಕೋರ್ಟ್ ತಲುಪಿದರು. ಕರ್ನಾಟಕ ಸರಕಾರವೂ ಅದರಲ್ಲೂ ಮುಖ್ಯಮಂತ್ರಿಗಳಾದ ಎಸ್.ಎಂ.ಕೃಷ್ಣರವರ ವಿಶೇಷ ಆಸ್ಥೆ, ಸಹಕಾರದಿಂದ ಸುಪ್ರೀಂಕೋರ್ಟ್‌ನಲ್ಲಿ ನ್ಯಾಯವಾದಿಗಳ ಪರಿಶ್ರಮ, ಸಮರ್ಥ ವಾದದಿಂದ ತೀರ್ಪು ಮಕ್ಕಳ ಪರವಾಗಿ ಆಯಿತು.

ಸುಪ್ರೀಂಕೋರ್ಟ್‌ನ ಈ ಒಂದು ಐತಿಹಾಸಿಕ ತೀರ್ಪಿನಿಂದ ದೇಶದ ಭವಿಷ್ಯವನ್ನು ಬರೆಯುವ ಮಕ್ಕಳಿಗಾಗಿ ಕರ್ನಾಟಕ ಸರ್ಕಾರ ಜಾರಿಗೆ ತಂದ ಈ ಯೋಜನೆ ದೇಶಕ್ಕೆ ಅನುಕರಣೀಯ. ಹಸಿದ ಮಕ್ಕಳಿಗೆ ಅನ್ನ ಕೊಟ್ಟು, ಅಕ್ಷರ ಕಲಿಸುವ ಸದುದ್ದೇಶಿತ ಕಾರ್ಯಕ್ರಮ ಇಡೀ ದೇಶಕ್ಕೆ ವಿಸ್ತರಣೆ ಆಗಲಿ ಎಂದು ಕೋರ್ಟ್, ಕೇಂದ್ರ ಸರ್ಕಾರಕ್ಕೆ ಸೂಚನೆಯನ್ನು ಸಹ ನೀಡಿತು.

ನಮ್ಮ ಬೆನ್ನು ತಟ್ಟಿ ಬೆಂಬಲಿಸಿ, ನಮಗೆ ನೈತಿಕ ಬೆಂಬಲ ಕೊಟ್ಟವರು ನಮ್ಮ ಸುತ್ತೂರು ಮಠದ ವೀರಸಿಂಹಾಸನಾಧೀಶ್ವರರಾದ ಜಗದ್ಗುರು ಶ್ರೀ ಶ್ರೀ ಶ್ರೀ ದೇಶೀಕೇಂದ್ರ ಸ್ವಾಮಿಗಳು ಎಂದು ತಿಳಿಸಲು ಸಂತೋಷವಾಗುತ್ತದೆ. ಇಂದು ದೇಶದಲ್ಲಿ ಕೋಟ್ಯಾಂತರ ಶಾಲಾ ಮಕ್ಕಳು ಮಧ್ಯಾಹ್ನದ ಬಿಸಿ ಊಟವನ್ನು ಉಂಡು ಅಕ್ಷರವಂತರಾಗಿ ತಮ್ಮ ಬಾಳನ್ನು ಬೆಳಗಿಸಿಕೊಳ್ಳುವುದರೊಂದಿಗೆ ದೇಶದ ಭವಿಷ್ಯವನ್ನು ಬೆಳಗುತ್ತಿವೆ. ಆಗಿದ್ದರೆ, ಇದು ಭಾರತದ ಸ್ವಾತಂತ್ರ್ಯದ ಪರಿಕಲ್ಪನೆಯನ್ನು ಸಾರ್ಥಕ ಮಾಡಿದಂತಹ ಕಾರ್ಯಕ್ರಮವಲ್ಲವೇ?

ಸೋಮನಹಳ್ಳಿ ಮಲ್ಲಯ್ಯ ಕೃಷ್ಣ ಇಂದು ನಮ್ಮೊಂದಿಗಿಲ್ಲ. ಆದರೆ ಅವರು ಕೊಟ್ಟ ಅಕ್ಷರ ದಾಸೋಹ ಕಾರ್ಯಕ್ರಮ ಮುಂದುವರೆದಿದೆ, ಸಾರ್ಥಕವಾಗಿದೆ. ಕೆಲವು ತಿಂಗಳುಗಳ ಹಿಂದೆ ನಾನು ಮತ್ತು ನನ್ನ ಸ್ನೇಹಿತರು ಕೊಪ್ಪಳ ಗವಿಸಿದ್ದೇಶ್ವರ ಮಠಕ್ಕೆ ಭೇಟಿ ಕೊಟ್ಟಿದ್ದೆವು. ಅಂದು ಐದು ಸಾವಿರಕ್ಕೂ ಮೀರಿದ ಗ್ರಾಮೀಣ ಮಕ್ಕಳಿಗೆ ಅನ್ನ–ಅಕ್ಷರದೊಂದಿಗೆ, ಅವರಿಗೆ ಆಶ್ರಯ ದಾತರೂ ಆದ ಗವಿಮಠದ ಗವಿಸಿದ್ದೇಶ್ವರ ಸ್ವಾಮೀಜಿಗಳ ದರ್ಶನ ಮಾಡಿ, ಅವರ ಕಾಲಿಗೆರಗಲು ನಾವು ಹೋದಾಗ ಸ್ವಾಮಿಗಳು ನಮ್ಮನ್ನು ತಡೆದು, ಹೇಳಿದರು; ವಿಶ್ವನಾಥರೇ, ನೀವು ಶಿಕ್ಷಣ ಮಂತ್ರಿಗಳಾಗಿದ್ದಾಗ ಜಾರಿಗೆ ತಂದಂತಹ ಅಕ್ಷರ ದಾಸೋಹದ ಫಲಾನುಭವಿ ನಾನು. ಇಂದು ನಮ್ಮಂತಹ ಮಠ–ಮಾನ್ಯಗಳು, ಸಂಸ್ಥೆಗಳು ಹತ್ತು ಲಕ್ಷಕ್ಕೂ ಮೀರಿ ಅಕ್ಷರ ದಾಸೋಹದಲ್ಲಿ ತೊಡಗಿವೆ. ಆದರೆ, ನೀವು ರಾಜ್ಯಾದ್ಯಂತ 84 ಲಕ್ಷ ಶಾಲಾ ಮಕ್ಕಳಿಗೆ ಅಕ್ಷರ ದಾಸೋಹ ನೀಡಿದಂತಹ ಮಹಾ ದಾಸೋಹಿ ಎಂದು ನಮ್ಮನ್ನು ಹರಸಿದರು.

ಅಕ್ಷರ ದಾಸೋಹ ಯೋಜನೆ, ಅದರ ಅನುಷ್ಠಾನ ಇವೆಲ್ಲಕ್ಕೂ ಅಧಿಕಾರಿಗಳ ಸಂಪೂರ್ಣ ಸಹಕಾರ ಇಲ್ಲದಿದ್ದರೆ ಕಷ್ಟವಾಗುತ್ತಿತ್ತು. ಆದರೆ ನಮ್ಮೊಡನಿದ್ದ ಅಧಿಕಾರಿ ವರ್ಗದ ನಾಯಕರಾಗಿ, ಅಕ್ಷರ ದಾಸೋಹ ಕಾರ್ಯಕ್ರಮವನ್ನು ಅಕ್ಷರಶಃ ಕಾರ್ಯರೂಪಗೊಳಿಸಿದ ಅಂದಿನ ನಮ್ಮ ಇಲಾಖೆ ವರಿಷ್ಠಾಧಿಕಾರಿ ತ.ಮ. ವಿಜಯಭಾಸ್ಕರ್, ಭಾ.ಆ.ಸೇ. ಅವರ ನೆನಪು ಸಹ ನಮ್ಮೊಂದಿಗಿದೆ. ಎಲ್ಲಾ ಐ.ಎ.ಎಸ್. ಮತ್ತು ಕೆ.ಎ.ಎಸ್. ಅಧಿಕಾರಿಗಳು ವಿಜಯಭಾಸ್ಕರ್ ಅವರಂತೆ ಪ್ರಾಮಾಣಿಕವಾಗಿ ದುಡಿದರೆ ಕನ್ನಡ ನಾಡು ಚಿನ್ನದ ನಾಡಾಗುವುದರಲ್ಲಿ ಸಂದೇಹವೇ ಇಲ್ಲ.

ಆದರೆ, ಇಂದು ನಮ್ಮ ಜನಪ್ರತಿನಿಧಿಗಳು ಮತ್ತು ಅಧಿಕಾರಶಾಹಿ ನಾಡ ಭವಿಷ್ಯವನ್ನು ಮರೆತು ಒಂದೊಂದು ರಾಜಕೀಯ ಪಕ್ಷದ ಪರವಾಗಿ ನಿಂತು ತಮಗೆ ಜನಾದೇಶ ಕೊಟ್ಟ ಜನರನ್ನು ಮರೆತು ಮೆರೆಯುತ್ತಿರುವುದು ವಿಷಾದನೀಯ.

ಸರ್ಕಾರದ ಮಹತ್ವದ ಬಿಸಿಯೂಟ ಕಾರ್ಯಕ್ರಮ ಮೊದಲಿಗೆ ಪ್ರಾರಂಭ ಮಾಡಿದ್ದು ರಾಯಚೂರು ಜಿಲ್ಲೆ, ದೇವದುರ್ಗ ತಾಲೂಕಿನ ಅರಕೇರಾ ಗ್ರಾಮದಲ್ಲಿ. ಅದು ಅಂದು ಸಂಸದರಾಗಿದ್ದ ವೆಂಕಟೇಶ್ ನಾಯಕರವರ ಸ್ವಗ್ರಾಮ. ಕಾರ್ಯಕ್ರಮವನ್ನು ಸರ್ಕಾರಿ ಕಾರ್ಯಕ್ರಮವಾಗಿ ಬಿಂಬಿಸಲಾಯಿತೇ ವಿನಃ ಕಾಂಗ್ರೆಸ್ ಸರ್ಕಾರದ ಕಾರ್ಯಕ್ರಮ ಎಂದು ಹೇಳಲಿಲ್ಲ. ಹಾಗೇನಾದರೂ ಅದನ್ನು ಒಂದು ಪಕ್ಷದ ಕಾರ್ಯಕ್ರಮವಾಗಿ ಬಿಂಬಿಸಿದ್ದರೆ, ಇಷ್ಟರಲ್ಲಾಗಲೇ ಈ ಮಹಾ ಕಾರ್ಯಕ್ರಮ ಅವಸಾನವಾಗುತ್ತಿತ್ತು. ಹಾಗಾಗಿ ಎಲ್ಲರ ಸಹಕಾರದಿಂದ ಇಂದಿಗೂ ಯಶಸ್ವಿಯಾಗಿ ಮುಂದುವರೆಯುತ್ತಿದೆ.

ಬಿಸಿಯೂಟ ಕಾರ್ಯಕ್ರಮವನ್ನು ಕೆಲವು ಮುಖ್ಯಶಿಕ್ಷಕರು, ಶಿಕ್ಷಕರು ದುರುಪಯೋಗಪಡಿಸಿಕೊಳ್ಳುತ್ತಿರುವುದೂ ಉಂಟು. ಇದು ಸರ್ಕಾರದ ಗಮನದಲ್ಲಿದೆ. ಇದನ್ನು ತಪ್ಪಿಸಲು ಯೋಜನೆಯ ಕಾರ್ಯಾನುಷ್ಠಾನವನ್ನು ನಮ್ಮ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಇಲ್ಲವೇ ನಾವೇ ರಚಿಸಿರುವ ಎಸ್‌ಡಿಎಂಸಿ (School Development and Monitoring Committee)ಗಳಿಗೆ ವಹಿಸಿದರೆ ಉತ್ತಮ.

# ಕನ್ನಡ... ಕನ್ನಡ... ಸವಿಗನ್ನಡ



## ನಾದಲಹರಿ

ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ಮೊನ್ನೆ ಗೆಳತಿಯ ಮನೆಗೆ ಹೋಗಿದ್ದೆ. ತೀರಾ ಬೇಜಾರಿನಲ್ಲಿದ್ದಂತೆ ಕಂಡಳು. 'ಯಾಕೆ, ಏನಾಯಿತು' ಎಂದೆ. 'ಸಾಕಾಗಿದೆ ಕಣೆ. ಓದುವ ವಯಸ್ಸಿನಲ್ಲಿ ಓದಿನಲ್ಲಿ ಆಸಕ್ತಿ ಕಳೆದುಕೊಂಡರೆ, ಹೀಗೇ ಆಗುವುದು' ಎಂದಳು. 'ನಿನ್ನ ಒಗಟನ್ನು ಬಿಡಿಸು ಹೇಳು ತಾಯಿ' ಎಂದೆ. ಆಗ ಹೊರಗೆ ಬಂದದ್ದು ಇದು. ಅವಳ ಮಗಳಿಗೆ ಶಾಲೆಯಲ್ಲಿ ಕನ್ನಡದಲ್ಲಿಯೇ ಕಡಿಮೆ ಅಂಕಗಳು ಬರುತ್ತಿದೆಯಂತೆ. ಅದಕ್ಕೇ ಅವಳಿಗೆ ಸ್ವಲ್ಪ ಸಹಾಯ ಮಾಡೋಣ ಎಂದು ಕುಳಿತುಕೊಂಡರೆ, ಅವಳಿಗೆ ಗಾಬರಿ ಉಂಟಾಗಲು ಶುರು ಆಗಿದೆ. ಏಕೆಂದರೆ, ಮಗಳ ಪುಸ್ತಕದಲ್ಲಿರುವ ಅನೇಕ ಅಂಶಗಳು ಇವಳಿಗೇ ಗೊತ್ತಿಲ್ಲ ! ಕನ್ನಡ ಭಾಷೆಯ, ಸಾಹಿತ್ಯದ ಹಿರಿಮೆ, (ಇರುವ ಕೆಲವೇ) ಹಳಗನ್ನಡ ಪದ್ಯಗಳು, ವ್ಯಾಕರಣ ಎಲ್ಲವೂ ಇವಳನ್ನು ಹೆದರಿಸಲು ಪ್ರಾರಂಭಿಸಿವೆ! ಅವೆಲ್ಲವನ್ನೂ ಇವಳು ನಾನೂ ಒಟ್ಟಾಗಿಯೇ ಶಾಲಾ–ಕಾಲೇಜುಗಳಲ್ಲಿ ಕಲಿತಿದ್ದೆವು. ಆದರೆ, ನನಗೆ ನೆನಪಿರುವಂತೆ ಅವಳಿಗೆ ಆಗ ಓದಿಗಿಂತ ಇತರ ವಿಷಯಗಳಲ್ಲೇ ಹೆಚ್ಚಿನ ಆಸಕ್ತಿ ಇದ್ದುದು. ಈಗ ಅದು ತನ್ನ ಪರಿಣಾಮವನ್ನು ಬೀರುತ್ತಿದೆ.

ನಮ್ಮ ನಾಡು, ನುಡಿ, ಸಂಸ್ಕೃತಿ, ದೇಶ, ವೇಷ, ಸಾಹಿತ್ಯ ಇತ್ಯಾದಿ ವಿಷಯಗಳಲ್ಲಿ ತಂದೆ ತಾಯಂದಿರು ಆಸಕ್ತಿ ಬೆಳಸಿಕೊಂಡರೆ, ಮಕ್ಕಳಿಗೆ ಅದು ತಾನಾಗಿಯೇ ಹರಿದು ಬರುತ್ತದೆ ಎಂಬುದರಲ್ಲಿ ಸಂಶಯವೇನು? ಕನ್ನಡದ ಹಿರಿಮೆಗಳನ್ನು ಅರಿಯುತ್ತಾ ಹೋದಾಗಲಂತೂ ಎಂತಹ ಕನ್ನಡಿಗರಿಗೂ ರೋಮಾಂಚನ ಆಗುವುದರಲ್ಲಿ ಸಂಶಯವೇ ಇಲ್ಲ. ಸಾವಿರ ವರ್ಷಗಳ ಹಿಂದೆಯೇ ಪಂಪನಂತಹ ಪ್ರಬುದ್ಧ ಕವಿಯು 2 ಕಾವ್ಯಗಳನ್ನು ಬರೆದಿದ್ದಾನೆ ಎಂದರೆ, ಅವನಿಗಿಂತ ಹಿಂದೆ, ಅಂದರೆ ಕನ್ನಡವು ಹುಟ್ಟಿ, ಬೆಳೆದು, ಮಾತನಾಡಲು ಅಷ್ಟೇ ಅಲ್ಲದೆ ಸಾಹಿತ್ಯ ರಚನೆಗೂ ಒಗ್ಗುವಂತೆ ಅದು ಇನ್ನೆಷ್ಟು ಪುಷ್ಟಿಕರವಾಗಿದ್ದಿರಬೇಕು. ಅದಕ್ಕೆ ಮತ್ತೆಷ್ಟು ವರುಷಗಳು ಬೇಕಾಗಿದ್ದಿರಬಹುದು! ನಮಗೆ ಸಿಕ್ಕಿರುವ ಸಾಕ್ಷ್ಯಾಧಾರಗಳ ಮೇಲೆ ನಾವು ಅದನ್ನು 2 ಸಾವಿರ ವರ್ಷಗಳಿಗೂ ಹಿಂದಿನ ಭಾಷೆ ಎಂದು ಹೇಳುತ್ತೇವೆ. ರಾಮಾಯಣ, ಮಹಾಭಾರತದಂತಹ ಮಹಾಕಾವ್ಯಗಳಲ್ಲಿ, ಗ್ರೀಕ್ ಭಾಷೆಯಲ್ಲಿ ರಚಿತವಾಗಿರುವ ನಾಟಕಗಳಲ್ಲಿ, ಇತರ ಭಾಷಾ ಸಾಹಿತ್ಯದಲ್ಲಿ ಉಲ್ಲೇಖವಾಗಿರುವ ಕನ್ನಡ ನಾಡು–ಭಾಷೆ–ಜನರನ್ನು ಕುರಿತ ಮಾತುಗಳೂ ಸಹ ಪ್ರಮುಖ ಆಧಾರ ಹೌದು.

ಹೀಗೆ ಎಲ್ಲಾ ಆಕರಗಳನ್ನೂ ಆಮೂಲಾಗ್ರವಾಗಿ ಅಧ್ಯಯನ ಮಾಡಿ, ಸಿಕ್ಕಿರುವ ವಿವಿಧ ಪ್ರತಿಗಳೊಡನೆ ಹೋಲಿಸಿ, ಪ್ರತಿ ಪದ್ಯವನ್ನೋ, ಸಾಲನ್ನೋ, ಪದವನ್ನೋ ಆದ್ಯಂತವಾಗಿ ಪರಿಶೀಲಿಸಿ, ಕೊನೆಗೆ ಒಂದು ನಿರ್ಧಾರಕ್ಕೆ ಬರಲು, ವಿದ್ವಾಂಸರು ಅದೆಷ್ಟು ಕಷ್ಟಪಟ್ಟಿದ್ದಾರೆ ಗೊತ್ತೆ? ಕನ್ನಡ ಸಾಹಿತ್ಯಕ್ಕೆ ಅವರು ಸಲ್ಲಿಸಿರುವ ಅಮೂಲ್ಯ ಸೇವೆಯನ್ನು,

> ನಮ್ಮ ರಾಜ್ಯದಲ್ಲಿ ಕನ್ನಡ ಹೋರಾಟಗಾರರ ಗುಂಪು ಇರುವುದು ಎಲ್ಲರಿಗೂ ತಿಳಿದ ವಿಷಯ. ಎಲ್ಲೆಲ್ಲೂ ಕನ್ನಡ... ಕನ್ನಡ... ಎಂದೂ ಕೂಗುವ ಇವರಿಗೆ ಭಾಷೆಗೂ, ಲಿಪಿಗೂ ಇರುವ ವ್ಯತ್ಯಾಸ ತಿಳಿಯಬೇಕಿದೆ. ಕರ್ನಾಟಕದಲ್ಲಿ ಅಂಗಡಿ ಮುಂಗಟ್ಟುಗಳ ಮುಂದೆ ಹಾಕುವ ಫಲಕ ಅಥವಾ ಬೋರ್ಡ್‌ಗಳು ಕನ್ನಡದಲ್ಲಿ ಇರಬೇಕೆಂದು ಹೇಳುವುದರಲ್ಲಿ ಯಾವ ತಪ್ಪೂ ಇಲ್ಲ. ಆದರೆ ಕೇವಲ ಲಿಪಿ ಕನ್ನಡದ್ದಾಗಿಬಿಟ್ಟರೆ ಸಾಕೆ, ಭಾಷೆ ಬೇಡವೆ ಎಂಬುದು ನನ್ನ ತಿಳುವಳಿಕೆಗೆ ಮೀರಿದ್ದು.

ಕನ್ನಡದ ಮೇಲಿನ ಅವರ ಅತ್ಯಂತ ಅಭಿಮಾನವನ್ನು, ಕನ್ನಡಕ್ಕಾಗಿ ಅಹರ್ನಿಶಿ ದುಡಿಯಲು ತಯಾರಾದ ಆ ಮನಸುಗಳಿಗೆ ನಾವೇನು ಕೊಡಬಲ್ಲೆವು? ಕನ್ನಡ ನಾಡಿನಲ್ಲಿ ಅಷ್ಟೇ ಏಕೆ, ಭಾರತದಲ್ಲೇ ಎಂದರೂ ತಪ್ಪಿಲ್ಲ, ನಮ್ಮ ಕವಿಗಳಿಗೆ ಅವರ ಕಾವ್ಯದಲ್ಲಿ ಅಥವಾ ಕೃತಿಯಲ್ಲಿ ತಮ್ಮ ಬಗ್ಗೆ ಅಥವಾ ಸ್ವವಿವರಗಳನ್ನು ಹೇಳಿಕೊಳ್ಳುವುದು ಅಂತಹ ಮಹತ್ವದ ವಿಷಯ ಎಂದು ಅನ್ನಿಸಲೇ ಇಲ್ಲ. ಇದರಿಂದ ಕವಿಗಳ ಕಾಲ, ಸ್ಥಳ, ಸಮಕಾಲೀನ ಸಂಗತಿಗಳು ಇತ್ಯಾದಿಗಳೆಲ್ಲ ಗೋಜಲು ಗೋಜಲುಗಳಾಗಿ ಉಳಿದು ಬಿಡುವ ಸಾಧ್ಯತೆಯ ಬಗ್ಗೆ ಅವರು ತಲೆಕೆಡಿಸಿಕೊಳ್ಳಲೇ ಇಲ್ಲ. ಸಿಗಬಹುದಾದ ಬೇರೆ ಬೇರೆ ಆಕರಗಳಿಂದ ಅದನ್ನು ಹೆಕ್ಕಿ ತೆಗೆದು, ಸಾಧ್ಯಾ ಸಾಧ್ಯತೆಗಳ ಬಗ್ಗೆ ಚಿಂತಿಸಿ, ಸಾಧ್ಯವಾದಷ್ಟೂ ಸತ್ಯಕ್ಕೆ ಹತ್ತಿರವಾದ ಕವಿ ಸಂಗತಿಗಳನ್ನು ನಮ್ಮ ವಿದ್ವಾಂಸರು ನಮಗಾಗಿ ಬಿಟ್ಟು ಹೋಗಿದ್ದಾರೆ. (ಇದು ಗ್ರಂಥ ಸಂಪಾದನೆಯ ಒಂದು ಭಾಗ ಅಷ್ಟೇ.)ಅಂತಹ ಪ್ರಾತಃ ಸ್ಮರಣೀಯರ ಪಟ್ಟಿ ಬಹಳ ದೊಡ್ಡದಿದೆ. ಅವರಲ್ಲಿ ಕೆಲವರ ಹೆಸರನ್ನು ಹೇಳುವುದಾದರೆ, ಡಿ.ಎಲ್.ನರಸಿಂಹಾಚಾರ್, ರಾ.ನರಸಿಂಹಾಚಾರ್, ಗೋವಿಂದ ಪೈ, ಫ.ಗು.ಹಳಕಟ್ಟಿ, ಎಂ.ವಿ ಸೀತಾರಾಮಯ್ಯ, ಟಿ.ಎಸ್. ವೆಂಕಣ್ಣಯ್ಯ, ತೀ.ನಂ.ಶ್ರೀಕಂಠಯ್ಯ, ಎಲ್.ಬಸವರಾಜು, ಎ.ಆರ್. ಕೃಷ್ಣಶಾಸ್ತ್ರಿಗಳು, ಬೆನಕ ರಾಮರಾಯರು, ರಂ.ಶ್ರೀ ಮುಗಳಿ, ಎಂ.ಎಂ. ಕಲಬುರ್ಗಿ ಇತ್ಯಾದಿ ಅನೇಕ ಮಹನೀಯರುಗಳಿಗೆ ಇಂದು ನಾವು ಕೈಎತ್ತಿ ಮುಗಿಯಬೇಕು. ಅವರುಗಳ ನಿಸ್ವಾರ್ಥ ಸೇವೆಯಿಂದ ನಮಗೆ ಸುಲಭವಾಗಿ ಇಂದು ಕನ್ನಡ ಸಾಹಿತ್ಯ ಚರಿತ್ರೆಯನ್ನು ಪರಿಚಯ ಮಾಡಿಕೊಳ್ಳಲು ಸಾಧ್ಯವಾಗಿದೆ.

ನಮಗೆ ಸಿಕ್ಕಿರುವ ಮೊದಲ ಶಾಸನ ಹಲ್ಮಿಡಿ ಶಾಸನ. ಮೊದಲ ಗದ್ಯ– ಶಿವಕೋಟ್ಯಾಚಾರ್ಯರ ವಡ್ಡಾರಾಧನೆ. ಮೊದಲ ಕಾವ್ಯ ಪಂಪನ ಆದಿ ಪುರಾಣ ಮತ್ತು ವಿಕ್ರಮಾರ್ಜುನ ವಿಜಯಂ. ಮೊದಲ ಅಲಂಕಾರ ಶಾಸ್ತ್ರ ಕವಿರಾಜಮಾರ್ಗ. ಮೊದಲ ನಾಟಕ –ಸಿಂಗರಾರಿಯ 'ಮಿತ್ರ ವಿಂದಾ ಗೋವಿಂದಾ'. ಮೊದಲ ಸಾಮಾಜಿಕ ನಾಟಕ ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿಯ 'ಇಗ್ಗಪ್ಪ ಹೆಗಡೆಯ ವಿವಾಹ ಪ್ರಹಸನ'. ಕನ್ನಡ ನಾಡನ್ನು ಆಳಿರುವ ರಾಜಮನೆತನಗಳ ಕಡೆಗೆ ಒಮ್ಮೆ ಕಣ್ಣು ಹಾಯಿಸಿ. ಗಂಗ, ಕದಂಬ ರಾಷ್ಟ್ರಕೂಟ, ಚಾಲುಕ್ಯ, ಹೊಯ್ಸಳ, ವಿಜಯನಗರದ ಮೂರು ಅರಸು ಮನೆತನಗಳು, ಒಡೆಯರು–ಇವರೆಲ್ಲರೂ ಕನ್ನಡ ನಾಡಿನ ಅಭಿವೃದ್ಧಿಗಾಗಿ, ಒಳಿತಿಗಾಗಿ ಮಾಡಿರುವ ಕೆಲಸಗಳೆಷ್ಟು, ಅವರು ಕಟ್ಟಿಸಿರುವ ಕೆರೆ, ಬಾವಿ, ಕಾಲುವೆ, ದೇವಾಲಯ, ಬಸದಿ, ವಿಜಯ ಸ್ಥಂಭಗಳು ಇವೆಲ್ಲವೂ ಕನ್ನಡ ನಾಡಿನ ಆಗಿಹೋದ ವೈಭವಯುತ ಇತಿಹಾಸಕ್ಕೆ ಮೂಕ ಸಾಕ್ಷಿಯಾಗಿ ನಿಂತಿವೆ. ಕೇಳುವ ಕಿವಿ, ಅರಿಯುವ ಮನಸು ಇದ್ದಲ್ಲಿ, ಅವುಗಳ ಪಿಸುಮಾತು ಕೇಳಿಸೀತು, ಮನವನ್ನು ತಟ್ಟೀತು.

ನಮ್ಮ ರಾಜ್ಯದಲ್ಲಿ ಕನ್ನಡ ಹೋರಾಟಗಾರರ ಗುಂಪು ಇರುವುದು ಎಲ್ಲರಿಗೂ ತಿಳಿದ ವಿಷಯ. ಎಲ್ಲೆಲ್ಲೂ ಕನ್ನಡ... ಕನ್ನಡ... ಎಂದೂ ಕೂಗುವ ಇವರಿಗೆ ಭಾಷೆಗೂ, ಲಿಪಿಗೂ ಇರುವ ವ್ಯತ್ಯಾಸ ತಿಳಿಯಬೇಕಿದೆ. ಕರ್ನಾಟಕದಲ್ಲಿ ಅಂಗಡಿ ಮುಂಗಟ್ಟುಗಳ ಮುಂದೆ ಹಾಕುವ ಫಲಕ ಅಥವಾ ಬೋರ್ಡ್‌ಗಳು ಕನ್ನಡದಲ್ಲಿ ಇರಬೇಕೆಂದು ಹೇಳುವುದರಲ್ಲಿ ಯಾವ ತಪ್ಪೂ ಇಲ್ಲ. ಆದರೆ ಕೇವಲ ಲಿಪಿ ಕನ್ನಡದ್ದಾಗಿಬಿಟ್ಟರೆ ಸಾಕೆ, ಭಾಷೆ ಬೇಡವೆ ಎಂಬುದು ನನ್ನ ತಿಳುವಳಿಕೆಗೆ ಮೀರಿದ್ದು. ಇಂಗ್ಲೀಷಿನಲ್ಲಿ ಸುರೇಶ್ ಟೇಲರಿಂಗ್ ಹಾಲ್ ಅಂತಲೋ, ಕಿಚನ್ ನೀಡ್ಸ್ ಎಂತಲೋ ಇದ್ದುದನ್ನು ಕನ್ನಡ ಲಿಪಿಯಲ್ಲಿ ಬರೆದುಬಿಟ್ಟರೆ ಸಾಕೆ. ಸುರೇಶ್ ದರ್ಜಿ ಅಂಗಡಿ ಅಥವಾ ಬಟ್ಟೆ ಹೊಲೆಯುವ ಅಂಗಡಿ ಎಂಬುದು ಮತ್ತು ಅಡುಗೆಮನೆಯ ಅವಶ್ಯಕತೆಗಳು ಎಂಬುದು ಇನ್ನೂ ಸಮರ್ಪಕ ಅನುವಾದ ಅಲ್ಲವೇ. ಇದು ಭಾಷೆಯ ಮೇಲಿನ ಪ್ರೀತಿ ತಾನೆ. ಇದನ್ನು ಅರ್ಥ ಮಾಡಿಸುವುದು ಹೇಗೆ ಎಂಬುದು ನನಗೆ ಇನ್ನೂ ಗೊತ್ತಾಗದ ವಿಷಯವಾಗಿಯೇ ಉಳಿದಿದೆ.

ಇರಲಿ. ನನ್ನ ಗೆಳತಿಗೆ ಹೇಳಿದುದನ್ನೇ ಇಲ್ಲಿಯೂ ಹೇಳಿದ್ದೇನೆ. ಅದು ಸರಿ ಅನಿಸಿದರೆ ನಿಮ್ಮ ಮಕ್ಕಳಿಗೂ ಕನ್ನಡ ಸಾಹಿತ್ಯ, ಇತಿಹಾಸ, ನಾಡು ಇವುಗಳಲ್ಲಿ ಪ್ರೀತಿ ಹುಟ್ಟುವಂತೆ ಮಾಡಿ ಎಂಬುದಷ್ಟೇ ನನ್ನ ಕಳಕಳಿಯ ಪ್ರಾರ್ಥನೆ.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581/1980 E-mail address: mysoorumithra@gmail.com For advertisements: mysoorumithra@gmail.com*

ಮೈಸೂರು ಮಿತ್ರ ಭಾನುವಾರ 6 ಏಪ್ರಿಲ್ 2025

## ಕರ್ಮ ಸಿದ್ಧಾಂತದ ಬಗ್ಗೆ ಯುದ್ಧ ಸಾರಿದ್ದ ಗೌತಮ ಬುದ್ಧ

### ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ

ಮೈಸೂರು,ಏ.5(ಎಂಟಿವೈ)– ಶತಮಾನಗಳಿಂದ ನಮ್ಮನ್ನು ಕೊಲ್ಲುತ್ತಿರುವ ಕರ್ಮ ಸಿದ್ಧಾಂತ ನರೇಂದ್ರ ಮೋದಿ ಅವರು ಪ್ರಧಾನಿಯಾದ ನಂತರ ವೇಗ ಪಡೆದುಕೊಂಡಿರುವುದು ದುರಂತ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ವಿಷಾದಿಸಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಭವನದಲ್ಲಿ ಡಾ.ಅಂಬೇಡ್ಕರ್ ಸಾಹಿತ್ಯ ಅಕಾಡೆಮಿ, ತಥಾಗತ ಬುದ್ಧ ವಿಹಾರ ನಂಜನಗೂಡು, ವಿಶ್ವಮೈತ್ರಿ ಬುದ್ಧ ವಿಹಾರ ಮೈಸೂರು, ದಲಿತ ವಿದ್ಯಾರ್ಥಿ ಒಕ್ಕೂಟ ಮತ್ತು ಸಂಶೋಧಕರ ಸಂಘದ ಸಹಯೋಗದಲ್ಲಿ ಆಯೋಜಿಸಿರುವ ಎರಡು ದಿನಗಳ ಮಾನವ ಮೈತ್ರಿ ಸಂಪದ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಕರ್ಮ ಸಿದ್ಧಾಂತದ ವಿರುದ್ಧ ಮೊದಲು ಯುದ್ಧ ಸಾರಿದವರು ಗೌತಮ ಬುದ್ಧ. ಹಿರೋಶಿಮಾ–ನಾಗಸಾಕಿ ಮೇಲೆ ಅಣುಬಾಂಬ್ ದಾಳಿ ನಡೆದು ಅಲ್ಲಿನ ವಾತಾವರಣ ಸರ್ವನಾಶವಾಯಿತು. ಆದರೆ, ಅಲ್ಲಿನ ಜನ 20 ವರ್ಷದಲ್ಲೇ ಮತ್ತೆ ದೇಶ ಕಟ್ಟಿದರು. ಕರ್ಮ ಸಿದ್ಧಾಂತ


ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಭವನದಲ್ಲಿ ನಡೆದ ಎರಡು ದಿನಗಳ ಮಾನವ ಮೈತ್ರಿ ಸಂಪದ ಸಮ್ಮೇಳನವನ್ನು ಡಾ.ಅಂಬೇಡ್ಕರ್, ಬುದ್ಧನ ವಿಗ್ರಹಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಉದ್ಘಾಟಿಸಿದರು.

ಶತಮಾನಗಳಿಂದ ನಮ್ಮನ್ನು ಕೊಲ್ಲುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಸಾಹೇಬರು ಅಧಿಕಾರಕ್ಕೆ ಬಂದ ನಂತರ ಎಲ್ಲರಿಗೂ ಅಪಾಯಕಾರಿಯಾಗಿರುವ ಕರ್ಮ ಸಿದ್ಧಾಂತದ ವೇಗ ದ್ವಿಗುಣಗೊಂಡಿದೆ ಎಂದು ಅಸಮಧಾನ ವ್ಯಕ್ತಪಡಿಸಿದರು.

ಜನರು ಶತಮಾನಗಳಿಂದ ನೋಡದೇ ಇರುವುದನ್ನೇ ನಂಬುತ್ತಿದ್ದಾರೆ. ಸುಳ್ಳು, ಕಟ್ಟುಕತೆಯನ್ನು ನಂಬುವಂತೆ ಶಾಸ್ತ್ರ ಪುರಾಣ ಕಟ್ಟಲಾಗಿದೆ. ಪ್ರಗತಿ ಆಗದಂತೆ ಧರ್ಮ ಸೂಕ್ಷ್ಮಗಳನ್ನು ಹೇಳಿಕೊಂಡು ಬಂದಿದ್ದೇವೆ. ಈ ಕರ್ಮ ಸಿದ್ಧಾಂತವನ್ನು ಮೊದಲು ಪ್ರಶ್ನಿಸಿ ಮನುಷ್ಯರಿಗೆ ಘನತೆ ತಂದುಕೊಟ್ಟವರು ಬುದ್ಧ. ಆ ಕಾರಣಕ್ಕಾಗಿಯೇ ವರ್ತಮಾನ ಕಾಲದಲ್ಲೂ ಬುದ್ಧ ಒಗ್ಗುತ್ತಲೇ ಇದ್ದಾರೆ ಎಂದರು.

ಉತ್ತರಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆದ ಕುಂಭಮೇಳದಲ್ಲಿ 66 ಕೋಟಿ ಜನ ಪುಣ್ಯಸ್ನಾನ ಮಾಡಿದರು ಎಂದು ಹೇಳುತ್ತಾರೆ. ಇದರಿಂದ ಯೋಗಿ ಆದಿತ್ಯನಾಥ ಸರ್ಕಾರಕ್ಕೆ ಆದಾಯ ಬಂದಿದೆ. ಇದರಿಂದ ಜನರಿಗೆ ಏನು ಸಿಕ್ಕಿದೆ ಎಂದು ಪ್ರಶ್ನಿಸಿಕೊಳ್ಳಬೇಕು?. ಗಗನಯಾತ್ರಿ ಸುನೀತಾ ವಿಲಿಯಮ್ಸ್ ಬಾಹ್ಯಾಕಾಶದಲ್ಲಿ 9 ತಿಂಗಳು ಸಿಲುಕಿದ ನಂತರ ಭೂಮಿಗೆ ವಾಪಸ್ಸಾಗಿದ್ದಾರೆ. ಇದರಿಂದ ಮಾಹಿತಿ, ತಂತ್ರಜ್ಞಾನ ಎಷ್ಟರ ಮಟ್ಟಿಗೆ ಬೆಳೆದಿದೆ ಎಂದು ತಿಳಿಯಬಹುದು ಎಂದರು.

ಅಂಬೇಡ್ಕರ್ ಜಗತ್ತಿನ ಎಲ್ಲ ಜ್ಞಾನ ಧಾರೆಗಳನ್ನು ಅಧ್ಯಯನ ಮಾಡಿ ಹೃದಯಕ್ಕೆ ಹತ್ತಿರವಾಗುವ ಧರ್ಮ ಬೌದ್ಧ ಎಂದು ಹೇಳಿದ್ದಾರೆ. ಅದನ್ನು ನಾವು ಪಾಲನೆ ಮಾಡಬೇಕು ಎಂದರು.

ಇದಕ್ಕೂ ಮೊದಲು ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಡಾ.ಬಿ.ಆರ್. ಅಂಬೇಡ್ಕರ್ ಮಾರ್ಗದರ್ಶನದಲ್ಲಿ ಧಮ್ಮ ಪಯಣ ಆರಂಭವಾಯಿತು. ಮೈತ್ರಿ ನಮ್ಮೆಲ್ಲರಲ್ಲೂ ಬರಬೇಕು. ಧಮ್ಮ ಪಯಣ ಯಾರು ಬೇಕಾದರೂ ತೆಗೆದುಕೊಂಡು ಹೋಗಬೇಕು. ಅದನ್ನು ರಾಷ್ಟ್ರಕ್ಕೆ ವಿಸ್ತರಿಸುವ ಕೆಲಸವನ್ನು ಮಾಡಬೇಕು ಎಂದರು.

ನಿವೃತ್ತ ಐಪಿಎಸ್ ಅಧಿಕಾರಿ ಮರಿಸ್ವಾಮಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕವಿ ಮೂಡ್ನಾಕೂಡು ಚಿನ್ನಸ್ವಾಮಿ, ಕಲಬುರಗಿ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ ಮುಖ್ಯಸ್ಥ ಡಾ.ಹೆಚ್.ಟಿ.ಪೋತೆ ಉಪಸ್ಥಿತರಿದ್ದರು. ಲೇಖಕ ಸಿ.ಹರಕುಮಾರ್ ಸ್ವಾಗತಿಸಿದರು. ಮಲ್ಕುಂಡಿ ಮಹದೇವಸ್ವಾಮಿ ನಿರೂಪಿಸಿದರು.

ಸಭಾ ಕಾರ್ಯಕ್ರಮಕ್ಕೂ ಮುನ್ನ ನಡೆದ ಧಮ್ಮೋಪದೇಶ ಪಂಚಶೀಲ ತಿಸರಣದಲ್ಲಿ ಬೆಂಗಳೂರಿನ ಮಹಾಬೋಧಿ ಆನಂದ ಥೇರೋ ಬಂತೇಜಿ, ಬೌದ್ಧ ಬಿಕ್ಕುಗಳಾದ ಸುಗತಪಾಲ ಬಂತೇಜಿ, ಭಂತೆ ಸುಮನ, ಮಾತೆ ಗೌತಮಿ, ಸಂಶೋಧಕರ ಸಂಘದ ಅಧ್ಯಕ್ಷ ಶಿವಶಂಕರ್, ದಲಿತ ವಿದ್ಯಾರ್ಥಿ ಒಕ್ಕೂಟದ ಪುನೀತ್ ಉಪಸ್ಥಿತರಿದ್ದರು.

## ರಾಜಕೀಯಕ್ಕೆ ಬುದ್ಧ ಧಮ್ಮ ಕಲಿಸುವುದು ಮುಖ್ಯವೆಂದು ಅಂಬೇಡ್ಕರ್ ಭಾವಿಸಿದ್ದರು

### ಸಂಸ್ಕೃತಿ ಚಿಂತಕ ಡಾ.ಬಂಜಗೆರೆ ಜಯಪ್ರಕಾಶ್ ಅಭಿಮತ

ಮೈಸೂರು,ಏ.5(ಪಿಎಂ)– ಬುದ್ಧ ಧಮ್ಮಕ್ಕೆ ರಾಜಕೀಯ ಕಲಿಸಬೇಕಿಲ್ಲ. ಆದರೆ ರಾಜಕೀಯಕ್ಕೆ ಬುದ್ಧ ಧಮ್ಮ ಕಲಿಸುವುದು ಅತ್ಯಂತ ಮುಖ್ಯವೆಂದು ಬಾಬಾ ಸಾಹೇಬ್ ಅಂಬೇಡ್ಕರ್ ಭಾವಿಸಿದ್ದರು. ಏಕೆಂದರೆ ಬುದ್ಧ ಧಮ್ಮ ಇಲ್ಲದೇ ನಾವು ದೇಶವನ್ನು ಮುನ್ನಡೆಸಲು ಸಾಧ್ಯವಿಲ್ಲ ಎಂಬುದು ಅವರ ಗಟ್ಟಿ ನಿಲುವಾಗಿತ್ತು ಎಂದು ಸಂಸ್ಕೃತಿ ಚಿಂತಕ ಡಾ.ಬಂಜಗೆರೆ ಜಯಪ್ರಕಾಶ್ ಹೇಳಿದರು.

ಮಾನವ ಮೈತ್ರಿ ಸಂಪದ ಸಮ್ಮೇಳನದ 2ನೇ ಗೋಷ್ಠಿಯ ಅಧ್ಯಕ್ಷತೆ ವಹಿಸಿ ಶನಿವಾರ ಮಾತನಾಡಿದ ಅವರು, ನಮ್ಮ ಭಾರತದ ಸಂವಿಧಾನವು ಬುದ್ಧ ಧಮ್ಮ ಹೊರತಾಗಿಲ್ಲ. ಸಂವಿಧಾನದಲ್ಲಿರುವ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ಎಂಬ ಮೂರು ಅಂಶಗಳನ್ನು ಅಂಬೇಡ್ಕರ್ ಅವರು ಬುದ್ಧ ಧಮ್ಮದಿಂದ ಆಯ್ದುಕೊಂಡಿದ್ದಾರೆ ಅವುಗಳೇ ಪ್ರಜ್ಞಾ, ಕರುಣೆ ಮತ್ತು ಮೈತ್ರಿಯಾಗಿವೆ. ಅವುಗಳನ್ನು ಅಳವಡಿಸಿಕೊಳ್ಳಲು ಧರ್ಮ ಗ್ರಂಥದ ರೀತಿಯಲ್ಲಿ ಸಂವಿಧಾನ ಇದ್ದು, ಅದರ ಅನುಸಾರ ನಾವು ನಡೆದರೆ ಬುದ್ಧ ಧಮ್ಮವನ್ನೇ ಪಾಲಿಸಿ ದಂತೆ ಎಂದು ತಿಳಿಸಿದರು.


ಜಯಪ್ರಕಾಶ್

ಬುದ್ಧ ತನ್ನ ಧಮ್ಮದಲ್ಲಿ 'ಅನಾತ್ಮ' ಎಂದು ಉಲ್ಲೇಖಿಸಿರುವಾಗ ಆತ್ಮ ಇದೆ ಎಂದು ಹೇಳಲು ಹೇಗೆ ಸಾಧ್ಯ. ಇದು ಯಾರೋ ಸೇರಿಸಿರಬೇಕೆಂದು ಅಂಬೇಡ್ಕರ್ ಹೇಳಿದ್ದಾರೆ ಎಂದು ತಿಳಿಸಿದರು.

ಆತ್ಮ ಇಲ್ಲವಾದ್ದರಿಂದ ಪುನರ್ ಜನ್ಮವೂ ಇಲ್ಲ. ಪುನರ್ ಜನ್ಮ ಇಲ್ಲವಾದ ಕಾರಣ ಕರ್ಮಗಳು ಬೆನ್ನಟ್ಟಿ ಬರುತ್ತವೆ ಎಂಬ ವಾದದಲ್ಲಿ ಸತ್ಯವಿಲ್ಲ. ನಾನು ಸ್ವೀಕರಿಸಿದ ಧಮ್ಮದಲ್ಲಿ ಆತ್ಮ, ಪುನರ್ ಜನ್ಮ ಇಲ್ಲ. ಅದೆಲ್ಲವೂ ಸುಳ್ಳು, ಕಟ್ಟುಕಥೆ ಎಂದು ಅಂಬೇಡ್ಕರ್ ಪ್ರತಿಪಾದಿಸಿದ್ದಾರೆ ಎಂದರು.

ಇದಕ್ಕೂ ಮುನ್ನ 'ಬಾಬಾ ಸಾಹೇಬರ ಜ್ಞಾನೋದಯದ ನಂತರ ಧಮ್ಮ ಮತ್ತು ನಾವು–ನೀವು' ಕುರಿತು ಸಹಾಯಕ ಪ್ರಾಧ್ಯಾಪಕ ಅಪ್ಪಗೆರೆ ಸೋಮಶೇಖರ್, 'ಪರಂಪರೆಯ ಕೊಳಕು ಹಾಗೂ ಆಧುನಿಕ ವಿಚಾರಗಳೆರಡಕ್ಕೂ ಬುದ್ಧನೇ ದಿವ್ಯೌಷಧ' ಕುರಿತು ಅಕ್ಕ ಐಎಎಸ್ ಅಕಾಡೆಮಿ ತರಬೇತುದಾರ ಡಾ.ಶಿವಕುಮಾರ್ ವಿಚಾರ ಮಂಡಿಸಿದರು. ಟಿ.ನರಸೀಪುರ ತಾಲೂಕು ಕೊಳತ್ತೂರು ಬುದ್ಧವಿಹಾರದ ಸುಗತಪಾಲ ಬಂತೇಜಿ ಸಾನಿಧ್ಯ ವಹಿಸಿದ್ದರು.

## ಅಪ್ಪು ಸ್ಮರಣಾರ್ಥ ಗೀತಲಹರಿ


ಗೀತ ಲಹರಿ–ಕನ್ನಡ ಮತ್ತು ಹಿಂದಿ ಗೀತೆಗಳ ಕರೋಕೆ ಗಾಯನ ಕಾರ್ಯಕ್ರಮ

ಮೈಸೂರು, ಏ.5(ಎಂಕೆ)– ಮೈಸೂರಿನ ನಾದಬ್ರಹ್ಮ ಸಂಗೀತ ಸಭಾದಲ್ಲಿ ನಯನ ಮ್ಯೂಸಿಕಲ್ ಗ್ರೂಪ್ಸ್ ವತಿಯಿಂದ ಡಾ.ಪುನೀತ್ ರಾಜ್‌ಕುಮಾರ್ ಸ್ಮರಣಾರ್ಥ ಗೀತ ಲಹರಿ–ಕನ್ನಡ ಮತ್ತು ಹಿಂದಿ ಗೀತೆಗಳ ಕರೋಕೆ ಗಾಯನ ಕಾರ್ಯಕ್ರಮ ನಡೆಯಿತು.

ಶ್ರೀಕಂಠರಾವ್ ನೇತೃತ್ವದಲ್ಲಿ ಗಾಯಕರಾದ ಎ.ಸಿ.ರವಿ, ರಾಜ್ ಕಿಶೋರ್, ನಂಜುಂಡಸ್ವಾಮಿ, ಬಾಬು, ಅನಿಲ್ ಕುಮಾರ್, ಗಣೇಶ್, ನಾಗೇಂದ್ರ ಶ್ರೇಷ್ಠ ಲಕ್ಷ್ಮೀ, ರಾವ್, ನಯನ, ಸುಮಲತಾ, ಕವಿತಾ ಕಾಮತ್, ತೇಜಾವತಿ, ಮಧು, 'ಬೆಳದಿಂಗಳಾಗಿ ಬಾ', 'ನಿನ್ನಿಂದಲೆ', 'ಯಾರೇ ಬಂದರೂ ಎದುರ್ಯಾರೆ', 'ಹೃದಯವೇ ನಿನ್ನ ಹೆಸರಿಗೆ', 'ಮಧುಮಾಸ ಚಂದ್ರಮ', 'ಉಸಿರಾಗುವೆ, ಒಲವಿನ ಉಡುಗೊರೆ' ಸೇರಿದಂತೆ 20ಕ್ಕೂ ಹೆಚ್ಚು ಸುಮಧುರ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡಿ ರಂಜಿಸಿದರು.

ಹಿರಿಯ ಸಮಾಜ ಸೇವಕ ಕೆ. ರಘುರಾಂ ವಾಜಪೇಯಿ ಕಾರ್ಯಕ್ರಮ ಉದ್ಘಾಟಿಸಿದರು. ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ನಾಗರಾಜ ವಿ. ಬೈರಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಹೋಟೆಲ್ ಮಾಲೀಕರಾದ ರವಿ ಶಾಸ್ತ್ರಿ, ರಘು, ಡಾ.ರಾಜ್‌ಕುಮಾರ್ ಸಂಬಂಧಿ ಶ್ರೀನಿವಾಸ್, ಕೆಇಬಿ ಪ್ರಥಮ ದರ್ಜೆ ಗುತ್ತಿಗೆದಾರ ಅನಿಲ್ ಕುಮಾರ್, ಮಂಜುನಾಥ್, ಸುಮಾ ರಾಜ್ ಕುಮಾರ್, ಎ.ಸಿ.ರವಿ ಮತ್ತಿತರರಿದ್ದರು.

## ಏ.21ರಿಂದ ಮೈಸೂರಲ್ಲಿ ರಾಷ್ಟ್ರೀಯ ಹಿರಿಯ ಅಥ್ಲೆಟಿಕ್ ಕ್ರೀಡಾಕೂಟ

### ಅರ್ಜುನ, ದ್ರೋಣ, ಪದ್ಮ ಪ್ರಶಸ್ತಿ ಪುರಸ್ಕೃತರು ಕ್ರೀಡಾಕೂಟದಲ್ಲಿ ಭಾಗಿ

ಮೈಸೂರು, ಏ.5(ಜಿಎ)– ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ವೆಟರನ್ ಅಥ್ಲೆಟಿಕ್ಸ್ ಫೆಡರೇಶನ್ ಆಫ್ ಇಂಡಿಯಾ ವತಿಯಿಂದ ಏ.21, 22, 23ರಂದು 44ನೇ ರಾಷ್ಟ್ರೀಯ ಹಿರಿಯರ ಅಥ್ಲೆಟಿಕ್ ಕ್ರೀಡಾಕೂಟವನ್ನು ಏರ್ಪಡಿಸಲಾಗಿದೆ ಎಂದು ವೆಟರನ್ ಅಥ್ಲೆಟಿಕ್ಸ್ ಫೆಡರೇಶನ್ ಆಫ್ ಇಂಡಿಯಾ ಅಧ್ಯಕ್ಷ ಡಾ.ಎಂ.ಆರ್.ರಂಗನಾಥ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಕ್ರೀಡಾಕೂಟಕ್ಕೆ ನಮ್ಮ ರಾಷ್ಟ್ರದ ಹಿರಿಯ ಕ್ರೀಡಾಪಟುಗಳು, 30 ವರ್ಷ ಮೇಲ್ಪಟ್ಟು ಪುರುಷ, ಮಹಿಳೆಯರು ಭಾಗವಹಿಸಲಿದ್ದಾರೆ. ತಮಿಳುನಾಡು, ಕೇರಳ, ಪಂಜಾಬ್, ಚಂಡೀಗಡ್, ಹರಿಯಾಣ, ರಾಜಸ್ಥಾನ್, ಕರ್ನಾಟಕ, ಮಧ್ಯಪ್ರದೇಶ ದೆಹಲಿ, ಮಹಾರಾಷ್ಟ್ರ ಆಂಧ್ರಪ್ರದೇಶ, ಛತ್ತೀಸ್ಗಡ, ಉತ್ತರಪ್ರದೇಶ, ಪಶ್ಚಿಮಬಂಗಾಳ ರಾಜ್ಯಗಳಿಂದ 1520 ಕ್ಕೂ ಹೆಚ್ಚು ಕ್ರೀಡಾಪಟುಗಳು ಪಾಲ್ಗೊಳ್ಳಲಿದ್ದಾರೆ ಎಂದರು.

ಭಾರತ ದೇಶವನ್ನು ಪ್ರತಿನಿಧಿಸಿದ ಕ್ರೀಡಾಪಟುಗಳು ಹಾಗೂ ಅರ್ಜುನ್ ಪ್ರಶಸ್ತಿ, ದ್ರೋಣ ಪ್ರಶಸ್ತಿ, ಪದ್ಮ ಪ್ರಶಸ್ತಿ ಪಡೆದವರು ಸಹ ಭಾಗವಹಿಸಲಿದ್ದಾರೆ. ಸೇನೆ, ರೈಲ್ವೆ ಹಾಗೂ ಬೃಹತ್ ಕೈಗಾರಿಕೆಗಳಲ್ಲಿರುವ ಉದ್ಯೋಗಿಗಳು ಕ್ರೀಡಾಕೂಟದಲ್ಲಿ ಭಾಗವಹಿಸುವರು. ಈ ಕ್ರೀಡಾಕೂಟವು ಭಾರತದ ಅಥ್ಲೆಟಿಕ್ ಫೆಡರೇಶನ್ ಆಫ್ ಇಂಡಿಯಾ ನಿಯಮಗಳು ಹಾಗೂ ವಿಶ್ವ ಅಥ್ಲೆಟಿಕ್ ಫೆಡರೇಶನ್ ನಿಯಮಗಳ ಅನ್ವಯ ನಡೆಸಲಾಗುತ್ತದೆ. ಗೆದ್ದ ಕ್ರೀಡಾಪಟುಗಳನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ಏಷ್ಯಾ ಕ್ರೀಡಾಕೂಟ, ವಿಶ್ವ ಕ್ರೀಡಾಕೂಟಕ್ಕೆ ಆಯ್ಕೆ ಮಾಡಲಾಗುತ್ತದೆ ಎಂದು ತಿಳಿಸಿದರು.

ಮೂರು ದಿನಗಳ ಕಾಲ ಮೈಸೂರಿನಲ್ಲಿ ನಡೆಯುತ್ತಿರುವುದು ನಮ್ಮ ರಾಜ್ಯದ ಹೆಮ್ಮೆ. ಅಲ್ಲದೆ ಮೈಸೂರಿನ ವೈಭವವನ್ನು ಬೇರೆ ರಾಜ್ಯದ ಕ್ರೀಡಾಪಟುಗಳಿಗೆ ಅರಿವು ಮೂಡಿಸುವ ಸಂಬಂಧ ಈ ಕ್ರೀಡಾಕೂಟ ಏರ್ಪಡಿಸಲಾಗಿದೆ. ನಮ್ಮ ಫೆಡರೇಶನ್ ವತಿಯಿಂದ ಕ್ರೀಡಾಪಟುಗಳಿಗೆ ಉಚಿತ ಊಟ, ವಸತಿ ಕಲ್ಪಿಸಲಾಗಿದ್ದು, ಗೆದ್ದ ಕ್ರೀಡಾಪಟುಗಳಿಗೆ ಪ್ರಶಸ್ತಿ ಪತ್ರ ಮತ್ತು ಪದಕ ನೀಡಲಾಗುತ್ತದೆ. ಕ್ರೀಡಾ ಪ್ರೇಮಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕ್ರೀಡಾಪಟುಗಳಿಗೆ ಉತ್ತೇಜಿಸಿ ಎಂದರು.

ಸುದ್ದಿಗೋಷ್ಠಿಯಲ್ಲಿ ವೆಟರನ್ ಅಥ್ಲೆಟಿಕ್ ಫೆಡರೇಶನ್ ಆಫ್ ಇಂಡಿಯಾ ಕಾರ್ಯದರ್ಶಿ ಜಿ.ರಾಮಮೂರ್ತಿ, ಸಹ ಕಾರ್ಯದರ್ಶಿ ವೇಣುಗೋಪಾಲ್, ನಿರ್ದೇಶಕರಾದ ಪ್ರವೀಣ್ ನಾಯಕ್, ಎಂ.ಎನ್.ನಾಗೇಶ್, ಆರ್.ಪ್ರದೀಪ್ ಕುಮಾರ್ ಉಪಸ್ಥಿತರಿದ್ದರು.

## ಇಂದು ರೈತ ಸಂಪರ್ಕ ಕೇಂದ್ರಗಳು ಓಪನ್

ಮೈಸೂರು,ಏ.5– ಮೈಸೂರು ಜಿಲ್ಲೆಯ ಎಲ್ಲಾ ತಾಲೂಕಿನಲ್ಲಿ ಉತ್ತಮ ಮಳೆಯಾಗಿರುವ ಹಿನ್ನೆಲೆಯಲ್ಲಿ ಎಲ್ಲಾ ರೈತ ಸಂಪರ್ಕ ಕೇಂದ್ರಗಳಲ್ಲಿ ರೈತರಿಗೆ ಸಹಾಯಧನದಲ್ಲಿ ವಿತರಿಸಲು ಬಿತ್ತನೆ ಬೀಜಗಳನ್ನು ದಾಸ್ತಾನು ಮಾಡಲಾಗಿರುವ ಹಿನ್ನೆಲೆ ಪಿರಿಯಾಪಟ್ಟಣ ತಾಲೂಕು ಹೊರತುಪಡಿಸಿ ಎಲ್ಲಾ ತಾಲೂಕಿನ ಎಲ್ಲಾ ರೈತ ಸಂಪರ್ಕ ಕೇಂದ್ರಗಳು ಈ ಭಾನುವಾರ (06–04–2025) ತೆರೆದಿರುತ್ತವೆ. ರೈತರು ಸಹಾಯಧನದಲ್ಲಿ ದೊರೆಯುವ ಉದ್ದು, ಅಲಸಂದೆ, ಹೆಸರು, ಸೂರ್ಯಕಾಂತಿ ಬಿತ್ತನೆ ಬೀಜಗಳನ್ನು ಪಡೆದುಕೊಳ್ಳಬಹುದಾಗಿರುತ್ತದೆ ಎಂದು ಮೈಸೂರು ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಗಾಂಧಿನಗರದ 11ನೇ ಕ್ರಾಸ್‌ನ ಶ್ರೀ ಕೊಲ್ಲಾಪುರದಮ್ಮನವರ ಅದ್ದೂರಿ ಪೂಜಾ ಮಹೋತ್ಸವ ಇತ್ತೀಚೆಗೆ ನೆರವೇರಿತು. ಫೋರಂ ಮಾಲ್ ಹಿಂಭಾಗದ ಕಾಳಿಕಾಂಬ ದೇವಸ್ಥಾನದ ಬಳಿಯಿಂದ ಕರಗ ಮಹೋತ್ಸವ ಗಾಂಧಿನಗರದ ಪ್ರಮುಖ ಬೀದಿಗಳಲ್ಲಿ ಸಾಗಿತ್ತು. ಶುಕ್ರವಾರದಂದು ದೇವಸ್ಥಾನದ ಆವರಣದಲ್ಲಿ ಕರಗ ವಿಸರ್ಜನೆ ಸಂಪನ್ನಗೊಂಡಿತ್ತು. ಇದರಲ್ಲಿ ಸಾವಿರಾರು ಮಂದಿ ದೇವಿಯ ಕೃಪೆಗೆ ಪಾತ್ರರಾದರು.



ಗಾಂಧಿನಗರದ ಶ್ರೀ ಕೊಲ್ಲಾಪುರದಮ್ಮ ಸೇವಾ ಸಮಿತಿ ವತಿಯಿಂದ ಭಾರತದ ಮಾಜಿ ಉಪ ಪ್ರಧಾನಿ ಡಾ.ಬಾಬು ಜಗಜೀವನ ರಾಂ ಅವರ ಜನ್ಮ ದಿನಾಚರಣೆ ಹಿನ್ನೆಲೆಯಲ್ಲಿ ರೈಲ್ವೆ ನಿಲ್ದಾಣದ ಬಳಿಯಿರುವ ಅವರ ಪ್ರತಿಮೆಗೆ ಸಮಿತಿಯ ಸದಸ್ಯರಾದ ಜಯರಾಂ, ಚಂದ್ರಶೇಖರ್, ಶ್ಯಾಂ, ರವಿಕುಮಾರ್, ವಿಜಯೇಂದ್ರ, ಕುಮಾರ್, ರವಿ, ರಾಜೇಶ್, ಕೃಷ್ಣ ಇತರರು ಮಾಲಾರ್ಪಣೆ ಮಾಡಿ, ನಮನ ಸಲ್ಲಿಸಿದರು.

## ಹಾಸನ ಜಿಲ್ಲಾ ಸುದ್ದಿಗಳು

### ಜಗಳ ಬಿಡಿಸಲು ಹೋದ ವ್ಯಕ್ತಿಗೆ ಚಾಕುವಿನಿಂದ ಇರಿದು ಕೊಲೆ

ಹಾಸನ,ಏ.5– ಜಗಳ ಬಿಡಿಸಲು ಹೋದ ವ್ಯಕ್ತಿಗೆ ಚಾಕುವಿನಿಂದ ಇರಿದು ಕೊಲೆ ಮಾಡಿರುವ ಘಟನೆ ಅರಸೀಕೆರೆ ತಾಲೂಕಿನ ದೋಣನಕಟ್ಟೆ ಗ್ರಾಮದಲ್ಲಿ ನಡೆದಿದೆ.

ಶಶಿ ಮತ್ತು ವಸಂತ ಚೌಕಾಬಾರ ಆಡುತ್ತಿದ್ದಾಗ ಬಸವರಾಜ ಅಲ್ಲಿಗೆ ಬಂದು ಜಗಳ ಮಾಡಿ, ಅವರಿಬ್ಬರ ಮೇಲೆ ಹಲ್ಲೆ ಮಾಡಿದ್ದ. ಈ ವೇಳೆ ಲಕ್ಕಪ್ಪ ಜಗಳ ಬಿಡಿಸಲು ಹೋದಾಗ ಬಸವರಾಜ ಚಾಕುವಿನಿಂದ ಅವರ ಎದೆ ಭಾಗಕ್ಕೆ ಇರಿದು ಕೊಲೆ ಮಾಡಿದ್ದಾನೆ. ಬಸವರಾಜನ ಜೊತೆಗಿದ್ದ ನಂಜುಂಡಿಯು ಹಲ್ಲೆಗೆ ಬೆಂಬಲ ನೀಡಿದ್ದ ಎಂಬ ಆರೋಪ ಕೇಳಿಬಂದಿದೆ. ಇದೀಗ ಆರೋಪಿ ಬಸವರಾಜ ಹಾಗೂ ನಂಜುಂಡಿ ತಲೆಮರೆಸಿಕೊಂಡಿದ್ದಾರೆ.

ಶಶಿ ಮತ್ತು ವಸಂತ ಎಂಬುವವರಿಗೆ ಬೆನ್ನು ಹಾಗೂ ಕೈ ಭಾಗಕ್ಕೆ ಬಸವರಾಜ ಚಾಕುವಿನಿಂದ ಇರಿದು ಹಲ್ಲೆ ಮಾಡಿದ್ದು, ಗಾಯಾಳು ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಘಟನಾ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಅರಸೀಕೆರೆ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಯ ಪತ್ತೆಗೆ ಪೊಲೀಸರು ಬಲೆ ಬೀಸಿದ್ದಾರೆ.

### ಹಳೇಬೀಡಲ್ಲಿ ವೈಭವದ ಚಾಮುಂಡೇಶ್ವರಿ ರಥೋತ್ಸವ



ಹಳೇಬೀಡು, ಏ.5– ಕಲ್ಲಳ್ಳಿ ಅರಣ್ಯದ ಅಂಚಿನಲ್ಲಿರುವ ಅಮ್ಮನಬ್ಯಾಡರಹಳ್ಳಿ ಗ್ರಾಮದಲ್ಲಿ ಇಂಪಾದ ಮಂಗಳ ವಾದ್ಯದೊಂದಿಗೆ ಕೊಲ್ಲಾಪುರದಮ್ಮ ಹಾಗೂ ಚಾಮುಂಡೇಶ್ವರಿ ರಥೋತ್ಸವ ಶನಿವಾರ ವೈಭದಿಂದ ನಡೆಯಿತು.

ಪುಟ್ಟ ಗ್ರಾಮದಲ್ಲಿ ಭಕ್ತರ ಝೇಂಕಾರ, ವಿವಿಧ ವಾದ್ಯಗಳ ವೈಭವ ಮೊಳಗಿತ್ತು. ಹಳದಿ ವಸ್ತ್ರಧಾರಿ ಗಣಮಕ್ಕಳು, ಯುವ ಜನರು ವಾದ್ಯದ ತಾಳಕ್ಕೆ ಹೆಜ್ಜೆ ಹಾಕಿ ಸಂಭ್ರಮಿಸಿದರು. ಮಧ್ಯಾಹ್ನ ವಿವಿಧ ಪೂಜೆ ನಡೆಸಿ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

ಭಕ್ತರು ಪೈಪೋಟಿಯಲ್ಲಿ ರಥವನ್ನು ಎಳೆದರು. ಕೊಲ್ಲಾಪುರದಮ್ಮ, ಚಾಮುಂಡೇಶ್ವರಿ ಅಮ್ಮನವರಿಗೆ ಜೈಕಾರ ಹಾಕಿದ ಭಕ್ತರು ಗೋವಿಂದ ನಾಮ ಸ್ಮರಣೆ ಮಾಡಿದರು. ರಥ ದೇವಾಲಯದ ಸುತ್ತ ತಿರುಗಿ ಸ್ವಸ್ಥಾನಕ್ಕೆ ಬಂದಾಗ ರಥದ ಸುತ್ತ ಭಕ್ತರು ಜಮಾಯಿಸಿ ದೇವತೆಗಳ ದರ್ಶನ ಮಾಡಿದರು.

ಗ್ರಾಮದಲ್ಲಿ ಮೂರುದಿನ ಜಾತ್ರೆ ನಡೆಯಿತು. ಏಪ್ರಿಲ್ 3ರಂದು ಸತ್ಯಮಲ್ಲೇಶ್ವರ ಸ್ವಾಮಿ ಪರ ನಡೆಸಿ ಜಾತ್ರೆಗೆ ಚಾಲನೆ ನೀಡಲಾಯಿತು. ಸಂಜೆ ರಥವನ್ನು ಸ್ವಚ್ಛ ಮಾಡಿ ಅಭಿಷೇಕ ಪೂಜೆ ನಡೆಸಲಾಯಿತು. 4ರಂದು ನಸುಕಿನಲ್ಲಿಯೇ ರಥೋತ್ಸವದ ವಿಧಾನ ನಡೆಯಿತು. ವಾದ್ಯ ಗೋಷ್ಠಿಯೊಂದಿಗೆ ರಥದ ಗೋಪುರದ ಕಳಸಾರೋಹಣ ನೆರವೇರಿತು. ಕೊಲ್ಲಾಪುರದಮ್ಮ, ಚಾಮುಂಡೇಶ್ವರಿ ಉತ್ಸವ ಮೂರ್ತಿಗಳನ್ನು ಶ್ರದ್ಧಾಭಕ್ತಿಯಿಂದ ರಥದಲ್ಲಿ ಆರೋಹಣ ಮಾಡಿ, ಗಳಿಗೆ ತೇರು ನಡೆಸಲಾಯಿತು. ಹೆಣ್ಣು ಮಕ್ಕಳು ಗುಗ್ಗಳಾರತಿ ಸೇವೆ ನೆರವೇರಿಸಿದರು. ಸಂಜೆ ಸಿಡಿ ಉತ್ಸವ ನಡೆಯಿತು.

ಜಾತ್ರೆಯ ಪ್ರಮುಖ ಭಾಗವಾದ ರಥೋತ್ಸವ ವೀಕ್ಷಣೆಗೆ ದೂರದ ಊರುಗಳಿಂದ ಭಕ್ತರು ಆಗಮಿಸಿದ್ದರು. ದೇವಾಲಯದ ಆವರಣ ಮಾತ್ರವಲ್ಲದೆ, ಊರಿನ ಬೀದಿಗಳಲ್ಲಿ ಭಕ್ತರ ದಟ್ಟಣೆ ಹೆಚ್ಚಿತ್ತು. ವಾಲ್ಮೀಕಿ ಸಮುದಾಯ ಭವನ, ಶಾಲೆ ಹಾಗೂ ಮನೆಗಳ ಜಗುಲಿಯಲ್ಲಿಯೂ ಭಕ್ತರು ಜಮಾಯಿಸಿದ್ದರು. ಗರ್ಭಗುಡಿಯ ದೇವಿ ಹಾಗೂ ರಥದಲ್ಲಿ ಕೂರಿಸಿದ್ದ ಮೂರ್ತಿಗಳಿಗೆ ಭಕ್ತರು ಭಾರಿ ಸಂಖ್ಯೆಯಲ್ಲಿ ಹಣ್ಣು, ಕಾಯಿ ಪೂಜೆ ಮಾಡಿಸಿದರು. ಭಕ್ತರಿಗೆ ಅನ್ನ ಸಂತರ್ಪಣೆ, ತಂಪು ಪಾನೀಯದ ವ್ಯವಸ್ಥೆ ಮಾಡಲಾಗಿತ್ತು

### ಬಾಬೂಜಿ ಭಾರತೀಯರ ಜೀವನಕ್ಕೆ ದಾರಿದೀಪ: ಶಾಸಕ ಬಾಲಕೃಷ್ಣ



ಚನ್ನರಾಯಪಟ್ಟಣ, ಏ.5– ಮಾಜಿ ಉಪಪ್ರಧಾನಿ ಡಾ. ಬಾಬು ಜಗಜೀವನರಾಂ ಅವರ ದೂರದೃಷ್ಟಿಯಿಂದ ದೇಶ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬಿ ಆಯಿತು. ಹಸಿರುಕ್ರಾಂತಿ ಹರಿಕಾರ ಜಗಜೀವನರಾಂ ಪ್ರತಿಪಾದಿಸಿದ ತತ್ವಗಳು ಭಾರತೀಯರ ಜೀವನಕ್ಕೆ ದಾರಿದೀಪ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಹೇಳಿದರು.

ತಾಲೂಕು ಆಡಳಿತ, ತಾಲೂಕು ಪಂಚಾಯಿತಿ, ಸಮಾಜ ಕಲ್ಯಾಣ ಇಲಾಖೆ ಹಾಗೂ ಪುರಸಭೆ ಸಹಯೋಗದಲ್ಲಿ ಶನಿವಾರ ತಾಲೂಕು ಕಚೇರಿ ಆವರಣದಲ್ಲಿ ಏರ್ಪಡಿಸಿದ್ದ ಮಾಜಿ ಉಪಪ್ರಧಾನಿ ಡಾ. ಬಾಬು ಜಗಜೀವನರಾಂ ಜಯಂತ್ಯುತ್ಸವದಲ್ಲಿ ಅವರು ಮಾತನಾಡಿದರು. 3 ಕೋಟಿ ವೆಚ್ಚದಲ್ಲಿ ಬಾಬು ಜಗಜೀವನರಾಂ ಭವನವನ್ನು ಪಟ್ಟಣದಲ್ಲಿ ನಿರ್ಮಿಸಲಾಗುವುದು. ಜಾಗವನ್ನು ಸಮಾಜ ಕಲ್ಯಾಣ ಇಲಾಖೆಗೆ ಪುರಸಭೆ ಹಸ್ತಾಂತರ ಮಾಡಲಾಗಿದೆ. ಶೀಘ್ರದಲ್ಲೇ ಹಣ ಮಂಜೂರು ಮಾಡಿಸಲಾಗುವುದು ಎಂದರು.

ತಹಶೀಲ್ದಾರ್ ವಿ.ಎಸ್. ನವೀನ್ ಕುಮಾರ್, ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಜಿ.ಆರ್. ಹರೀಶ್, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಎಚ್.ಎನ್. ಸತೀಶ್, ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಎಚ್.ಎನ್. ಲೋಕೇಶ್, ಟಿಎಪಿಸಿಎಂಎಸ್ ಅಧ್ಯಕ್ಷ ಎಂ.ಆರ್. ಅನಿಲ್ ಕುಮಾರ್, ಡಿವೈಎಸ್‌ಪಿ ಕುಮಾರ್, ಪುರಸಭೆಯ ಮುಖ್ಯಾಧಿಕಾರಿ ಕೆ.ಎನ್. ಹೇಮಂತ್, ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕ ಪ್ರಕಾಶ್, ಮುಖಂಡರಾದ ಸಿ.ಎನ್. ಮಂಜುನಾಥ್, ಕೆ.ಎನ್. ನಾಗೇಶ್, ಸಿ.ಆರ್. ಧರ್ಮಯ್ಯ, ಕ್ಷೇತ್ರ ಶಿಕ್ಷಣಾಧಿಕಾರಿ ಎಚ್.ಎನ್. ದೀಪಾ, ಸಮಾಜ ಕಲ್ಯಾಣ ಇಲಾಖೆಯ ಕಚೇರಿ ಅಧೀಕ್ಷಕ ಡಿ.ಆರ್. ತ್ಯಾಗರಾಜು ಭಾಗವಹಿಸಿದ್ದರು.

## ಏ.10ಕ್ಕೆ ಮಹಾವೀರ ಜಯಂತಿ



ಮೈಸೂರು,ಏ.5– ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಭಗವಾನ್ ಮಹಾವೀರ ಜಯಂತಿಯನ್ನು ಏ.10 ರಂದು ಸಂಜೆ 5.30 ಗಂಟೆಗೆ ಕರ್ನಾಟಕ ಕಲಾಮಂದಿರದಲ್ಲಿ ಆಯೋಜಿಸಲಾಗಿದೆ

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ ಮಹದೇವಪ್ಪನವರು ಕಾರ್ಯಕ್ರಮ ಉದ್ಘಾಟಿಸಲಿದ್ದು, ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ. ಹರೀಶ್ ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ.

ಪಶು ಸಂಗೋಪನೆ ಮತ್ತು ರೇಷ್ಮೆ ಇಲಾಖೆ ಸಚಿವ ಕೆ.ವೆಂಕಟೇಶ್, ಅರಣ್ಯ ವಸತಿ ಮತ್ತು ವಿಹಾರಧಾಮಗಳ ನಿಗಮದ ಅಧ್ಯಕ್ಷರು ಹಾಗೂ ಹೆಚ್.ಡಿ. ಕೋಟೆ ವಿಧಾನಸಭಾ ಕ್ಷೇತ್ರದ ಶಾಸಕರಾದ ಅನಿಲ್ ಕುಮಾರ್.ಸಿ, ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ. ಪುಷ್ಪ ಅಮರನಾಥ್ ಹಾಗೂ ಬೆಂಗಳೂರು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷೆ ಡಾ. ಮಾನಸ ಗೌರವ ಉಪಸ್ಥಿತರಿರಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್ ಆಗಮಿಸಲಿದ್ದಾರೆ.

ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ರವಿಶಂಕರ್.ಡಿ, ಟಿ. ಎಸ್.ಶ್ರೀವತ್ಸ, ದರ್ಶನ್ ಧ್ರುವನಾರಾಯಣ್, ಜಿ.ಡಿ.ಹರೀಶ್‌ಗೌಡ ಹಾಗೂ ವಿಧಾನಪರಿಷತ್ ಸದಸ್ಯರಾದ ಹೆಚ್. ವಿಶ್ವನಾಥ್, ಡಾ. ಡಿ.ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ. ಮಾದೇಗೌಡ, ಡಾ. ಯತೀಂದ್ರ ಎಸ್. ಮತ್ತು ವಿವೇಕಾನಂದ ಎಸ್. ಸಮಾರಂಭದ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಹಾಗೂ ಕಾವೇರಿ ಜಲಾನಯನ ಯೋಜನೆಯ ಅಚ್ಚುಕಟ್ಟು ಪ್ರಾಧಿಕಾರದ ಅಧ್ಯಕ್ಷ ಮರಿಸ್ವಾಮಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಮೈಸೂರಿನ ಹಿರಿಯ ಸಾಹಿತಿ ಪ್ರೊ. ಎಸ್. ಶಿವರಾಜಪ್ಪ ಮುಖ್ಯ ಭಾಷಣ ಮಾಡಲಿದ್ದಾರೆ.


## ನವ ಭಾರತ ನಿರ್ಮಾಣಕ್ಕೆ ಜಗಜೀವನರಾಮ್ ಕೊಡುಗೆ ಸ್ಮರಣೀಯ

### ಮಾಜಿ ರಾಜ್ಯಸಭಾ ಸದಸ್ಯ ಡಾ.ಎಲ್.ಹನುಮಂತಯ್ಯ ಬಣ್ಣನೆ

ಮೈಸೂರು, ಏ.5(ಬಿಎಲ್‌ಯು)– ಅಪಾರ ಜ್ಞಾನ ಸಂಪಾದಿಸಿ, ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಡಾ. ಬಾಬು ಜಗಜೀವನ್ ರಾಮ್ ಅವರು ನವ ಭಾರತ ನಿರ್ಮಾಣಕ್ಕೆ ತನ್ನದೇ ಆದ ವಿಶಿಷ್ಟ ಕೊಡುಗೆ ಕೊಟ್ಟ ಮೇರು ಸ್ತರದ ನಾಯಕ ಎಂದು ಮಾಜಿ ರಾಜ್ಯಸಭಾ ಸದಸ್ಯ ಡಾ.ಎಲ್.ಹನುಮಂತಯ್ಯ ಬಣ್ಣಿಸಿದರು.

ನಗರದ ಕಾಂಗ್ರೆಸ್ ಭವನದಲ್ಲಿ ಇಂದು ಮಾಜಿ ಉಪ ಪ್ರಧಾನಮಂತ್ರಿಗಳೂ ಆದ ಹಸಿರುಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನ ರಾಮ್ ಅವರ 118 ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡಿದ ಅವರು, ಕಾರ್ಮಿಕರ ಕನಿಷ್ಠ ಕೂಲಿ ಕಾಯ್ದೆ, ಬಾಲಕಾರ್ಮಿಕ ನಿಷೇಧ ಕಾಯ್ದೆ ಸೇರಿದಂತೆ ಹಲವು ಜನಪರ ಕಾಯ್ದೆಗಳನ್ನು ಜಾರಿಗೊಳಿಸಿದ ಡಾ.ಬಾಬು ಜಗಜೀವನ ರಾಮ್ ಅವರು ದೇಶದ ಬೆಳವಣಿಗೆಗೆ ಕಾರಣೀಭೂತರಾದರು ಎಂದರು.

ಸ್ವಾತಂತ್ರ್ಯ ನಂತರದ ಭಾರತ ದೇಶವನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯಲು ಮಹಾನ್ ನಾಯಕರ ಪರಿಶ್ರಮ ಮತ್ತು ಬಲಿದಾನದ ಹೆಜ್ಜೆ ಗುರುತುಗಳಿವೆ. ರಾಷ್ಟ್ರಪಿತ ಮಹಾತ್ಮ ಗಾಂಧೀಜಿ, ಡಾ.ಬಿ.ಆರ್. ಅಂಬೇಡ್ಕರ್, ಜವಾಹರಲಾಲ್ ನೆಹರು ಪ್ರಬುದ್ಧ ಕೊಡುಗೆ ಅಪಾರವಾಗಿದೆ. ಅದೇ ಪ್ರಬುದ್ಧತೆಯ ಸಾಲಿನಲ್ಲಿ ಡಾ.ಬಾಬು ಜಗ ಜೀವನರಾಮ್ ಕೂಡ ನಿಲ್ಲುತ್ತಾರೆ ಎಂದು ಡಾ.ಹನುಮಂತಯ್ಯ ಅಭಿಪ್ರಾಯಪಟ್ಟರು.


ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಶನಿವಾರ ಮಾಜಿ ಉಪ ಪ್ರಧಾನ ಮಂತ್ರಿ ಡಾ.ಬಾಬು ಜಗಜೀವನ ರಾಮ್ ಅವರ 118ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಮಾಜಿ ರಾಜ್ಯಸಭಾ ಸದಸ್ಯ ಡಾ. ಎಲ್. ಹನುಮಂತಯ್ಯ ಮಾತನಾಡಿದರು.

ಬಾಲ್ಯದಲ್ಲಿಯೇ ಅಸ್ಪೃಶ್ಯತೆಯ ಕಹಿ ಅನುಭವ ಕಂಡಿದ್ದ ಡಾ.ಬಾಬು ಜಗಜೀವನ ರಾಮ್ ಅವರು, ಸಮಾನತೆಯ ಸುಧಾರಣೆಗೆ ಮೌನವಾಗಿ ಹೋರಾಟ ಮಾಡಿ ದಲಿತ ಸಮುದಾಯದ ಧೀಮಂತ ನಾಯಕರಾಗಿ ಬೆಳೆದು ನಿಂತರು. ಅಂದಿನ ಕೇಂದ್ರ ಸರ್ಕಾರದಲ್ಲಿ 38 ನೇ ವಯಸ್ಸಿಗೆ ಕಾರ್ಮಿಕ ಮಂತ್ರಿಯಾಗಿ ಹಲವು ಕಾನೂನು ರೂಪಿಸಿದರು. ಈ ಮೂಲಕ ವಿಶ್ವ ಕಾರ್ಮಿಕ ಸಮಾವೇಶದಲ್ಲಿ ಭಾರತಕ್ಕೆ ಅಧ್ಯಕ್ಷತೆಯ ಸ್ಥಾನ ದೊರಕಿಸುವ ನಿಟ್ಟಿನಲ್ಲಿ ಪರಿಣಾಮಕಾರಿ ಕಾನೂನು ಜಾರಿಗೊಳಿಸಿದರು ಎಂದು ಹೇಳಿದರು.

ಕೃಷಿ ಕಾರ್ಮಿಕರಿಗೆ ಕನಿಷ್ಠ ಕೂಲಿ ಕಾಯ್ದೆ ಜಾರಿಗೆ ತಂದು ಸಮಗ್ರ ಕೃಷಿ ವಲಯಕ್ಕೆ ಹೊಸ ರೂಪ ನೀಡಿದರು. ಕೇಂದ್ರ ಆಹಾರ ಸಚಿವರಾಗಿ ಹಲವು ಸುಧಾರಣೆ ತಂದು ಕೃಷಿ ಕ್ಷೇತ್ರದ ಬೆಳವಣಿಗೆಗೆ ಬುನಾದಿ ಹಾಕಿದ ಹಿನ್ನೆಲೆ ಡಾ.ಬಾಬು ಜಗಜೀವನ ರಾಮ್ ಅವರನ್ನು ಹಸಿರುಕ್ರಾಂತಿ ಹರಿಕಾರ ಎಂಬ ಪ್ರಖ್ಯಾತ ಹೆಸರಿನಿಂದ ಕರೆಯಲಾಗುತ್ತದೆ ಎಂದು ಡಾ.ಹನುಮಂತಯ್ಯ ತಿಳಿಸಿದರು.

ತರುವಾಯ ಮಾತನಾಡಿದ ಭಾರತೀಯ ಸೇನೆಯ ನಿವೃತ್ತ ಸೇನಾಧಿಕಾರಿ ಕರ್ನಲ್ ಕೆ.ಪಿ.ನರೇಂದ್ರ ಅವರು, ಡಾ.ಬಾಬು ಜಗಜೀವನ ರಾಮ್ ಜನಿಸಿದ ಜನ್ಮ ಸ್ಥಳದಲ್ಲಿ ಇನ್ನು ಕೂಡ ಜಾತಿ ವ್ಯವಸ್ಥೆ ಜೀವಂತವಾಗಿದ್ದು, ಇದು ದುರಂತದ ಸಂಗತಿ ಎಂದು ಹೇಳಿದರು.


ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ ಕುಮಾರ್, ವಿಶ್ವ ಮೈತ್ರಿ ಬೌದ್ಧ ವಿಹಾರದ ಡಾ.ಕಲ್ಯಾಣ ಶ್ರೀ ಬಂತೇಜಿ, ಮಾಜಿ ಸಚಿವ ಕೋಟೆ ಶಿವಣ್ಣ, ಡಿಸಿಸಿ ಪರಿಶಿಷ್ಟ ವಿಭಾಗದ ಅಧ್ಯಕ್ಷ ರಮೇಶ್, ಮಿಮಿಕ್ರಿ ದಯಾನಂದ್ ಸೇರಿದಂತೆ ಹಲವು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಮೈಸೂರು ಮಿತ್ರ



# ನಾಳೆ ವಿಶ್ವ ವಿಖ್ಯಾತ ಮೇಲುಕೋಟೆ ವೈರಮುಡಿ ಬ್ರಹ್ಮೋತ್ಸವ

## ಭಕ್ತಾದಿಗಳಿಗೆ ಮೂಲಸೌಕರ್ಯ ವ್ಯವಸ್ಥೆ, ಸಿಸಿ ಕ್ಯಾಮೆರಾಗಳ ಅಳವಡಿಕೆ, ಬಿಗಿ ಪೊಲೀಸ್ ಬಂದೋಬಸ್ತ್



**ಏ.7 ರಂದು ಬೆಳಿಗ್ಗೆ 7 ಗಂಟೆಗೆ ಮುಡಿ ಪೆಟ್ಟಿಗೆಗಳನ್ನು ಜಿಲ್ಲಾ ಖಜಾನೆಯಿಂದ ಶ್ರೀ ಲಕ್ಷ್ಮಿ ಜನಾರ್ಧನಸ್ವಾಮಿ ದೇವಾಲಯದ, ಇಂಡುವಾಳು, ಕೆ.ಶೆಟ್ಟಹಳ್ಳಿ, ಬಾಬುರಾಯನಕೊಪ್ಪಲು, ಶ್ರೀರಂಗಪಟ್ಟಣ, ಬನ್ನಿಮಂಟಪ, ಕಿರಂಗೂರು, ದರಸಗುಪ್ಪೆ, ಪಾಂಡವಪುರ, ಹರಳಹಳ್ಳಿ, ಬನಘಟ್ಟ, ಕೆ.ಹೊಸೂರು ಗೇಟ್, ಟಿ.ಎಸ್.ಛತ್ರ, ಬೆಳ್ಳಾಳೆ, ಅಮ್ಮತಿ, ನ್ಯಾಮನಹಳ್ಳಿ, ಜಕ್ಕನಹಳ್ಳಿ, ಕದಲಗೆರೆ ಮಾರ್ಗವಾಗಿ ಪೊಲೀಸ್ ಬಂದೋಬಸ್ತ್‌ನಲ್ಲಿ ಮೇಲುಕೋಟೆಗೆ ತೆಗೆದುಕೊಂಡು ಬರಲಾಗುವುದು. ಎಲ್ಲಾ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ರಾತ್ರಿ 8 ಗಂಟೆಗೆ ವೈರಮುಡಿ ಬ್ರಹ್ಮೋತ್ಸವ ಪ್ರಾರಂಭವಾಗುವುದು**



ಮಂಡ್ಯ,ಏ.5– ವಿಶ್ವವಿಖ್ಯಾತ ಮೇಲುಕೋಟೆ ಶ್ರೀ ಚಲುವನಾರಾಯಣಸ್ವಾಮಿ ದೇವಾಲಯದಲ್ಲಿ ಏ.7 ರಂದು ಶ್ರೀ ವೈರಮುಡಿ ಬ್ರಹ್ಮೋತ್ಸವ ನಡೆಯಲಿದೆ ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಶನಿವಾರ ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ವೈರಮುಡಿ ಬ್ರಹ್ಮೋತ್ಸವದ ಅಂಗವಾಗಿ ಏ.2 ರಿಂದ ಏ.14 ರವರೆಗೂ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನೆರವೇರಲಿವೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ವೈರಮುಡಿ ಬ್ರಹ್ಮೋತ್ಸವವನ್ನು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ವೈರಮುಡಿ ಬ್ರಹ್ಮೋತ್ಸವಕ್ಕೆ ಆಗಮಿಸುವ ಭಕ್ತಾದಿಗಳ ಅನುಕೂಲಕ್ಕಾಗಿ ಕೆಎಸ್‌ಆರ್‌ಟಿಸಿ ವತಿಯಿಂದ ಮೇಲುಕೋಟೆಗೆ ಸಂಪರ್ಕ ಕಲ್ಪಿಸುವ ಪಟ್ಟಣ ಹಾಗೂ ನಗರ ಭಾಗಗಳಿಂದ ಸುಮಾರು 40 ಬಸ್‌ಗಳ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ವಿವರಿಸಿದರು.

ಬೆಂಗಳೂರು ಕಡೆಯಿಂದ 10, ಮೈಸೂರು ಕಡೆಯಿಂದ 40, ಮದ್ದೂರು ಭಾಗದಿಂದ 5, ನಾಗಮಂಗಲ ಮಾರ್ಗದಿಂದ 5, ಕೆ.ಆರ್.ಪೇಟೆಯಿಂದ 10, ಶ್ರೀರಂಗಪಟ್ಟಣದಿಂದ 15 ಹಾಗೂ ಮಂಡ್ಯ ನಗರದಿಂದ 50 ಬಸ್‌ಗಳ ವ್ಯವಸ್ಥೆ ಮಾಡಲಾಗಿದ್ದು, ಇವು ನಿರಂತರವಾಗಿ ಸಂಚರಿಸಲಿವೆ. ಕ್ಷೇತ್ರದಲ್ಲಿ ವಾಹನ ದಟ್ಟಣೆ ನಿಯಂತ್ರಿಸಲು ಗ್ರಾಮದ ಹೊರಭಾಗದಲ್ಲಿ ಸೂಕ್ತ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ. ಹಿರಿಯ ನಾಗರೀಕರು ಹಾಗೂ ಗರ್ಭಿಣಿಯರಿಗೆ ಪಾರ್ಕಿಂಗ್ ಸ್ಥಳದಿಂದ ದೇವಾಲಯದವರೆಗೆ ಓಡಾಡಲು 10 ಉಚಿತ ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ ಎಂದರು.

ಈ ಮೊದಲು ಮೇಲುಕೋಟೆ ಉತ್ಸವದ ಸಂದರ್ಭದಲ್ಲಿ ಬಾಡಿಗೆಗೆ ಸಿಸಿ ಕ್ಯಾಮೆರಾ ಅಳವಡಿಸಲಾಗುತ್ತಿತ್ತು. ಪ್ರಸಕ್ತ ಸಾಲಿನಿಂದ ಮೇಲುಕೋಟೆ ಸುತ್ತಾಮುತ್ತ ಶಾಶ್ವತವಾಗಿ 19 ಲಕ್ಷ ರೂ. ವೆಚ್ಚದಲ್ಲಿ 40 ಸಿ.ಸಿ. ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ದೇವಾಲಯದ ವತಿಯಿಂದ ಇದೇ ಪ್ರಥಮ ಬಾರಿಗೆ ದಾಸೋಹ ವ್ಯವಸ್ಥೆ ಮಾಡಲಾಗಿದೆ. ದೇವಾಲಯಕ್ಕೆ ಸೇರಿದ ದಾಸೋಹ ಭವನದಲ್ಲಿ ವೈರಮುಡಿ ರಥೋತ್ಸವ ನಡೆಯುವ ಏ.7ರ ಬೆಳಿಗ್ಗೆ 8 ರಿಂದ ಏ.8ರ ಬೆಳಿಗ್ಗೆ 8 ಗಂಟೆಯವರೆಗೆ ನಿರಂತರವಾಗಿ ಭಕ್ತಾದಿಗಳಿಗೆ ಪ್ರಸಾದ ವಿತರಣೆಗೆ ವ್ಯವಸ್ಥೆ ಮಾಡಲಾಗಿದೆ ಎಂದರು.

ಧಾರ್ಮಿಕ ಕ್ಷೇತ್ರದಲ್ಲಿ ಶಾಂತಿ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಮೇಲುಕೋಟೆ ವೈರಮುಡಿ ಉತ್ಸವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಲಾಗಿದೆ. 5 ಡಿವೈಎಸ್ಪಿ, 34 ಸಿಪಿಐ, 79 ಪಿಎಸ್‌ಐ, 128 ಎಎಸ್‌ಐ, 664 ಹೆಡ್ ಕಾನ್ಸ್‌ಟೇಬಲ್ ಹಾಗೂ ಪೊಲೀಸ್ ಕಾನ್ಸ್‌ಟೇಬಲ್‌ಗಳು, 86 ಮಹಿಳಾ ಪೊಲೀಸ್ ಸಿಬ್ಬಂದಿ, 100 ಗೃಹರಕ್ಷಕ ದಳ ಸಿಬ್ಬಂದಿ ಸೇರಿ ಒಟ್ಟು 1096 ಸಿಬ್ಬಂದಿಗಳನ್ನು ಬಿಗಿ ಬಂದೋಬಸ್ತ್‌ಗೆ ನಿಯೋಜಿಸಲಾಗಿದೆ ಎಂದು ವಿವರಿಸಿದರು.

ಜಿಲ್ಲಾ ಖಜಾನೆಯಿಂದ ದೇವಾಲಯಕ್ಕೆ ಹೋಗುವ ಹಾಗೂ ದೇವಾಲಯದಲ್ಲಿ ಬ್ರಹ್ಮೋತ್ಸವ ಪ್ರಾರಂಭವಾಗಿ ಮುಕ್ತಾಯವಾಗುವವರೆಗೂ ಭಕ್ತಾದಿಗಳು ವೀಕ್ಷಿಸಲು ಅನುಕೂಲವಾಗುವಂತೆ ದೃಶ್ಯ ಮಾಧ್ಯಮ ಹಾಗೂ ಯುಟ್ಯೂಬ್ ಚಾನಲ್‌ಗಳಲ್ಲಿ ನೇರ ಪ್ರಸಾರ ಮಾಡುವ ವ್ಯವಸ್ಥೆ ಮಾಡಲಾಗಿದೆ. ಜನರು ಸೇರುವ ಸ್ಥಳಗಳಲ್ಲಿ ಎಲ್‌ಇಡಿ ಪರದೆಗಳನ್ನು ಅಳವಡಿಸಿ ಕಾರ್ಯಕ್ರಮದ ನೇರ ಪ್ರಸಾರ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

**ತೆಪ್ಪೋತ್ಸವ:** ವೈರಮುಡಿ ಬ್ರಹ್ಮೋತ್ಸವ ಅಂಗವಾಗಿ ಮೇಲುಕೋಟೆಯ ದೊಡ್ಡ ಕಲ್ಯಾಣಿಯಲ್ಲಿ ಏ.11ರಂದು ತೆಪ್ಪೋತ್ಸವ ಕಾರ್ಯಕ್ರಮ ನಡೆಯಲಿದೆ. ಕಲ್ಯಾಣಿಗೆ ವಿಶೇಷ ವಿದ್ಯುತ್, ದೀಪಾಲಂಕಾರ ಮಾಡಿಸಲಾಗಿದ್ದು, ಕಲ್ಯಾಣಿಯ ವಿವಿಧ ವೇದಿಕೆಗಳಲ್ಲಿ ಮ್ಯಾಂಡಲಿನ್ ವಾದನ, ಓಕಲ್, ಭರತನಾಟ್ಯ, ಚಂಡೆ ಮದ್ದಳೆ ಮತ್ತು ನಾದಸ್ವರ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದರು.

**ವಿಶೇಷ ವಿದ್ಯುತ್ ದೀಪಾಲಂಕಾರ ಮತ್ತು ಹೂವಿನ ಅಲಂಕಾರ:** ಕಳೆದ ಬಾರಿಯಂತೆ ಈ ವರ್ಷವೂ ಸಹ ಕ್ಷೇತ್ರದಲ್ಲಿ ವಿಶೇಷ ದೀಪಾಲಂಕಾರ ಮತ್ತು ಹೂವಿನ ಅಲಂಕಾರ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ, ಜಿಪಂ ಸಿಇಓ ಕೆ.ಆರ್.ನಂದಿನಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಎಡಿಸಿ ಬಿ.ಸಿ.ಶಿವಾನಂದಮೂರ್ತಿ, ಮಂಡ್ಯ ಉಪವಿಭಾಗಾಧಿಕಾರಿ ಶಿವಮೂರ್ತಿ ಹಾಜರಿದ್ದರು.

# 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ: ಖರ್ಚು–ವೆಚ್ಚ ಪ್ರಕಟ

## 32,74,89,958 ರೂ. ಸಂಗ್ರಹವಾಗಿದ್ದ ಹಣದಲ್ಲಿ 29,65,07,226 ರೂ. ಬಳಕೆ

ಮಂಡ್ಯ,ಏ.5– ಕಳೆದ ವರ್ಷ ಡಿಸೆಂಬರ್ ತಿಂಗಳಲ್ಲಿ ಮಂಡ್ಯ ನಗರದಲ್ಲಿ ಆಯೋಜಿಸಿ, ಯಶಸ್ವಿಯಾಗಿ ಮುಕ್ತಾಯಗೊಂಡ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಖರ್ಚು ವೆಚ್ಚ ಮತ್ತು ಲೆಕ್ಕಪತ್ರಗಳನ್ನು ಜಿಲ್ಲಾಡಳಿತದ ವತಿಯಿಂದ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಪ್ರಕಟಿಸಿದರು.

ಶನಿವಾರ ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಸಮ್ಮೇಳನದ ಅಂಗವಾಗಿ ರಾಜ್ಯ ಸರ್ಕಾರ 30 ಕೋಟಿ ಹಣ ಬಿಡುಗಡೆ ಮಾಡಿತ್ತು. ಇದರ ಜೊತೆಗೆ ಮಳಿಗೆಗಳು, ಪ್ರತಿನಿಧಿಗಳ ನೋಂದಣಿ ಶುಲ್ಕ ಹಾಗೂ ಎಚ್‌ಆರ್‌ಎಂಎಸ್ ನೌಕರರ ಒಂದು ದಿನದ ದೇಣಿಗೆ 1,20,54,176 ಹಾಗೂ ಮಂಡ್ಯ ಜಿಲ್ಲಾ ಖಜಾನೆ ವ್ಯಾಪ್ತಿಯ ಸರ್ಕಾರಿ ನೌಕರರ ಒಂದು ದಿನದ ವೇತನ ದೇಣಿಗೆಯಾಗಿ ಸಿಕ್ಕ 1,54,35,782 ರೂ. ಸೇರಿ ಒಟ್ಟು 32,74,89,958 ಹಣ ಸಂಗ್ರಹವಾಗಿತ್ತು. ಈ ಪೈಕಿ 29,65,07,226 ರೂ. ಹಣ ಖರ್ಚಾಗಿದ್ದು, 2,53,61,166 ರೂ. ಹಣ ಉಳಿಕೆಯಾಗಿದೆ ಎಂದು ವಿವರಿಸಿದರು.

ಉಳಿದ 2,53,61,166 ರೂ. ಹಣದ ಜೊತೆಗೆ ಸರ್ಕಾರಿಂದ ಇನ್ನು ಎರಡೂವರೆ ಕೋಟಿ ಹಣವನ್ನು ಮಂಜೂರು ಮಾಡಿಸಿಕೊಂಡು ಸಮ್ಮೇಳನದ ನೆನಪಿನಾರ್ಥ ಮಂಡ್ಯದಲ್ಲಿ ಸುಸಜ್ಜಿತ ಕನ್ನಡಭವನ ನಿರ್ಮಾಣ ಮಾಡಲಾಗುವುದು. ಇದಕ್ಕಾಗಿ ಜಾಗವನ್ನು ಹುಡುಕುತ್ತಿದ್ದೇವೆ ಎಂದು ತಿಳಿಸಿದರು.

ಮಂಡ್ಯದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನ ಯಶಸ್ವಿಯಾಗಿಯಿತು. ಸಮ್ಮೇಳನದ ಅಚ್ಚುಕಟ್ಟಿನ ಬಗ್ಗೆ ಪ್ರತಿಪಕ್ಷಗಳು ಸಹ ಪ್ರಶಂಸೆ ವ್ಯಕ್ತಪಡಿಸಿದ್ದರು. ಸುಮಾರು ಆರರಿಂದ ಎಂಟು ಲಕ್ಷ ಜನ ಸಮ್ಮೇಳನದಲ್ಲಿ ಭಾಗಿಯಾಗಿದ್ದರು. ಸರ್ಕಾರ ಹಾಗೂ ಸಾರ್ವಜನಿಕರ ಹಣ ದುರುಪಯೋಗವಾಗದಂತೆ ಆರ್ಥಿಕ ಶಿಸ್ತಿನಿಂದ ಕಾರ್ಯಕ್ರಮ ಮುಗಿಸಿ, ಎರಡೂವರೆ ಕೋಟಿಯಷ್ಟು ಹಣವನ್ನು ಉಳಿಸಿದ್ದೇವೆ ಎಂದು ಹೇಳಿದರು.

ಸಮ್ಮೇಳನದಲ್ಲಿ ಅಳವಡಿಸಲಾಗಿದ್ದ ವಾಣಿಜ್ಯ ಮಳಿಗೆಯಿಂದ 17.52 ಲಕ್ಷ, ಪುಸ್ತಕ ಮಳಿಗೆಯಿಂದ 16.4 ಲಕ್ಷ ನೋಂದಣಿಯಿಂದ 36.95 ಲಕ್ಷ ಎಂಡಿಸಿಸಿ ಬ್ಯಾಂಕ್ ದೇಣಿಗೆ ಹತ್ತು ಲಕ್ಷ, ಎಂಆರ್‌ಎನ್ ಫೌಂಡೇಷನ್‌ನಿಂದ ಐದು ಲಕ್ಷ ದೇಣಿಗೆ ಜೊತೆಗೆ ಸರ್ಕಾರಿ ನೌಕರರ ಒಂದು ವೇತನ 33.2 ಲಕ್ಷ ಸೇರಿ ಒಟ್ಟು 1,20,54,176 ರೂ. ಸಂಗ್ರಹವಾಗಿತ್ತು ಎಂದರು. ಸಂಗ್ರಹವಾದ ಒಟ್ಟು 32,74,89,958 ರೂ. ಹಣದಲ್ಲಿ ವೇದಿಕೆ ನಿರ್ಮಾಣ ಸಮಿತಿಗೆ 8,92,49,835 ರೂ., ವೇದಿಕೆ ನಿರ್ವಹಣೆ ಸಮಿತಿಗೆ 4,96,456, ವಸತಿ ಸಮಿತಿಗೆ 1,97,56,744, ಆಹಾರ ಸಮಿತಿಗೆ 6,74,62,182, ಸ್ವಚ್ಛತಾ ಮತ್ತು ನೈರ್ಮಲ್ಯ ಸಮಿತಿಗೆ 34,99,956, ಕುಡಿಯುವ ನೀರು ಸಮಿತಿಗೆ 49,99,714 ಖರ್ಚಾಗಿದೆ ಎಂದು ತಿಳಿಸಿದರು.

# ಬ್ರಹ್ಮದೇವರಹಳ್ಳಿ ಸೊಸೈಟಿ ಚುನಾವಣೆಗೆ ಕೃಷಿ ಸಚಿವರ ಪುತ್ರ ನಾಮಪತ್ರ ಸಲ್ಲಿಕೆ

ನಾಗಮಂಗಲ, ಏ.5– ತಾಲೂಕಿನ ಹೊಣಕೆರೆ ಹೋಬಳಿ ವ್ಯಾಪ್ತಿಯ ಬ್ರಹ್ಮದೇವರಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಯ ನಿರ್ದೇಶಕರ ಸ್ಥಾನಕ್ಕೆ ನಡೆಯುವ ಚುನಾವಣೆಗೆ ಸಾಲಗಾರರಲ್ಲದ ಕ್ಷೇತ್ರದ ಅಭ್ಯರ್ಥಿಯಾಗಿ ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಪುತ್ರ ಸಚ್ಚಿನ್ ಶುಕ್ರವಾರ ನಾಮಪತ್ರ ಸಲ್ಲಿಸಿದರು. ಸಚಿವರ ಸಹೋದರ ಎನ್.ಲಕ್ಷ್ಮೀಕಾಂತ್, ಸಚ್ಚಿನ್ ಪತ್ನಿ ಆಕಾಂಕ್ಷ, ಮಾಜಿ ಎಂಎಲ್ಸಿ ಮತ್ತು ಮನ್ಮುಲ್ ನಿರ್ದೇಶಕ ಎನ್.ಅಪ್ಪಾಜಿಗೌಡ, ಮುಖಂಡರಾದ ಸುನಿಲ್ ಲಕ್ಷೀಕಾಂತ್, ಕೊಣನೂರು ಆನಂದ್, ಉಮೇಶ್ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

# ನಗುವನಹಳ್ಳಿ ಸೊಸೈಟಿಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಶ್ರೀರಂಗಪಟ್ಟಣ ತಾಲೂಕಿನ ನಗುವನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಎಂ.ಕೃಷ್ಣಪ್ಪ, ಉಪಾಧ್ಯಕ್ಷರಾಗಿ ಮಧುಸೂದನ್ ಆಯ್ಕೆಯಾಗಿದ್ದು, ಅವರನ್ನು ಎನ್.ಶಿವಸ್ವಾಮಿ, ಎಮ್.ಭಾಸ್ಕರ್, ಎನ್.ಆರ್.ಮೋಹನ್, ಜಿ.ಎನ್.ನಾರಾಯಣ, ರಾಮಕೃಷ್ಣ, ಬಿ.ಮಹೇಶ್ ಅಭಿನಂದಿಸಿದರು.

# ಆನೆಗೊಳ ಗ್ರಾಪಂ ಉಪಾಧ್ಯಕ್ಷರಾಗಿ ಮಂಜುಶೆಟ್ಟಿ

ಕಿಕ್ಕೇರಿ, ಏ.5– ಹೋಬಳಿಯ ಆನೆಗೊಳ ಗ್ರಾಪಂ ನೂತನ ಉಪಾಧ್ಯಕ್ಷರಾಗಿ ಮಂಜಶೆಟ್ಟಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದೆ ಉಪಾಧ್ಯಕ್ಷರಾಗಿದ್ದ ಧನಲಕ್ಷ್ಮೀ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ತೆರವಾಗಿದ್ದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಮಂಜುಶೆಟ್ಟಿ ಹೊರತುಪಡಿಸಿ ಬೇರೆ ಸದಸ್ಯರು ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯಾದರು.

# ಈಜಲು ತೆರಳಿದ್ದ ವ್ಯಕ್ತಿ ಸಾವು

ಶ್ರೀರಂಗಪಟ್ಟಣ: ಕಾವೇರಿ ನದಿಯಲ್ಲಿ ಈಜಲು ತೆರಳಿದ್ದ ವ್ಯಕ್ತಿಯೋರ್ವ ನೀರಿನಲ್ಲಿ ಮುಳುಗಿ ಸಾವನ್ನಪ್ಪಿರುವ ಘಟನೆ ತಾಲೂಕಿನ ಮಹದೇವಪುರದ ಕಾವೇರಿ ಬೋರೆ ದೇವರ ದೇವಾಲಯದ ಬಳಿ ನಡೆದಿದೆ.



ಮೈಸೂರು ಜಿಲ್ಲೆ ಹುಣಸೂರು ತಾಲೂಕಿನ ಗಾಗೇನಹಳ್ಳಿ ಗ್ರಾಮದ ಮಹೇಶ ವೀರಜಪ್ಪ(35) ಮೃತ ದುರ್ದೈವಿ. ಈತ ಮೈಸೂರು ವಿಕ್ರಾಂತ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದು, ಮಹದೇವಪುರ ಬಳಿಯ ತರಿಪುರ ಗ್ರಾಮದ ಸ್ನೇಹಿತನ ಮನೆಯ ಗೃಹಪ್ರವೇಶಕ್ಕೆ ಬಂದಿದ್ದ ವೇಳೆ ಈ ದುರ್ಘಟನೆ ಸಂಭವಿಸಿದೆ. ಈ ಸಂಬಂಧ ಅರಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಕೆಆರ್‌ಎಸ್‌ನಲ್ಲಿ ಭಾರಿ ಮಳೆಯಿಂದ ಮರ ಬಿದ್ದು ಪಾರಂಪರಿಕ ಕಟ್ಟಡ ಕುಸಿತ

ಶ್ರೀರಂಗಪಟ್ಟಣ: ವಿಶ್ವ ವಿಖ್ಯಾತ ಕೆಆರ್‌ಎಸ್ ಬೃಂದಾವನದಲ್ಲಿ ಶುಕ್ರವಾರ ರಾತ್ರಿ ಸುರಿದ ಭಾರಿ ಮಳೆ, ಗಾಳಿಗೆ ಗ್ರಾಮದ ನೂರಾರು ವರ್ಷದ ಮರ ಉರುಳಿ ಬಿದ್ದು ಪಾರಂಪರಿಕ ಕಟ್ಟಡಕ್ಕೆ ಸಂಪೂರ್ಣವಾಗಿ ಹಾನಿಯಾಗಿದೆ.

ಕೆಆರ್‌ಎಸ್‌ನ ದಕ್ಷಿಣ ಬೃಂದಾವನದ ಉದ್ಯಾನವನದಲ್ಲಿದ್ದ ನೂರಾರು ವರ್ಷದ ಹಳೆಯ ಬೃಹತ್ ಜಾಲಿ ಮರ ಮಳೆ, ಗಾಳಿಯ ರಭಸಕ್ಕೆ ಸಿಲುಕಿ ಬುಡಸಮೇತ ಉರುಳಿದ್ದು, ಪಕ್ಕದಲ್ಲೇ ಇದ್ದ ಉದ್ಯಾನವನದ ಸುಂದರ ಪಾರಂಪರಿಕ ಕಟ್ಟಡ ಸಂಪೂರ್ಣವಾಗಿ ಕುಸಿದಿದೆ. ಈ ಕಟ್ಟಡವನ್ನು ಕೆಆರ್‌ಎಸ್ ಅಣೆಕಟ್ಟೆ ನಿರ್ಮಾಣ ಮಾಡುವ ಸಮಯದಲ್ಲಿ ಮೈಸೂರು ಮಹಾರಾಜ ಕೃಷ್ಣರಾಜ ಒಡೆಯರ್ ಅವರ ಕಾಲದಲ್ಲಿ ನಿರ್ಮಿಸಿದ್ದರು ಎನ್ನಲಾಗಿದ್ದು, ಈ ಕಟ್ಟಡ ಪ್ರವಾಸಿಗರು ಮಳೆ ಬಂದ ವೇಳೆ ತಂಗುದಾಣವನ್ನಾಗಿ ಬಳಸಿಕೊಳ್ಳುತ್ತಿದ್ದರು. ಇದೀಗ ಆ ಕಟ್ಟಡ ಸಂಪೂರ್ಣ ಹಾನಿಗೊಂಡು ನೆಲಕಚ್ಚಿದೆ. ಸದ್ಯ ಆ ವೇಳೆ



ಕಟ್ಟಡದ ಬಳಿ ಯಾವ ಪ್ರವಾಸಿಗರು ಇಲ್ಲದಿರುವುದರಿಂದ ಯಾವುದೇ ಪ್ರಾಣಾಪಾಯಗಳು ಸಂಭವಿಸಿಲ್ಲ. ಮಾಹಿತಿ ತಿಳಿದ ನೀರಾವರಿ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ, ಅರಣ್ಯ ಇಲಾಖೆ ಅಧಿಕಾರಿಗಳಿಗೆ ವಿಷಯ ಮುಟ್ಟಿಸಿದ್ದಾರೆ. ಅರಣ್ಯ ಇಲಾಖೆ ಅಧಿಕಾರಿಗಳು ಮರ ಪರಿಶೀಲಿಸಿ, ಮರವನ್ನು ತೆರವು ಕಾರ್ಯ ನಡೆಸಿದ್ದಾರೆ.

# ಇಂದು ಪಾಂಡವಪುರದಲ್ಲಿ 'ಸರ್ಕಾರದ ನಡೆ ಕಾರ್ಯಕರ್ತರ ಕಡೆ'

ಪಾಂಡವಪುರ, ಏ.5– 'ಸರಕಾರದ ನಡೆ ಕಾರ್ಯಕರ್ತರ ಕಡೆಗೆ' ಕಾರ್ಯಕ್ರಮವು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ನೇತೃತ್ವ, ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರ ಅಧ್ಯಕ್ಷತೆಯಲ್ಲಿ ಭಾನುವಾರ (ಏ.6) ಬೆಳಿಗ್ಗೆ 11 ಗಂಟೆಗೆ ಪಟ್ಟಣದ ಟಿಎಪಿಸಿಎಂಎಸ್ ರೈತ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್ ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದು ಎರಡು ವರ್ಷಗಳು ತುಂಬಿ ಯಶಸ್ವಿಯಾಗಿ ಆಡಳಿತ ನಡೆಸುತ್ತಿದೆ, ಇದರ ಅಂಗವಾಗಿ ಎರಡನೇ ವರ್ಷದ ವಾರ್ಷಿಕೋತ್ಸವ ಆಚರಣೆ ಮಾಡಲು ಸಿದ್ಧತೆ ನಡೆಸಿಕೊಳ್ಳಲಾಗಿದೆ. ನಮ್ಮ ಸರಕಾರ ರಾಜ್ಯದ ಜನರಿಗೆ ಗ್ಯಾರಂಟಿ ಯೋಜನೆಗಳ ಅನುಕೂಲ ಮಾಡಿಕೊಟ್ಟಿದೆ ಎಂದರು.

ಒಂದನೇ ಪುಟದಿಂದ

## ಮೀಸಲಾತಿ ಅನುಭವಿಸುತ್ತಿದ್ದಾರೆ!

ಎಲ್ಲರೂ ಮೀಸಲಾತಿ ಫಲಾನುಭವಿಗಳೇ ಆಗಿದ್ದಾರೆ. ಕರ್ನಾಟಕ ಸೇರಿ ತೆಲಂಗಾಣ, ಆಂಧ್ರದಲ್ಲಿ ಮಾತ್ರ ಎಸ್‌ಸಿಪಿ/ಟಿಎಸ್‌ಪಿ ಕಾಯ್ದೆ ಜಾರಿಯಲ್ಲಿದೆ. ಸಾಮಾಜಿಕ ನ್ಯಾಯದ ಭಾಷಣ ಮಾಡುವ ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಈ ಕಾಯ್ದೆ ಏಕೆ ಇಲ್ಲ. ಬರೀ ಭಾಷಣ ಮಾಡಿದರೆ ಸಾಕಾ, ಕ್ರಿಯೆಯಲ್ಲಿ ಕಾಣಬಾರದಾ ಎಂದು ಪ್ರಶ್ನಿಸಿದರು. ಜನರ ಕೈಯ್ಯಲ್ಲಿ ಹಣ ಇರಬೇಕು. ಕೊಳ್ಳುವ ಶಕ್ತಿ ಹೆಚ್ಚಾಗಬೇಕು ಎನ್ನುವ ನಮ್ಮ ಉದ್ದೇಶಕ್ಕಾಗಿ ಜಾರಿ ಮಾಡಿದ 5 ಗ್ಯಾರಂಟಿಗಳು ಯಶಸ್ವಿಯಾಗಿವೆ. ಒಳಮೀಸಲಾತಿ ಜಾರಿ ಮಾಡೇ ಮಾಡ್ತೀವಿ. ಸುಪ್ರೀಂಕೋರ್ಟ್ ಆದೇಶವನ್ನು ಖಂಡಿತವಾಗಿ ಪಾಲಿಸುತ್ತೇವೆ. ನ್ಯಾಯಮೂರ್ತಿ ನಾಗಮೋಹನ್ ದಾಸ್ ಎರಡು ತಿಂಗಳ ಕಾಲಾವಧಿ ಕೇಳಿದ್ದಾರೆ. ನಾವು ಕೊಟ್ಟಿದ್ದೇವೆ, ಯಾರಿಗೂ ಅನ್ಯಾಯ ಆಗದಂತೆ ಜಾರಿ ಮಾಡುತ್ತೇವೆ ಎಂದು ಭರವಸೆ ನೀಡಿದರು.

## ಸೋನಿಯಾ ಮೊರೆಹೋದ ಡಿಕೆಶಿ!

ದೆಹಲಿಯಲ್ಲೇ ಬಿಡಾರ ಹೂಡಿದ್ದ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ ಸ್ಥಾನ ಪಡೆಯಲು ಎಲ್ಲಾ ಆಯಾಮಗಳಿಂದಲೂ ಕಸರತ್ತು ನಡೆಸಿದ್ದಾರೆ. ಶಿವಕುಮಾರ್ ದೆಹಲಿಯಲ್ಲೇ ಇದ್ದರೂ ಸಿದ್ದರಾಮಯ್ಯ ಏಕಾಂಗಿಯಾಗಿ ರಾಹುಲ್ ಗಾಂಧಿ ಮತ್ತು ಕೆ.ಸಿ.ವೇಣುಗೋಪಾಲ್ ಅವರನ್ನು ಪ್ರತ್ಯೇಕವಾಗಿ ಭೇಟಿ ಮಾಡಿ ಮುಖಾಮುಖಿ ಚರ್ಚಿಸಿದ್ದಾರೆ. ಆದರೆ, ಶಿವಕುಮಾರ್ ಈ ಬಾರಿ ಪಕ್ಷದ ಇತರೆ ಯಾವ ನಾಯಕರನ್ನೂ ಭೇಟಿಯಾಗದೆ, ಗೌಪ್ಯವಾಗಿ ಸೋನಿಯಾ ಗಾಂಧಿ ಅವರನ್ನು ಭೇಟಿ ಮಾಡಿ ತಮಗೆ ದಕ್ಕಬೇಕಿರುವ ಅಧಿಕಾರ ತಪ್ಪಿಸಲು ನಡೆಸಿರುವ ತಂತ್ರಗಾರಿಕೆಯನ್ನು ಮುಂದಿಟ್ಟಿದ್ದಾರೆ. ತಮಗೆ ಮುಖ್ಯಮಂತ್ರಿ ಸ್ಥಾನ ತಪ್ಪಿಸಲು ಕಳೆದ ಒಂದು ವರ್ಷದಿಂದ ಸಿದ್ದರಾಮಯ್ಯ ಆಪ್ತ ಸಚಿವರು ಮಾಡಿರುವ ತಂತ್ರಗಾರಿಕೆ, ಅವರು ನೀಡುತ್ತಿರುವ ಸಾರ್ವಜನಿಕ ಹೇಳಿಕೆಗಳಷ್ಟೇ ಅಲ್ಲದೆ, ಯಾವುದೋ ಹಳೆಯ ವಿಷಯಗಳನ್ನು ಮುಂದಿಟ್ಟುಕೊಂಡು ತಮ್ಮ ಹೆಸರಿಗೆ ಮಸಿ ಬಳಿಯುವ ಯತ್ನವೂ ನಿರಂತರವಾಗಿ ನಡೆದಿದೆ. ಆದರೆ, ನಾನು ಈ ಯಾವುದೇ ವಿಷಯಗಳ ಕುರಿತು ಸಾರ್ವಜನಿಕವಾಗಿ ಪ್ರಸ್ತಾಪಿಸಿಲ್ಲ, ಸರ್ಕಾರ, ಪಕ್ಷದಲ್ಲಿನ ಚಟುವಟಿಕೆ ಮತ್ತು ತಮಗಾಗಿರುವ ನೋವುಗಳನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮುಂದೆ ಬಿಡಿಸಿಟ್ಟಿದ್ದೇನೆ. ಸಿದ್ದರಾಮಯ್ಯ ಅವರು ಅಧಿಕಾರ ವಹಿಸಿಕೊಳ್ಳುವುದಕ್ಕೂ ಮುನ್ನ ಪಕ್ಷದ ಅಂಗಳದಲ್ಲಿ ನಡೆದಿರುವ ಮಾತುಕತೆಯಂತೆ ನನಗೂ ಒಂದು ಅವಕಾಶ ಕೊಡಿಸಿ ಎಂದು ಸೋನಿಯಾ ಅವರಲ್ಲಿ ವಿನಂತಿಸಿದ್ದಾರೆ.

ಪಕ್ಷಕ್ಕೆ ಸಂಕಷ್ಟ ಎದುರಾದ ಎಲ್ಲಾ ಸಂದರ್ಭಗಳಲ್ಲಿ ಧೈರ್ಯವಾಗಿ ನಿಂತು ಕೆಲಸ ಮಾಡಿದ್ದೇನೆ. ಜೈಲಿಗೂ ಹೋಗಿದ್ದೇನೆ. ಇದೆಲ್ಲವೂ ನಿಮಗೆ ತಿಳಿದಿರುವ ವಿಚಾರವೇ ಆಗಿದೆ ಎಂದು ತಿಳಿಸಿದ್ದಾರೆ. ಶಿವಕುಮಾರ್ ಮನವಿಯನ್ನು ಆಲಿಸಿದ ಸೋನಿಯಾ ಗಾಂಧಿ ಅವರು, ಈ ಬಗ್ಗೆ ನಾನು ಉಳಿದವರೊಂದಿಗೆ ಮಾತನಾಡುತ್ತೇನೆ. ನಿಮ್ಮ ಅವಕಾಶವನ್ನು ಯಾರಿಂದಲೂ ಕಸಿಯಲು ಸಾಧ್ಯವಿಲ್ಲ ಎಂಬ ಭರವಸೆ ನೀಡಿದ್ದಾರಂತೆ.

## ಅನಿರ್ದಿಷ್ಟಾವಧಿ ಲಾರಿ ಮುಷ್ಕರ

ಯಾರೂ ಬರಲ್ಲ. ಇದಕ್ಕೆ ಪೆಟ್ರೋಲ್ ವಾಹನಗಳ ಮಾಲೀಕರು ಬೆಂಬಲ ಕೊಟ್ಟಿದ್ದಾರೆ. ಏರ್ಪೋರ್ಟ್ ಟ್ಯಾಕ್ಸಿ, ಜಲ್ಲಿ ಮರಳು, ಸೇರಿದಂತೆ ಗೂಡ್ಸ್ ವಾಹನಗಳು ಬಂದ್ ಆಗಲಿವೆ. ಎಲ್ಲಾ ಬಗೆಯ ವಾಣಿಜ್ಯ 9 ಲಕ್ಷ ವಾಣಿಜ್ಯ ವಾಹನ ಗಳು ಸ್ಥಗಿತವಾಗಲಿವೆ ಎಂದು ಅವರು ತಿಳಿಸಿದ್ದಾರೆ. ಏಪ್ರಿಲ್ 14ರವರೆಗೆ ಸರ್ಕಾರಕ್ಕೆ ಗಡುವು ನೀಡುತ್ತೇವೆ. ಸರ್ಕಾರ ನಮ್ಮ ಬೇಡಿಕೆಗಳಿಗೆ ಮಣಿಯದಿದ್ದರೆ, 14ರ ಮಧ್ಯರಾತ್ರಿಯಿಂದಲೇ ಹೋರಾಟ ಶುರು ಮಾಡಲಿದ್ದೇವೆ. ಹೋರಾಟ ಶುರುವಾದ ಬಳಿಕ ಯಾವುದೇ ರಾಜ್ಯದಿಂದ ಕರ್ನಾಟಕ ಒಳಗೆ ವಾಣಿಜ್ಯ ವಾಹನ ಸಂಚಾರ ಮಾಡಲ್ಲ. ಚೆಕ್‌ಪೋಸ್ಟ್‌ಗಳಲ್ಲಿ ಖುದ್ದು ನಾವುಗಳೇ ನಿಲ್ಲುತ್ತೇವೆ. ಯಾವುದೇ ವಾಣಿಜ್ಯ ವಾಹನಗಳನ್ನ ಒಳಗಡೆ ಬಿಡದಂತೆ ನೋಡಿಕೊಳ್ಳುತ್ತೇವೆ ಎಂದು ಎಚ್ಚರಿಸಿದ್ದಾರೆ.

## ಸರ್ಕಾರಕ್ಕೆ ಮಧ್ಯಂತರ ವರದಿ ಸಲ್ಲಿಕೆ

ನ್ಯಾಯಾಧೀಶ ಮೈಕಲ್ ಡಿ ಕುನ್ಹಾ ನೇತೃತ್ವದ ಆಯೋಗ ರಚನೆ ಮಾಡಿತ್ತು. ಈ ಸಂಬಂಧ ಸುದೀರ್ಘ ತನಿಖೆ ನಡೆಸಿದ್ದ ಮೈಕೇಲ್ ಡಿ ಕುನ್ಹಾ ನೇತೃತ್ವದ ತನಿಖಾ ಆಯೋಗ ಸಿದ್ದರಾಮಯ್ಯಗೆ ಮಧ್ಯಂತರ ವರದಿ ಸಲ್ಲಿಕೆ ಮಾಡಿದೆ.

**ಮೊದಲ ವರದಿಯಲ್ಲಿ ಏನಿತ್ತು:** 330 ರಿಂದ 750ರ ದರದಲ್ಲಿ ಪಿಪಿಇ ಕಿಟ್‌ಗಳನ್ನು ಪೂರೈಸಲು ದೇಶೀಯ ಕಂಪನಿಗಳು ಸಿದ್ಧವಿದ್ದವು. ಈ ಕಂಪನಿಗಳಿಂದಲೇ ಕಿಟ್ ಖರೀದಿಸಬೇಕು ಎಂದು ಅಧಿಕಾರಿಗಳು ಶಿಫಾರಸು ಮಾಡಿದ್ದರೂ, ಅದನ್ನು ಬದಿಗೊತ್ತಲಾಗಿದೆ. 2,049ರಿಂದ 2,117 ದರದಲ್ಲಿ 3 ಲಕ್ಷ ಕಿಟ್‌ಗಳನ್ನು ಚೀನಾದ ಕಂಪನಿಗಳಿಂದ ಖರೀದಿಸುವ ಒಪ್ಪಂದಕ್ಕೆ ಸ್ವತಃ ಮುಖ್ಯಮಂತ್ರಿ ಮತ್ತು ಆರೋಗ್ಯ ಸಚಿವ ಸಹಿ ಹಾಕಿದ್ದಾರೆ. ಮೂಲ ಖರೀದಿ ನಿಯಮಗಳು ಮತ್ತು ಕಾರ್ಯವಿಧಾನ ಅನುಸರಿಸದೆ, ಟೆಂಡರ್ ಕರೆಯದೆ ಒಪ್ಪಂದ ಮಾಡಿಕೊಂಡಿದ್ದಾರೆ. ಈ ಮೂಲಕ ರಾಜ್ಯದ ಬೊಕ್ಕಸಕ್ಕೆ ಅಪಾರವಾದ ನಷ್ಟ ಉಂಟು ಮಾಡಿದ್ದಾರೆ ಎಂದು ಉಲ್ಲೇಖಿಸಲಾಗಿತ್ತು.

# ಕುಶಾಲನಗರದಲ್ಲಿ ಬಿಜೆಪಿ ಭಾರೀ ಪ್ರತಿಭಟನೆ

ಕೆ.ರಾಮರಾಜನ್ ಉದ್ದೇಶಿಸಿ ಮಾತನಾಡಿದ ಬಿ.ವೈ.ವಿಜಯೇಂದ್ರ, ವಿನಯ್ ಸೋಮಯ್ಯ ಬರೆದಿರುವ ಡೆತ್ ನೋಟ್‌ನಲ್ಲಿ ಸ್ಪಷ್ಟವಾಗಿ ಶಾಸಕರಾದ ಎ.ಎಸ್.ಪೊನ್ನಣ್ಣ, ಡಾ.ಮಂತರ್ ಗೌಡ, ತೆನ್ನೀರಾ ಮೈನಾ ಹೆಸರುಗಳನ್ನು ಉಲ್ಲೇಖಿಸಿದ್ದಾರೆ. ಹಿರಿಯ ಪೊಲೀಸ್ ಅಧಿಕಾರಿಗಳ ಜೊತೆ ಪಕ್ಷದ ಮುಖಂಡರು ಚರ್ಚಿಸಿದಾಗ ಮ್ಯಾಜಿಸ್ಟ್ರೇಟ್ ಕೋರ್ಟ್ ಅನುಮತಿ ಪಡೆದು ಎಫ್‌ಐಆರ್ ದಾಖಲಿಸುವುದಾಗಿ ಹೇಳಿದ್ದರು. ಆದರೆ ಈಗ ಕೇವಲ ತೆನ್ನೀರಾ ಮೈನಾ ವಿರುದ್ಧ ಮಾತ್ರವೇ ಎಫ್‌ಐಆರ್ ದಾಖಲಾಗಿದೆ. ತಕ್ಷಣವೇ ಡಿಜಿಪಿ ಮಟ್ಟದ ಅಧಿಕಾರಿಗಳ ಗಮನ ಸೆಳೆದು ಡೆತ್ ನೋಟ್‌ನಲ್ಲಿ ಹೆಸರಿಸಿರುವ ಶಾಸಕರ ಹೆಸರನ್ನು ಎಫ್‌ಐಆರ್‌ನಲ್ಲಿ ದಾಖಲಿಸಲು ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ಮೃತದೇಹವನ್ನು ಅಂತ್ಯ ಸಂಸ್ಕಾರಕ್ಕೆ ಕೊಂಡೊಯ್ಯುವುದಿಲ್ಲ ಎಂದು ಪಟ್ಟು ಹಿಡಿದರು.

**ಶಾಸಕರೇ ನೇರ ಹೊಣೆ :** ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಸ್ಥಳೀಯ ಶಾಸಕರ ಆಡಳಿತ ವೈಫಲ್ಯಗಳನ್ನು ಎತ್ತಿ ಹಿಡಿದಿದ್ದೇ ಅಪರಾಧ ಎನ್ನುವ ರೀತಿಯಲ್ಲಿ ವಿನಯ್ ಸೋಮಯ್ಯ ಅವರಿಗೆ ಮಾನಸಿಕ ಕಿರುಕುಳ ಮತ್ತು ಚಿತ್ರ ಹಿಂಸೆ ನೀಡಲಾಗಿದೆ. ಇಬ್ಬರು ಶಾಸಕರ ಒತ್ತಡದ ಹಿನ್ನೆಲೆಯಲ್ಲಿ ಅವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಹೈ ಕೋರ್ಟ್ ಬೇಲ್ ನೀಡಿದ್ದರೂ, ಪೊಲೀಸರ ಮೇಲೆ ಒತ್ತಡ ಹೇರಿ ಬೇರೊಂದು ಕೇಸ್ ದಾಖಲಿಸಿ ಬಂಧಿಸುವ ಪ್ರಯತ್ನ ನಡೆದಿದೆ. ಇದಕ್ಕೆಲ್ಲ ಸಿ.ಎಂ ಕಾನೂನು ಸಲಹೆಗಾರರಾದ ಶಾಸಕ ಪೊನ್ನಣ್ಣ ಮತ್ತು ಮಂತರ್ ಗೌಡ ಕಾರಣ ಎಂದು ದೂರಿದರು. ಡೆತ್ ನೋಟ್‌ನಲ್ಲಿ ಹೆಸರಿಸಲಾದ ವ್ಯಕ್ತಿಗಳ ವಿರುದ್ಧ ಪ್ರಕರಣ ದಾಖಲಿಸುವುದಿಲ್ಲ ಎನ್ನುವುದಾದರೆ ಇವರಿಂದ ಎಂತಹ ನ್ಯಾಯವನ್ನು ನಿರೀಕ್ಷಿಸಲು ಸಾಧ್ಯ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆಕ್ರೋಶ ವ್ಯಕ್ತಪಡಿಸಿದರು.

**ಕಚೇರಿಗೆ ಮುತ್ತಿಗೆ–ಬಂಧನ :** ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ಪಕ್ಷದ ಪ್ರಮುಖರು ಮತ್ತು ಕಾರ್ಯಕರ್ತರು ಡಿವೈಎಸ್‌ಪಿ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದಾಗ ಕಚೇರಿ ಮುಂಭಾಗವೇ ಬ್ಯಾರಿಕೇಡ್ ಸಹಿತ ನಿಂತಿದ್ದ ನೂರಾರು ಪೊಲೀಸರು ಪ್ರತಿಭಟನಾಕಾರರನ್ನು ರಸ್ತೆಯಲ್ಲೇ ತಡೆಯುವ ಪ್ರಯತ್ನ ನಡೆಸಿದರು. ಈ ವೇಳೆ ಪ್ರತಿಭಟನಾಕಾರರು ಮತ್ತು ಪೊಲೀಸರ ನಡುವೆ ತಳ್ಳಾಟ–ನೂಕಾಟ ನಡೆಯಿತು. ಬಳಿಕ ಪ್ರತಿಭಟನೆಯ ನೇತೃತ್ವ ವಹಿಸಿದ್ದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸಹಿತ, ಸಂಸದ ಯದುವೀರ್ ಶಾಸಕ ಶ್ರೀವತ್ಸ, ವಿಧಾನಪರಿಷತ್ ಸದಸ್ಯರಾದ ಎನ್.ರವಿಕುಮಾರ್, ಮಂಡೇಪಂಡ ಸುಜಾ ಕುಶಾಲಪ್ಪ, ಮಾಜಿ ಸಂಸದ ಪ್ರತಾಪ್ ಸಿಂಹ, ಮಾಜಿ ಸ್ಪೀಕರ್ ಕೆ.ಜಿ.ಬೋಪಯ್ಯ, ಮಾಜಿ ಶಾಸಕರಾದ ಎಲ್.ನಾಗೇಂದ್ರ, ಪ್ರೀತಂಗೌಡ, ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ಪಕ್ಷದ ಪ್ರಮುಖರು ಮತ್ತು ಕಾರ್ಯಕರ್ತರನ್ನು ವಶಕ್ಕೆ ಪಡೆದು ವಾಹನಗಳಲ್ಲಿ ಕರೆದೊಯ್ದರು.

ಇದಕ್ಕೂ ಮೊದಲು ಇಲ್ಲಿನ ಸರಕಾರಿ ಆಸ್ಪತ್ರೆಗೆ ಆಗಮಿಸಿದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಹಾಗೂ ಇತರರು ವಿನಯ್ ಸೋಮಯ್ಯ ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಿದರು.

ಪ್ರತಿಭಟನಾಕಾರರನ್ನು ಸ್ಥಳದಿಂದ ಚದುರಿಸಿದ ಬಳಿಕ ವಿನಯ್ ಸೋಮಯ್ಯ ದೇಹವನ್ನು ಪೊಲೀಸ್ ಭದ್ರತೆಯೊಂದಿಗೆ ಅವರ ಹುಟ್ಟೂರು ಗೋಣಿಮರೂರು ಗ್ರಾಮಕ್ಕೆ ಕೊಂಡೊಯ್ದು ಅಲ್ಲಿ ಅಂತ್ಯ ಸಂಸ್ಕಾರ ನಡೆಸಲಾಯಿತು.

**ಬಿಗಿ ಪೊಲೀಸ್ ಭದ್ರತೆ:** ದಕ್ಷಿಣ ವಲಯದ ಐಜಿಪಿ ಡಾ.ಬೋರಲಿಂಗಯ್ಯ ನೇತೃತ್ವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಮೈಸೂರು ಎಸ್.ಪಿ. ವಿಷ್ಣುವರ್ಧನ್, ಹಾಸನ ಎಸ್.ಪಿ. ಸುಜಿತಾ ಸಲ್ಮಾನ್, ಮೈಸೂರು ಕ್ರೈಂ ಡಿಸಿಪಿ ಸುಂದರ ರಾಜ್, ಹಾಸನ ಹಾಗೂ ಮಂಡ್ಯ ಜಿಲ್ಲೆಗಳ ಇಬ್ಬರು ಹೆಚ್ಚುವರಿ ಎಸ್.ಪಿ, 400 ಪೊಲೀಸ್ ಸಿಬ್ಬಂದಿಗಳು, 5 ಕೆಎಸ್‌ಆರ್‌ಪಿ ತುಕಡಿ, ಕೊಡಗು ಜಿಲ್ಲಾ ಪೊಲೀಸ್ ಸಶಸ್ತ್ರ ಪಡೆಯ 4 ತುಕಡಿಗಳನ್ನು ನಿಯೋಜಿಸಲಾಗಿತ್ತು.

### ಇದೆಲ್ಲ ಬಿಜೆಪಿಯವರ ರಾಜಕೀಯ ಷಡ್ಯಂತರ

ವಾಸ್ತವಾಂಶವನ್ನು ತಿರುಚಿ ಹೇಳಿಕೆ ನೀಡುತ್ತಿರುವ ಬಿಜೆಪಿ ನಾಯಕರು ವಿನಯ್ ಹೆಣವನ್ನು ಕೂಡ ಎತ್ತಲು ಬಿಡಲಾರೆವು ಎಂಬ ಹೇಳಿಕೆಯಿಂದ ತಮ್ಮ ಹೀನ ಮನಸ್ಥಿತಿಯನ್ನು ಬಹಿರಂಗಪಡಿಸಿದ್ದಾರೆ ಎಂದು ಟೀಕಿಸಿದರು. ಸಾವಾದರೆ ಸಾಕು ರಣಹದ್ದುಗಳಂತೆ ಸಾವಿನ ಮನೆಯಲ್ಲಿಯೂ ಹೆಣದ ಮುಂದೆ ರಾಜಕೀಯ ಮಾಡುವ ಕೆಟ್ಟ ಪ್ರವೃತ್ತಿಯಿಂದ ಬಿಜೆಪಿಯವರು ಇನ್ನೂ ಹಿಂದೆ ಸರಿಯದೇ ಇರುವುದು ಬೇಸರ ತಂದಿದೆ ಎಂದರು.

**ನಿಜಾಂಶ ಬೆಳಕಿಗೆ ಬರಲಿದೆ :** ವಿನಯ್ ಸಾವಿನ ಹಿಂದೆ ನಿಗೂಢತೆಗಳು ಅಡಗಿದೆ. ಅವರ ಸಾವಿನ ಸಮಯ, ಮಾಡಿದ್ದು ಎನ್ನಲಾದ ವಾಟ್ಸಪ್ ನಿಜವಾಗಿಯೂ ಆತನೇ ಟೈಪ್ ಮಾಡಿದ್ದೇ! ವಿನಯ್ ಸಾವಿಗೆ ನಿಜವಾದ ಕಾರಣಗಳೇನು ಎಂಬ ಎಲ್ಲಾ ವಿಚಾರಗಳ ತನಿಖೆಯನ್ನು ಪೊಲೀಸರು ಕೈಗೊಂಡಿದ್ದಾರೆ. ಇನ್ನು 3–4 ದಿನಗಳಲ್ಲಿ ಸಾವಿನ ಹಿಂದಿನ ನಿಜಾಂಶ ಬೆಳಕಿಗೆ ಬರಲಿದೆ ಎಂದು ಹೇಳಿದರು.

**ರಾಜಕೀಯ ಉದ್ದೇಶ ಮಾತ್ರ:** ಬೆಂಗಳೂರಿನಲ್ಲಿ ವಿನಯ್ ಆತ್ಮಹತ್ಯೆ ಮಾಡಿಕೊಂಡ ಸಂದರ್ಭ ಶವದ ಮುಂದೆ ಕಿರುಚಾಡಿದ ಬಿಜೆಪಿ ನಾಯಕರು ಪಾರ್ಥಿವ ಶರೀರವನ್ನು ಕುಶಾಲನಗರಕ್ಕೆ ತಂದಾಗ ಯಾವೊಬ್ಬ ಬಿಜೆಪಿಗನೂ ಸ್ಥಳದಲ್ಲಿ ಇರಲಿಲ್ಲ. ಇದು ಬಿಜೆಪಿಗರಿಗೆ ವಿನಯ್ ಬಗೆಗಿನ ಕಾಳಜಿಗೆ ಉದಾಹರಣೆಯಾಗಿದೆ ಎಂದ ಪೊನ್ನಣ್ಣ, ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಕುಶಾಲನಗರಕ್ಕೆ ಬಂದು ವಿನಯ್ ಕುಟುಂಬಕ್ಕೆ ಆರ್ಥಿಕ ನೆರವು ನೀಡಿದ್ದಾರೆ. ಈ ಹಣವನ್ನು ವಾರದ ಮುಂಚೆ ಕೊಟ್ಟಿದ್ದರೆ ಖಂಡಿತವಾಗಿಯೂ ವಿನಯ್ ಆತ್ಮಹತ್ಯೆಯನ್ನು ತಡೆಯಬಹುದಿತ್ತು. ವಿನಯ್ ಅಂತ್ಯಕ್ರಿಯೆಗೂ ತೆರಳದೇ ವಿಜಯೇಂದ್ರ ತರಾತುರಿಯಲ್ಲಿ ಹೊರಟು ಹೋಗಿದ್ದು, ರಾಜಕೀಯ ಉದ್ದೇಶದಿಂದ ಮಾತ್ರವೇ ಇಲ್ಲಿಗೆ ಬಂದದ್ದು ಎಂಬುದಕ್ಕೆ ಸಾಕ್ಷಿ ಎಂದು ಟೀಕಿಸಿದರು. ಸಿದ್ದರಾಮಯ್ಯ ಮೇಲೆ ಈ ಹಿಂದೆ ಮಡಿಕೇರಿಯಲ್ಲಿ ಮೊಟ್ಟೆ ಎಸೆದ ಬಿಜೆಪಿ ನಾಯಕರ ಮೇಲಿನ ಕಳಂಕ ಇಂದಿಗೂ ಹಾಗೆಯೇ ಇದೆ ಎಂದು ಕಟುವಾಗಿ ಟೀಕಿಸಿದರು.

**ರಾಜಕೀಯ ಪಿತೂರಿ:** ಮಡಿಕೇರಿ ಶಾಸಕ ಡಾ.ಮಂತರ್ ಗೌಡ ಮಾತನಾಡಿ, ಕಳೆದ ನವಂಬರ್ 25ರಂದು ತಾನು ಕುಶಾಲನಗರ ಸರ್ಕಾರಿ ಆಸ್ಪತ್ರೆಯಲ್ಲಿನ ಸಮಸ್ಯೆಗೆ ಸಂಬಂಧಿಸಿದಂತೆ ವಿನಯ್ ಜತೆ ವಾಟ್ಸಪ್ ಕಾಲ್‌ನಲ್ಲಿ ಮಾತನಾಡಿ, ಅವುಗಳನ್ನು ಬಗೆಹರಿಸುವುದಾಗಿ ಹೇಳಿದ್ದೆ. ವಿನಯ್ ಜೊತೆ ತನಗೆ ಯಾವುದೇ ಸಂಪರ್ಕವೂ ಇಲ್ಲ. ಆತ ಯಾರು ಎಂದೇ ತನಗೆ ತಿಳಿದಿಲ್ಲ. ಹೀಗಿರುವಾಗ ಅನಾವಶ್ಯಕವಾಗಿ ತನ್ನ ಹೆಸರನ್ನು ಪ್ರಕರಣದಲ್ಲಿ ಸಿಲುಕಿಸಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು. ಜಿಲ್ಲೆಯ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಇಬ್ಬರು ಶಾಸಕರ ಸಾಧನೆ ಸಹಿಸಿಕೊಳ್ಳಲಾಗದೇ ಬಿಜೆಪಿ ರಾಜಕೀಯವಾಗಿ ತಮ್ಮಿಬ್ಬರ ವಿರುದ್ಧ ಷಡ್ಯಂತ್ರಕ್ಕೆ ಮುಂದಾಗಿದೆ. ಇದಕ್ಕೆ ಜಿಲ್ಲೆಯ ಜನತೆ ಸರಿಯಾದ ಪಾಠ ಕಲಿಸಲಿದ್ದಾರೆ ಎಂದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಧರ್ಮಜ ಉತ್ತಪ್ಪ ಮಾತನಾಡಿ, ವಿನಯ್ ಸಾವಿನ ಪ್ರಕರಣದಲ್ಲಿ ಇಬ್ಬರು ಶಾಸಕರನ್ನು ದಾಳವಾಗಿರಿಸಿಕೊಂಡಿರುವುದನ್ನು ಜಿಲ್ಲಾ ಕಾಂಗ್ರೆಸ್ ಖಂಡಿಸುತ್ತದೆ ಎಂದು ಹೇಳಿದರು. ಗೋಷ್ಠಿಯಲ್ಲಿ ರಾಜ್ಯ ಕಾಂಗ್ರೆಸ್ ವಕ್ತಾರ ಮೇರಿಯಂಡ ಸಂಕೇತ್ ಪೂವಯ್ಯ, ಪಕ್ಷ ಪ್ರಮುಖರಾದ ಟಿ.ಪಿ.ರಮೇಶ್, ಮುನೀರ್ ಅಹಮ್ಮದ್, ಕೊಲ್ಯದ ಗಿರೀಶ್ ಉಪಸ್ಥಿತರಿದ್ದರು.

**ಕೊಡಗಿನಲ್ಲಿ ಬಿಜೆಪಿ ಪಕ್ಷದ ಕಾರ್ಯಕರ್ತರ ವಿರುದ್ಧ ಅನಗತ್ಯವಾಗಿ ಕೇಸ್ ದಾಖಲಾಗುತ್ತಿದೆ. ಕಾಂಗ್ರೆಸ್ ಕೊಡಗು ಜಿಲ್ಲೆಯಲ್ಲಿ ಕಾನೂನನ್ನು ಗಾಳಿಗೆ ತೂರುತ್ತಿದೆ. ಬಿಜೆಪಿ ಕಾರ್ಯಕರ್ತರನ್ನು ಟಾರ್ಗೆಟ್ ಮಾಡಲಾಗುತ್ತಿದೆ ಕಾಂಗ್ರೆಸ್ ಅಧಿಕಾರ ದುರ್ಬಳಕೆ ಮಾಡುತ್ತಿದೆ. ಇಬ್ಬರು ಶಾಸಕರ ವಿರುದ್ಧ ಎಫ್‌ಐಆರ್ ದಾಖಲಿಸಲು ಹಿಂದೇಟು ಯಾಕೆ.?**

–ಯದುವೀರ್ ಒಡೆಯರ್, ಸಂಸದರು, ಕೊಡಗು–ಮೈಸೂರು

**ಕಾಂಗ್ರೆಸ್‌ನ ಕುತಂತ್ರಗಳಿಗೆ ಬಿಜೆಪಿ ಕಾರ್ಯಕರ್ತರು ಹೆದರಬಾರದು. ಜಿಲ್ಲೆಯಲ್ಲಿ ಹಿಂದೆ 20–25 ವರ್ಷ ಆಡಳಿತ ನಡೆಸಿದ್ದ ಬಿಜೆಪಿ ಶಾಸಕರು ಬೇರೆ ಪಕ್ಷದ ಕಾರ್ಯಕರ್ತರ ವಿರುದ್ಧ ಇಂತಹ ಕೀಳು ಮಟ್ಟದ ರಾಜಕೀಯ ನಡೆಸಿರಲಿಲ್ಲ. ವಿನಯ್ ಸೋಮಯ್ಯ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಇಬ್ಬರು ಕಾಂಗ್ರೆಸ್ ಶಾಸಕರ ವಿರುದ್ಧ ಎಫ್‌ಐಆರ್ ದಾಖಲಾಗಲೇಬೇಕಿದೆ.**

–ಪ್ರತಾಪ್ ಸಿಂಹ, ಮಾಜಿ ಸಂಸದರು.

# ನನ್ನನ್ನು ಕೆಣಕಬೇಡಿ, ನನ್ನ ಬಳಿ ಟನ್ ಗಟ್ಟಲೆ ದಾಖಲೆಗಳಿವೆ

ಅಧಿಕಾರ ದುರುಪಯೋಗ ಎಂದಿಗೂ ನೋಡಿಲ್ಲ ಎಂದರು.

ಸರ್ಕಾರ ಚಾರಿತ್ರ್ಯ ಹರಣಕ್ಕೆ ಇಳಿಯಬಾರದು. ಅತಿಕ್ರಮಣ ನಡೆದರೆ ಕ್ರಮ ಕೈಗೊಳ್ಳಿ. ಆದರೆ ನನ್ನ ಹೆಸರಿಗೆ ಕಳಂಕ ತರಬೇಡಿ. ನಾನು ತಲೆ ಬಾಗುವುದಿಲ್ಲ. ರೈತರಿಂದ ಮಾರಾಟ ಪತ್ರಗಳನ್ನು ಸಂಗ್ರಹಿಸಲು ಪೊಲೀಸರನ್ನು ಕೇತಗಾನಹಳ್ಳಿಗೆ ಕಳುಹಿಸಲಾಗುತ್ತಿದೆ ಎಂದು ಆರೋಪಿಸಿದ ಮಾಜಿ ಸಿಎಂ, ರಾಜ್ಯದ ಇತಿಹಾಸದಲ್ಲಿ ಎಂದಾದರೂ ಇಂತಹ ಘಟನೆ ನಡೆದಿದೆಯೇ ಎಂದು ಪ್ರಶ್ನಿಸಿದರು. ನಾನು ಕನಕಪುರದಲ್ಲಿ ಮಾತ್ರ ಬಂಡೆ ಒಡೆದಿದ್ದೇನೆ ಎಂದು ಹೇಳಿಕೊಳ್ಳುತ್ತಿದ್ದಾರೆ. ಬಳ್ಳಾರಿಗೂ ನನಗೂ ಏನು ಸಂಬಂಧ ಎನ್ನುತ್ತಿದ್ದಾರೆ. ನನ್ನನ್ನು ಕೆಣಕಬೇಡಿ. ನನ್ನ ಬಳಿ ಟನ್‌ಗಟ್ಟಲೆ ದಾಖಲೆಗಳು ಇವೆ. ಗಾಳಿಯಲ್ಲಿ ಗುಂಡು ಹೊಡೆಯುತ್ತಿಲ್ಲ ನಾನು, ಇರುವ ಸತ್ಯ ಹೇಳುತ್ತಿದ್ದೇನೆ ಎಂದು ಕುಮಾರಸ್ವಾಮಿ, ಡಿಸಿಎಂ ಡಿ.ಕೆ. ಶಿವಕುಮಾರ್‌ಗೆ ಎಚ್ಚರಿಕೆ ನೀಡಿದರು. ಈ ಸರಕಾರಕ್ಕೆ ನಾನು ನೇರವಾಗಿ ಹೇಳುತ್ತಿದ್ದೇನೆ. ನನ್ನ ಮೇಲಷ್ಟೇ ರಾಜಕೀಯ ಹಗೆತನ ಸಾಧಿಸುತ್ತಿರುವುದು ಅಷ್ಟೇ ಅಲ್ಲ, ರಾಜ್ಯದ ಜನರನ್ನು ಕಿತ್ತು ತಿನ್ನುತ್ತಿರುವ ಈ ಸರ್ಕಾರಕ್ಕೆ ನೇರ ಎಚ್ಚರಿಕೆ ನೀಡುತ್ತಿದ್ದೇನೆ. ಸವಾಲು ಹಾಕಲು ಇಲ್ಲಿಗೆ ಬಂದಿದ್ದೇನೆ. ಇಂದಿನಿಂದ ಈ ಜನ ವಿರೋಧಿ ಸರ್ಕಾರದ ವಿರುದ್ಧ ನೇರ ಯುದ್ಧ ಆರಂಭ ಮಾಡುತ್ತಿದ್ದೇನೆ ಎಂದು ಗುಡುಗಿದರು.

2003–2004ರಲ್ಲಿ ಅವರು ಎಸ್.ಎಂ.ಕೃಷ್ಣ ಸರ್ಕಾರದಲ್ಲಿ ನಗರಾಭಿವೃದ್ಧಿ ಸಚಿವರಾಗಿದ್ದರು. ಅದಿರಿನ ಮಣ್ಣಿನ ನೆಪದಲ್ಲಿ ಸಾವಿರಾರು ಟನ್ ಕಬ್ಬಿಣದ ಅದಿರನ್ನು ಬಳ್ಳಾರಿಯಲ್ಲಿ ಕದ್ದು ಸಾಗಿಸಿದರು. ಆ ಅದಿರು ಎಲ್ಲಿಗೆ ಹೋಯಿತು ಏನು ಮಾಡಿದರು. ಅವರು ಯಾರಿಗೆಲ್ಲ ಪತ್ರ ಬರೆದು ಅಧಿಕಾರ ದುರುಪಯೋಗ ಮಾಡಿಕೊಂಡಿದ್ದಾರೆ ಎಂಬ ಬಗ್ಗೆ ನನ್ನ ಬಳಿ ದಾಖಲೆಗಳು ಇವೆ ಎಂದು ಡಿಕೆ ಶಿವಕುಮಾರ್ ವಿರುದ್ಧ ವಾಗ್ದಾಳಿ ನಡೆಸಿದರು. ಇನ್ನು 2016–17ರ ನೀತಿಯನ್ನು ಉಲ್ಲೇಖಿಸಿ, ಸಿದ್ದರಾಮಯ್ಯ ಅವರು ಎಸ್‌ಸಿ–ಎಸ್‌ಟಿ ಯುವ ಗುತ್ತಿಗೆದಾರರಿಗೆ 50 ಲಕ್ಷ ರೂ.ಗಳವರೆಗೆ ಸರ್ಕಾರಿ ಟೆಂಡರ್‌ಗಳಲ್ಲಿ ಮೀಸಲಾತಿಯನ್ನು ಪರಿಚಯಿಸಿದ್ದಾರೆ. ಸಿದ್ದರಾಮಯ್ಯ ಅವರೇ ನೀವು ಒಬಿಸಿಗಳು, ಎಸ್‌ಸಿಗಳು ಮತ್ತು ಎಸ್‌ಟಿಗಳನ್ನು ಉನ್ನತೀಕರಿಸಿದ್ದೇನೆ ಎಂದು ಹೇಳುತ್ತೀರಿ. ಆದರೆ ಅದರ ಡೇಟಾವನ್ನು ಬಿಡುಗಡೆ ಮಾಡಿ. ಎಷ್ಟು ಕುಟುಂಬಗಳು ನಿಜವಾಗಿಯೂ ಪ್ರಯೋಜನ ಪಡೆದಿವೆ ಎಂಬುದನ್ನು ತೋರಿಸಿ. ಶ್ವೇತಪತ್ರವನ್ನು ಪ್ರಕಟಿಸಿ ಎಂದು ಆಗ್ರಹಿಸಿದರು.

ರಾಜ್ಯ ಸರ್ಕಾರ ತೆರಿಗೆ ಹಣವನ್ನು ಬಳಸಿಕೊಂಡು ಅಣೆಕಟ್ಟುಗಳನ್ನು ನಿರ್ಮಿಸುತ್ತಿದೆ. ಆದರೆ ತಮಿಳುನಾಡಿಗೆ ನೀರು ಬಿಡುತ್ತಿದೆ. ನಾವು ಕನ್ನಡಿಗರು ಇತರ ರಾಜ್ಯಗಳಿಗೆ ನೀರು ಹರಿಸುವ ಕೆಲಸವನ್ನು ಮಾಡುತ್ತಿದ್ದೇವೆ. ಕಾವೇರಿ ವಿಷಯದಲ್ಲಿ ನಮಗೆ ಅನ್ಯಾಯವಾಗಿದೆ. ನಮ್ಮ ರಾಜ್ಯವು ಯಾವಾಗಲೂ ಹಿಂದುಳಿದಿದೆ. ಪದೇ ಪದೇ, ನೆರೆಯ ರಾಜ್ಯಗಳು ನಮಗಿಂತ ಹೆಚ್ಚು ಪ್ರಯೋಜನ ಪಡೆದಿವೆ. ನೀರಿಗೆ ಸಂಬಂಧಿಸಿದ ವಿಷಯಗಳಲ್ಲಿಯೂ ಕನ್ನಡಿಗರಲ್ಲಿ ಒಗ್ಗಟ್ಟು ಇಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಮೈಸೂರು ಮಿತ್ರ ಭಾನುವಾರ 6 ಏಪ್ರಿಲ್ 2025


# ಮೈಸೂರಲ್ಲಿ ಏ.11, 12, 13ರಂದು ಜ್ಯುವೆಲ್ಲರಿ ಪ್ರದರ್ಶನ



ಮೈಸೂರು, ಏ.5– ಮೈಸೂರಿನ ಎಂ.ಜಿ. ರಸ್ತೆಯ ರ್‍ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನಲ್ಲಿ ಏ.11, 12, 13ರಂದು ನಿತ್ಯ ಬೆಳಗ್ಗೆ 10ರಿಂದ ರಾತ್ರಿ 9 ಗಂಟೆವರೆಗೆ ಜ್ಯುವೆಲ್ಲರಿ ಶೋ ಏರ್ಪಡಿಸಲಾಗಿದೆ. ವಿವಿಧ ರಾಜ್ಯಗಳ ಪ್ರಮುಖ ಆಭರಣ ವಿನ್ಯಾಸಗಾರರ ವಿನೂತನ ಆಭರಣಗಳ ಸಂಗ್ರಹವನ್ನು ಇಲ್ಲಿ ಪ್ರದರ್ಶಿಸಲಾಗುವುದು. ವಿಶೇಷವಾಗಿ ಮದುವೆ ಕಲೆಕ್ಷನ್ಸ್, ಡೈಮಂಡ್, ಚಿನ್ನ ಹಾಗೂ ಬೆಳ್ಳಿ ಆಭರಣಗಳ ಪ್ರದರ್ಶನವಿರುತ್ತದೆ.

# ಇಂದು ಮೈಸೂರಲ್ಲಿ ರಾಷ್ಟ್ರೀಯ ಮಟ್ಟದ ಕಾಟ ಕುಸ್ತಿ ಪಂದ್ಯಾವಳಿ

**ಮಹಾರಾಷ್ಟ್ರ, ಕೊಲ್ಲಾಪುರ, ಬೆಳಗಾವಿ, ಪಂಜಾಬ್ ಕುಸ್ತಿಪಟುಗಳು ಭಾಗಿ**



ಮೈಸೂರು, ಏ.5(ಜಿಎ)–ಮೈಸೂರಿನ ಮಂಡಿ ಟೈಗರ್ ಪೈಲ್ವಾನ್ ಅಹಮ್ಮದ್ ಹುಟ್ಟುಹಬ್ಬದ ಅಂಗವಾಗಿ ರಾಷ್ಟ್ರೀಯ ಮಟ್ಟದ ಕಾಟ ಕುಸ್ತಿ ಪಂದ್ಯಾವಳಿಯನ್ನು ಏ.6 ಮಧ್ಯಾಹ್ನ 2.30ಕ್ಕೆ ನಗರದ ಡಿ.ದೇವರಾಜ ಅರಸು ಕ್ರೀಡಾಂಗಣದಲ್ಲಿ ಏರ್ಪಡಿಸಲಾಗಿದೆ ಪೈಲ್ವಾನ್ ರವಿಪ್ರಸಾದ್ ಗಂಜಾಂ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಮಂಡಿ ಟೈಗರ್ ಪೈಲ್ವಾನ್ ಅಹಮ್ಮದ್ ಅವರು ರಾಜ್ಯ, ರಾಷ್ಟ್ರೀಯ ಮಟ್ಟದ ಎಲ್ಲಾ ಪಂದ್ಯಾವಳಿಗಳಲ್ಲಿ ಭಾಗವಹಿಸಿ ತಮ್ಮದೇ ಛಾಪು ಮೂಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಬೇಕೆಂದು ಅವರ ಪುತ್ರರು, ಶಿಷ್ಯರು ಕಾಟ ಕುಸ್ತಿ ಪಂದ್ಯಾವಳಿಯನ್ನು ಆಯೋಜಿಸಿದ್ದಾರೆ ಎಂದರು.

ಅಂದಿನ ಪಂದ್ಯಾವಳಿಯಲ್ಲಿ ಮಹಾರಾಷ್ಟ್ರದ ಕೇಸರಿ ಪೈ.ಶಿಖಂದರ್ ಶೇಕ್ ಕೊಲ್ಲಾಪುರ, ಪಂಜಾಬಿನ ಪೈ.ಅಂಕಿತ್ ಕುಮಾರ್ ನಡುವೆ ಮಾರ್ಫಿಟ್ ಕುಸ್ತಿ ನಡೆಯಲಿದ್ದು, ಇವರನ್ನು ಮೈಸೂರಿಗೆ ಕರೆಸಲು ಲಕ್ಷಾಂತರ ರೂ. ನಿಯೋಗಿಸಲಾಗಿದೆ ಎಂದು ತಿಳಿಸಿದರು.

ಮೈಸೂರಿನ ಪೈ. ಅಹಮ್ಮದ್ ಅವರ ಮಗ ಪೈ.ಅಲಿಶೇರ್, ಬೆಳಗಾವ್ ಪೈ.ಮಾರುತಿ ನಡುವೆ 30 ನಿಮಿಷದ ಪಂದ್ಯ, ಪೈ.ಬಾಳು, ಮಹಾರಾಷ್ಟ್ರ ಪೈ.ಮುಯಿನ್ ನಡುವೆ 40 ನಿಮಿಷದ ಪಂದ್ಯ ಹಾಗೂ ಧಾರವಾಡದ ಪೈ.ಮೀರಾಸಾಬ್, ಮೈಸೂರು ದಸರಾ ಕುಮಾರ ಪ್ರಶಸ್ತಿ ವಿಜೇತ ಪೈ.ಗಿರೀಶ್ ನಡುವೆ 15 ನಿಮಿಷದ ಜಿದ್ದಾ ಜಿದ್ದಿ ಪಂದ್ಯಾವಳಿ ಜೊತೆಗೆ ಅನೇಕ ಪೈಲ್ವಾನ್‌ರು ಕುಸ್ತಿಪಟು ಪಂದ್ಯಾವಳಿಯಲ್ಲಿ ಸೆಣೆಸಾಟ ನಡೆಸಲಿದ್ದಾರೆ ಎಂದರು.

ಮಂಡಿ ಟೈಗರ್ ಪೈಲ್ವಾನ್ ಅಹಮ್ಮದ್ ಮಾತನಾಡಿ, ಮೈಸೂರಿನ ಪೈಲ್ವಾನ್ ಎಂದರೆ ದೇಶದಲ್ಲಿ ಉತ್ತಮ ಹೆಸರು, ಗೌರವವಿದೆ. ಆದರೆ, ಇಂದು ಮೈಸೂರಲ್ಲಿ ಕುಸ್ತಿಪಟುಗಳ ಸಂಖ್ಯೆ ಕ್ಷೀಣಿಸುತ್ತಿರುವುದು ಬೇಸರದ ಸಂಗತಿ. ಆದ್ದರಿಂದ ಕುಸ್ತಿ ಉತ್ತೇಜಿಸಲು ಈ ಪಂದ್ಯಾವಳಿ ಏರ್ಪಡಿಸಲಾಗುತ್ತಿದೆ ಎಂದರು. ಗೋಷ್ಠಿಯಲ್ಲಿ ಶಿವು, ನಾಸೀರ್, ಪೈ.ಮಹಮ್ಮದ್, ಮಹಮ್ಮದ್ ಖಾಸಿಂ, ಪೈ.ಯೂನಿಸ್, ಪೈ.ಅತ್ತರ್ ಉಪಸ್ಥಿತರಿದ್ದರು.

# ಇಂದು ಮೈಸೂರಲ್ಲಿ ಶ್ರೀ ರಾಮನವಮಿ

ಮೈಸೂರು,ಏ.5–ನಗರದ ಚಾಮರಾಜಪುರಂ ಜಯಲಕ್ಷ್ಮಿ ವಿಲಾಸ ರಸ್ತೆಯಲ್ಲಿರುವ ಅರಳಿಕಟ್ಟೆ ಶ್ರೀ ರಾಮ ದೇವಸ್ಥಾನ ಧಾರ್ಮಿಕ ಮತ್ತು ದಾನದತ್ತಿ ವತಿಯಿಂದ ಶ್ರೀ ವಿಶ್ವಾವಸುನಾಮ ಸಂವತ್ಸರದ ಶ್ರೀ ರಾಮನವಮಿ ಪ್ರಯುಕ್ತ ದೇವಸ್ಥಾನದ ಆವರಣದಲ್ಲಿ ಬೆಳಗ್ಗೆ 10.30ಕ್ಕೆ ಶ್ರೀ ರಾಮನಿಗೆ ಮಹಾಮಂಗಳಾರತಿ ಹಾಗೂ ಪ್ರಸಾದ ವಿನಿಯೋಗ ಏರ್ಪಡಿಸಲಾಗಿದೆ. ಸಂಜೆ 6.30ಕ್ಕೆ ಭಜನಾ ಮಂಡಳಿಗಳಿಂದ ಭಜನಾ ಕಾರ್ಯಕ್ರಮವಿದೆ.

# ಹಿಂದುಳಿದ ಜಾಗೃತಿ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮುಗೆ ಪಿತೃ ವಿಯೋಗ



**ಮೈಸೂರು:** ರಾಜ್ಯ ಹಿಂದುಳಿದ ವರ್ಗದ ಜಾಗೃತಿ ವೇದಿಕೆ ರಾಜ್ಯಾಧ್ಯಕ್ಷರಾದ ಕೆ.ಎಸ್.ಶಿವರಾಮು ಅವರ ತಂದೆ ಸಿದ್ದೇಗೌಡರು ಶನಿವಾರ ನಿಧನರಾಗಿದ್ದಾರೆ. ಅವರಿಗೆ 80 ವರ್ಷ ವಯಸ್ಸಾಗಿತ್ತು. ದಿವಂಗತರು ಪತ್ನಿ ನಿಂಗಮ್ಮ, ಪುತ್ರ ಕೆ.ಎಸ್.ಶಿವರಾಮು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಮೃತರ ಸ್ವಗೃಹ ಕೆ.ಆರ್.ಪೇಟೆಯಲ್ಲಿ ಅವರ ಪಾರ್ಥಿವ ಶರೀರವನ್ನು ಸಾರ್ವಜನಿಕ ದರ್ಶನಕ್ಕೆ ಅವಕಾಶ ಕಲ್ಪಿಸಿ ಶನಿವಾರ ಸಂಜೆ ಅಂತ್ಯಕ್ರಿಯೆ ನೆರವೇರಿಸಲಾಯಿತು. ಶಾಸಕ ಡಾ.ಡಿ. ತಿಮ್ಮಯ್ಯ, ಜಿಲ್ಲಾ ಮಡಿವಾಳರ ಸಂಘದ ಅಧ್ಯಕ್ಷರಾದ ರವೀನಂದನ್, ಜಿಲ್ಲಾ ಕುಂಬಾರರ ಸಂಘದ ಅಧ್ಯಕ್ಷ ಎಚ್.ಎಸ್.ಪ್ರಕಾಶ್, ಜಿಲ್ಲಾ ಉಪ್ಪಾರ ಸಂಘದ ಅಧ್ಯಕ್ಷ ಯೋಗೇಶ್ ಉಪ್ಪಾರ್, ಮಂಡ್ಯ ಪುರಸಭಾ ಮಾಜಿ ಸದಸ್ಯ ಮಂಜುನಾಥ್, ಬಿಜೆಪಿಯ ಮಾಜಿ ಅಧ್ಯಕ್ಷ ಕೆಜೆ ವಿಜಯಕುಮಾರ್, ರಾಜ್ಯ ಕಾಂಗ್ರೆಸ್ ಪರಿಶಿಷ್ಟ ಪಂಗಡದ ಉಪಾಧ್ಯಕ್ಷ ದಿನೇಶ್ ಶಿಂಶ, ಮುಖಂಡರಾದ ಲೋಕೇಶ್ ಕುಮಾರ್ ಮಾದಾಪುರ, ಮೈಸೂರು ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಉಪಾಧ್ಯಕ್ಷ ದೊರೆಸ್ವಾಮಿ, ಮಹೇಶ್ ಮುಂತಾದ ಗಣ್ಯರು ಅಂತಿಮ ದರ್ಶನ ಪಡೆದರು.



**ಕಮಲಾ ಲಕ್ಕಪ್ಪಗೌಡ**

ಮೈಸೂರಿನ ಕುವೆಂಪುನಗರ ನಿವಾಸಿ, ಹಂಪಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ದಿ.ಪ್ರೊ.ಎಚ್.ಕೆ.ಲಕ್ಕಪ್ಪಗೌಡ ಅವರ ಪತ್ನಿ ಕಮಲಾ ಲಕ್ಕಪ್ಪಗೌಡ (78) ಶುಕ್ರವಾರ ನಿಧನರಾದರು. ಇವರಿಗೆ ಪುತ್ರ, ಬೆಂಗಳೂರಿನ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಉಪಕುಲಸಚಿವ ಡಾ.ಎಚ್.ಎಲ್.ರವೀಂದ್ರ ಪ್ರಸಾದ್, ಪುತ್ರಿ ಮೈಸೂರಿನ ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಪ್ರಾಧ್ಯಾಪಕಿ ಎಚ್.ಎಲ್. ಕಲಾಭಾರತಿ, ಅಳಿಯ ಮೈಸೂರಿನ ಜಯದೇವ ಹೃದ್ರೋಗ ಸಂಸ್ಥೆ ಪ್ರಾಧ್ಯಾಪಕ ಡಾ.ಬಿ.ದಿನೇಶ್ ಇದ್ದಾರೆ. ಅಂತ್ಯಕ್ರಿಯೆ ಶನಿವಾರ ಕುವೆಂಪುನಗರದ ಕಾವೇರಿ ಶಾಲೆ ಹಿಂಭಾಗದ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



**ಪ್ರೊ. ಡಿ.ಎಸ್.ರಾಮಕೃಷ್ಣರಾವ್**

ಮೈಸೂರಿನ ದೇಸಿರಾಜು ಆರ್ಕಿಟೆಕ್ಟ್‌ನ ಪ್ರಿನ್ಸಿಪಾಲ್, ಆರ್ಕಿಟೆಕ್ಟ್ ಮತ್ತು ಯಾದವಗಿರಿ ಸಂಕಲ್ಪ ಸೆಂಟ್ರಲ್ ಪಾರ್ಕ್ ನಿವಾಸಿ ಪ್ರೊ. ಡಿ.ಎಸ್.ರಾಮಕೃಷ್ಣರಾವ್(70) ಗುರುವಾರ ನಿಧನರಾದರು. ಶ್ರೀಯುತರು ಪುತ್ರರಾದ ವಿವೇಕ್ ಮತ್ತು ವೆಂಕಟ್ ದೇಸಿರಾಜು, ಸೊಸೆ ಆಶಿಮಾ ಮತ್ತು ಉಜ್ವಲ, ಮೊಮ್ಮಕ್ಕಳಾದ ನೀರವ್, ರೋಹನ್ ದೇಸಿರಾಜು ಸೇರಿದಂತೆ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗೋಕುಲಂನ ಚಿರಶಾಂತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಸರ್ಕಾರಿ ನೌಕರರ ಕ್ರೀಡಾಕೂಟಕ್ಕೆ ಚಾಲನೆ

**ಸರ್ಕಾರಿ ನೌಕರರು ಆರೋಗ್ಯ ಕಾಪಾಡಿಕೊಳ್ಳುವುದರೊಂದಿಗೆ ಸಮಯ ಪಾಲನೆ ಮಾಡಬೇಕು: ಶಾಸಕ ಜಿ.ಟಿ.ದೇವೇಗೌಡ ಸಲಹೆ**

ಮೈಸೂರು,ಏ.5(ಎಂಟಿವೈ)–ಸರ್ಕಾರಿ ನೌಕರರು ತಮ್ಮ ಆರೋಗ್ಯ ಕಾಪಾಡಿಕೊಳ್ಳುವುದರೊಂದಿಗೆ ಕರ್ತವ್ಯದಲ್ಲಿ ಸಮಯ ಪಾಲನೆಗೆ ಆದ್ಯತೆ ನೀಡಬೇಕು ಎಂದು ಶಾಸಕ ಜಿ.ಟಿ.ದೇವೇಗೌಡ ಸಲಹೆ ನೀಡಿದ್ದಾರೆ.

ಮೈಸೂರಿನ ನಜರ್‌ಬಾದ್‌ನಲ್ಲಿರುವ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ, ಜಿ.ಪಂ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ರಾಜ್ಯ ಸರ್ಕಾರಿ ನೌಕರರ ಸಂಘದ ವತಿಯಿಂದ ಶನಿವಾರ ನಡೆದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕೆಲಸದ ಒತ್ತಡ ನಿವಾರಣೆಗೆ ಸರ್ಕಾರಿ ನೌಕರರು ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ದೈಹಿಕ ಸದೃಢತೆ, ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬೇಕು. ಸರ್ಕಾರಿ ನೌಕರರು ಸದಾ ಒತ್ತಡದಿಂದ ಕೆಲಸ ಮಾಡಬೇಕಾಗುತ್ತದೆ. ಆರೋಗ್ಯದ ಬಗ್ಗೆ ಅಗತ್ಯ ಗಮನಹರಿಸಬೇಕು. ಮುಂಜಾನೆ 5 ಗಂಟೆಗೆ ಏಳುವ ಅಭ್ಯಾಸ ಮಾಡಿಕೊಳ್ಳಬೇಕು. ಪ್ರತಿಯೊಬ್ಬರಿಗೂ ಶಿಕ್ಷಣದ ಜೊತೆಗೆ ಕ್ರೀಡೆ ಮುಖ್ಯವಾಗಿದ್ದು, ಇವೆರಡೂ ಇದ್ದರಷ್ಟೇ ಆರೋಗ್ಯವಾಗಿರಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಕರ್ತವ್ಯದ ವೇಳೆ ಬಡವರ, ನೊಂದವರ ಪರವಾಗಿ ಕೆಲಸ ಮಾಡುವ ಸರ್ಕಾರಿ ನೌಕರರನ್ನು ಜನ ಸದಾ ಸ್ಮರಿಸಿಕೊಳ್ಳುತ್ತಾರೆ. ನಾನು ಶಾಸಕನಾದರೂ ತಪ್ಪು ಮಾಡಿದ ಅಧಿಕಾರಿಗೆ ಬೈದು ಬುದ್ದಿ ಹೇಳಿದ್ದೇನೆಯೇ ಹೊರತು ಯಾವೊಬ್ಬ ಅಧಿಕಾರಿಯನ್ನು ನನ್ನ ಅಧಿಕಾರವಧಿಯಲ್ಲಿ ಅಮಾನತ್ತು ಮಾಡಿಸಿಲ್ಲ ಎಂದರು.

**ಸಮಯ ಪಾಲನೆ ಮಾಡಿ:** ಸರ್ಕಾರಿ ನೌಕರರು ಸಮಯ ಪಾಲನೆಗೆ ಮಹತ್ವ ನೀಡಬೇಕು. ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಮಯಕ್ಕೆ ಗೌರವ ಕೊಡುತ್ತಾರೆ. ಯಾವ ಕಾರ್ಯಕ್ರಮವೇ ಆಗಲಿ ಸಮಯಕ್ಕೆ ಸರಿಯಾಗಿ ಪ್ರಾರಂಭ ಮಾಡುವಂತೆ ಸೂಚನೆ ನೀಡುತ್ತಾರೆ. ನಾನು ಶಾಸಕನಾಗಿ ಸಾಕಷ್ಟು ಜವಾಬ್ದಾರಿ ಹೊಂದಿದ್ದು ಯಾವುದೇ ಕಾರ್ಯಕ್ರಮಕ್ಕೆ ನನಗೆ ಆಹ್ವಾನ ನೀಡಿದರೂ ಸರಿಯಾದ ಸಮಯಕ್ಕೆ ಹೋಗುವ ಅಭ್ಯಾಸವನ್ನು ರೂಢಿಸಿಕೊಂಡಿದ್ದೇನೆ. ಹಾಗಾಗಿ ಸರ್ಕಾರಿ ನೌಕರರೂ ಸಮಯಪಾಲನೆ ಮಾಡುವ ಹಾಗೂ ಶಿಸ್ತನ್ನು ಮೈಗೂಡಿಸಿಕೊಳ್ಳುವಂತೆ ಸಲಹೆ ನೀಡಿದರು.

ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಮಾತನಾಡಿ, ಮನುಷ್ಯ ಆರೋಗ್ಯವಾಗಿರಲು ಯೋಗ, ವಾಯುವಿಹಾರ ಜತೆಗೆ ಯಾವುದಾದರೊಂದು ಕ್ರೀಡೆಯಲ್ಲಿ ಭಾಗವಹಿಸಬೇಕು. ಸರ್ಕಾರಿ ನೌಕರರು ಕರ್ತವ್ಯ ಪಾಲನೆ ಜೊತೆ ಜೊತೆಗೆ ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

**ಕ್ರೀಡೆಯಲ್ಲಿ ಮಿಂದೆದ್ದ ಸರ್ಕಾರಿ ನೌಕರರು:** ಸರ್ಕಾರಿ ನೌಕರರ ಸಂಘದ ಮೈಸೂರು ಜಿಲ್ಲಾ ಮಟ್ಟದ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಸರ್ಕಾರಿ ನೌಕರರು ಪಾಲ್ಗೊಂಡು ಗಮನ ಸೆಳೆದರು. ಕ್ರೀಡಾಂಗಣದಲ್ಲಿ ಗುಂಪು ಕ್ರೀಡೆ ಮತ್ತು ಅಥ್ಲೆಟಿಕ್ಸ್ ಸ್ಪರ್ಧೆ ನಡೆದರೆ, ವೇದಿಕೆಯಲ್ಲಿ ಸಾಂಸ್ಕೃತಿಕ ಸ್ಪರ್ಧೆ ಜರುಗಿತು. ಜಿಲ್ಲೆಯ ವಿವಿಧ ತಾಲೂಕಿನಿಂದ ಆಗಮಿಸಿದ್ದ ಸರ್ಕಾರಿ ನೌಕರರು ಕ್ರೀಡೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಂಭ್ರಮಿಸಿದರು. ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಜವರೇಗೌಡ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್, ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಡಾ.ಸಿ.ಬಿ.ಅರುಣ್ ಕುಮಾರ್, ಉಪಾಧ್ಯಕ್ಷ ಮಾಲಂಗಿ ಸುರೇಶ್, ಜಿಲ್ಲಾ ಪದಾಧಿಕಾರಿಗಳಾದ ಆರ್.ನಾಗರಾಜ್, ಕೆ.ಸಿ.ರವಿ, ರಾಜ್ಯಪರಿಷತ್ ಸದಸ್ಯ ಡಿ.ಮಾಲೇಗೌಡ, ಕಾರ್ಯಾಧ್ಯಕ್ಷ ಪಿ.ರಾಘವೇಂದ್ರ, ಗೌರವಾಧ್ಯಕ್ಷ ಎ.ಸಿ.ಮಂಜೇಗೌಡ, ಹಿರಿಯ ಉಪಾಧ್ಯಕ್ಷ ಎಸ್.ಜೆ.ರಮೇಶ್, ಟಿ.ಎನ್.ಲೋಕೇಶ್, ಕ್ರೀಡಾ ಕಾರ್ಯದರ್ಶಿ ಎ.ಶಿವರಾಜು, ಎಂ.ಆರ್.ಶಿವಕುಮಾರ್ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ನಜರ್‌ಬಾದ್‌ನಲ್ಲಿರುವ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ನಡೆದ ಸರ್ಕಾರಿ ನೌಕರರ ಸಂಘದ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಶಾಸಕ ಜಿ.ಟಿ.ದೇವೇಗೌಡ ಅವರು ಪಥಸಂಚನದಲ್ಲಿ ಪಾಲ್ಗೊಂಡಿದ್ದ ಸರ್ಕಾರಿ ನೌಕರರಿಗೆ ಶುಭ ಕೋರಿದರು.

> “ಮುಖ್ಯಮಂತ್ರಿ ಸಿದ್ದರಾಮಯ್ಯ ಜನಪರ ಕೆಲಸಕ್ಕಾಗಿ, ಅಭಿವೃದ್ಧಿಗಾಗಿ ಸಾಕಷ್ಟು ಕಾರ್ಯಕ್ರಮ ಜಾರಿಗೆ ತಂದಿದ್ದಾರೆ. ಸರ್ಕಾರದ ಜನಪರ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಜವಾಬ್ದಾರಿ ಸರ್ಕಾರಿ ನೌಕರರದ್ದಾಗಿದೆ. ಕಾರ್ಯಕ್ರಮ ಮತ್ತು ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ.
> **–ಜಿ.ಟಿ.ದೇವೇಗೌಡ, ಶಾಸಕರು**

# ಬೆಲೆ ಏರಿಕೆ ಖಂಡಿಸಿ ಎಎಪಿಯಿಂದ ಪ್ರತಿಭಟನೆ

**ಕೇಂದ್ರ, ರಾಜ್ಯ ಸರ್ಕಾರಗಳ ಜನವಿರೋಧಿ ಆಡಳಿತದ ಬಗ್ಗೆ ಆಕ್ರೋಶ**




ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಆಮ್ ಆದ್ಮಿ ಪಕ್ಷದ ವತಿಯಿಂದ ಪುರಭವನ ಮುಂಭಾಗದ ಡಾ.ಅಂಬೇಡ್ಕರ್ ಪ್ರತಿಮೆ ಬಳಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಏ.5(ಜಿಎ)–ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಆಮ್ ಆದ್ಮಿ ಪಕ್ಷದ ವತಿಯಿಂದ ಪುರಭವನ ಮುಂಭಾಗದ ಅಂಬೇಡ್ಕರ್ ಪ್ರತಿಮೆ ಬಳಿ ಪ್ರತಿಭಟನೆ ನಡೆಸಲಾಯಿತು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ದಿನ ಬಳಕೆ ವಸ್ತುಗಳ ಬೆಲೆಯನ್ನು ನಿರಂತರವಾಗಿ ಹೆಚ್ಚಿಸುತ್ತಾ ಜನರಿಗೆ ತೊಂದರೆ ಕೊಡುತ್ತಿವೆ. ಬಿಜೆಪಿ ತೆರಿಗೆ ಏರಿಕೆ ಮಾಡಿದರೆ ಕಾಂಗ್ರೆಸ್ ಬೆಲೆ ಏರಿಕೆ ಮಾಡುತ್ತಿದೆ. ಬಹುರಾಷ್ಟ್ರೀಯ ಕಂಪನಿಗಳ ಸಾಲ ಮನ್ನಾ ಮಾಡುವ ಕೇಂದ್ರ ಸರ್ಕಾರ ಜನ ಸಾಮಾನ್ಯರ ಮೇಲೆ ತೆರಿಗೆ ಹೊರೆ ಹೊರಿಸುತ್ತಿದೆ. ಪೆಟ್ರೋಲ್, ಡೀಸೆಲ್, ಗ್ಯಾಸ್ ದರ ಹೆಚ್ಚಿಸಿದೆ. ಚಿನ್ನದ ಬೆಲೆಯಂತೂ ದುಪ್ಪಟ್ಟಾಗಿದೆ. ಇದರ ಜತೆಗೆ ರಾಜ್ಯ ಸರ್ಕಾರ ಹಾಲು, ಮೊಸರು, ವಿದ್ಯುತ್, ನೀರು, ಮನೆ ಕಂದಾಯ ಹೆಚ್ಚಿಸಿದೆ. ಇದರಿಂದ ಬಡ, ಮಧ್ಯಮ ವರ್ಗದ ಜನರ ಪರಿಸ್ಥಿತಿ ಚಿಂತಾಜನಕವಾಗಿದೆ ಎಂದು ಪ್ರತಿಭಟನಕಾರರು ಕಿಡಿ ಕಾರಿದರು.

ರಾಜ್ಯದಲ್ಲಿ ಮುಂದ್ರಾಕ ಶುಲ್ಕ ಶೇ.300ರಷ್ಟು ಏರಿಕೆಯಾಗಿದೆ. ಆಸಿಗಳ ಮೇಲಿನ ಮಾರ್ಗಸೂಚಿ ದರ, ವಾಹನಗಳ ನೋಂದಣಿ ಶುಲ್ಕ, ಮದ್ಯದ ಬೆಲೆ, ಪೆಟ್ರೋಲ್, ಡೀಸೆಲ್ ದುಬಾರಿಯಾಗಿದೆ. ಹಾಲಿನ ಬೆಲೆಯನ್ನು ಏರಿಕೆ ಮಾಡುತ್ತಲೇ ಇದೆ. ಆಸ್ಪತ್ರೆಗಳಲ್ಲಿ ಚಿಕಿತ್ಸಾ ವೆಚ್ಚ ದುಬಾರಿಯಾಗಿದ್ದು, ಬಿ–ಖಾತಾ ಹೆಸರಿನಲ್ಲಿ ದರೋಡೆ ಮಾಡುತ್ತಿದ್ದಾರೆ. ಆಸ್ತಿ ತೆರಿಗೆ ದುಪ್ಪಟ್ಟಾಗಿದ್ದು, ಜನ ಸಾಮಾನ್ಯರು ಜೀವಿಸುವುದೇ ಕಷ್ಟವಾಗಿದೆ ಎಂದರು.

ಜನರಿಗೆ ತೆರಿಗೆ ಹೊರೆ ಹೊರಿಸಿ, ದಿನ ಬಳಕೆ ವಸ್ತುಗಳ ಬೆಲೆ ದುಬಾರಿಗೊಳಿಸಿ ಹಿಂಸಿಸುತ್ತಿರುವ ಸರ್ಕಾರ ಶಾಸಕರು ಮತ್ತು ಸಚಿವರ ವೇತನ, ಭತ್ಯೆ ಹೆಚ್ಚಿಸಿಕೊಳ್ಳುತ್ತಿದೆ. ಇದರಿಂದ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷದವರಿಗೆ ಜನರ ಬಗ್ಗೆ ಕಾಳಜಿ ಇಲ್ಲ ಎಂಬ ಸತ್ಯ ಮನವರಿಕೆಯಾಗುತ್ತದೆ. ಹೀಗಾಗಿ ಕೂಡಲೇ ಅಗತ್ಯ ವಸ್ತುಗಳ ಬೆಲೆ ಇಳಿಕೆ ಮಾಡಬೇಕು. ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಿ ಸಾಂವಿಧಾನಿಕ ಅಧಿಕಾರ ವಿಕೇಂದ್ರೀಕರಣ ಕಾಪಾಡಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಪಕ್ಷದ ಜಿಲ್ಲಾಧ್ಯಕ್ಷ ಎಲ್.ರಂಗಯ್ಯ, ನಗರಾಧ್ಯಕ್ಷ ಎಂ.ಸೋಮಶೇಖರ್, ಪ್ರಧಾನ ಕಾರ್ಯದರ್ಶಿ ವಿಶ್ವನಾಥ್ ಕುಲಕರ್ಣಿ, ಅಧ್ಯಕ್ಷ ಟಿ.ಎಸ್.ವೀರೇಶ್‌ಕುಮಾರ್, ನಂಜನಗೂಡು ಅಧ್ಯಕ್ಷ ಎಮ್.ಜೆ.ನಾಗರಾಜೇಗೌಡ, ಕಾರ್ಯದರ್ಶಿ ನಿಂಗಮ್ಮ, ಶಾಂತಮ್ಮ, ಯುವ ಘಟಕ ಜಿಲ್ಲಾಧ್ಯಕ್ಷ ಅನಂತ ಸೂರ್ಯ, ಮೊಹಮ್ಮದ್ ಜಾಫರ್, ಸತೀಶ್, ಜಯಶ್ರೀ ಮತ್ತಿತರರು ಉಪಸ್ಥಿತರಿದ್ದರು.

## ಸಿ.ನರೇಂದ್ರಗೆ ಅಭಿನಂದನೆ...



ಮೈಸೂರು ತಾಲೂಕು ಹುಯಿಲಾಳು ಗ್ರಾಮದ ಶ್ರೀ ಮನೆ ಮಂಚಮ್ಮ ದೇವಸ್ಥಾನ ಸೇವಾ ಟ್ರಸ್ಟ್ ವತಿಯಿಂದ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ನಾಗವಾಲ ಗ್ರಾಪಂ ಮಾಜಿ ಅಧ್ಯಕ್ಷ ಸಿ.ನರೇಂದ್ರ ಅವರ ಹುಟ್ಟುಹಬ್ಬಕ್ಕೆ ಶುಭಾಶಯ ಕೋರಿದರು. ಈ ವೇಳೆ ಟ್ರಸ್ಟ್ ಅಧ್ಯಕ್ಷ ಹುಯಿಲಾಳು ರಾಮಸ್ವಾಮಿ, ಗ್ರಾಪಂ ಸದಸ್ಯರಾದ ಬಿ.ಕೆ.ಈಶ್ವರ್, ಬಂಡಿಪಾಳ್ಯ ವಿಜಯಕುಮಾರ್, ಹುಯಿಲಾಳು ಮಂಜುನಾಥ್, ಪ್ರಸಾದ್, ತೋಷಿತ್ ರಾಮಸ್ವಾಮಿ, ವೈದೀಕ್ ಎಸ್.ಕುಮಾರ್ ಉಪಸ್ಥಿತರಿದ್ದರು.

# ಕಾವೇರಿ ಸಮೂಹ ವಿದ್ಯಾಸಂಸ್ಥೆಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ




ಗಳಿಗರಹುಂಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶನಿವಾರ ಆರೋಗ್ಯ ಉಚಿತ ತಪಾಸಣಾ ಶಿಬಿರ ನಡೆಯಿತು.

**ಮೈಸೂರು:** ನಗರದ ಪ್ರತಿಷ್ಠಿತ ವಿದ್ಯಾಸಂಸ್ಥೆಯಾದ ಡಾ.ಚಂದ್ರಶೇಖರ್ ಫೌಂಡೇಷನ್‌ನ ಕಾವೇರಿ ಗ್ರೂಪ್ ಇನ್‌ಸ್ಟಿಟ್ಯೂಷನ್ ಕಾವೇರಿ ಇನ್ಸಿಟ್ಯೂಟ್ ಅಫ್ ಹೆಲ್ತ್ ಸೈನ್ಸಸ್ ಕಾಲೇಜ್‌ನ ಬ್ಯಾಚುಲರ್ ಆಫ್ ಮೆಡಿಕಲ್ ಲ್ಯಾಬೋರೇಟರಿ ಟೆಕ್ನಾಲಜಿ ಹಾಗೂ ಬ್ಯಾಚುಲರ್ ಆಫ್ ಆಪ್ಟೋಮೆಟ್ರಿ ಕೋರ್ಸ್ ವಿದ್ಯಾರ್ಥಿಗಳು ಮೈಸೂರು ತಾಲೂಕು ಗಳಿಗರಹುಂಡಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಶನಿವಾರ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ಗ್ರಾಮದ ಸುಮಾರು 150ಕ್ಕೂ ಹೆಚ್ಚು ಮಂದಿ ಈ ಶಿಬಿರದ ಉಪಯೋಗ ಪಡೆದರು. ಶಿಬಿರದಲ್ಲಿ ಕಾವೇರಿ ಶಿಕ್ಷಣ ಸಂಸ್ಥೆಗಳ ಡೀನ್‌ರಾದ ಡಾ.ಎಸ್.ಶ್ರೀಕಂಠಸ್ವಾಮಿ, ಕಾವೇರಿ ಇನ್ಸಿಟ್ಯೂಟ್ ಅಫ್ ಹೆಲ್ತ್ ಸೈನ್ಸಸ್‌ನ ಪ್ರಾಂಶುಪಾಲರಾದ ಡಾ.ಅರವಿಂದ್ ಆರ್.ಎಂ, ಪ್ರಾಧ್ಯಾಪಕರು, ಗಳಿಗರಹುಂಡಿ ಗ್ರಾಮದ ಮುಖ್ಯಸ್ಥರು ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು.

# ಬೆಂಗಳೂರಿನ ಪೌರಕಾರ್ಮಿಕರ ಸಮಾವೇಶಕ್ಕೆ ಬೆಂಬಲವಿಲ್ಲ

**ಮೈಸೂರು ನಗರಪಾಲಿಕೆ, ಕಾಯಂ ಪೌರಕಾರ್ಮಿಕರ ಹಾಗೂ ಗುತ್ತಿಗೆ ಪೌರಕಾರ್ಮಿಕರ ಮಹಾ ಸಂಘದಿಂದ ಸ್ಪಷ್ಟನೆ**

ಮೈಸೂರು, ಏ.5(ಜಿಎ)–ಕರ್ನಾಟಕ ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕರ ಮಹಾ ಸಂಘದಿಂದ ಬೆಂಗಳೂರಿನಲ್ಲಿ ಏ.7ರಂದು ಏರ್ಪಡಿಸಿರುವ ಪೌರಕಾರ್ಮಿಕರ ಸಮಾವೇಶಕ್ಕೆ ಮೈಸೂರು ನಗರ ಪಾಲಿಕೆ, ಕಾಯಂ ಪೌರ ಕಾರ್ಮಿಕರ ಹಾಗೂ ಗುತ್ತಿಗೆ ಪೌರ ಕಾರ್ಮಿಕರ ಮಹಾ ಸಂಘ ಬೆಂಬಲವಿಲ್ಲ ಎಂದು ಸಂಘದ ಉನ್ನತ ಸಮಿತಿ ಅಧ್ಯಕ್ಷ ಎನ್.ಮಾರ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರಿನಲ್ಲಿ ನಡೆಯುತ್ತಿರುವ ಸಮಾವೇಶವು ರಾಜಕೀಯ ಸ್ವಾರ್ಥ ಸಾಧನೆಗಾಗಿ ಆಯೋಜಿಸಿರುವ ಸಮ್ಮೇಳನವಾಗಿದ್ದು, ಪೌರ ಕಾರ್ಮಿಕರ ಹೆಸರು ಬಳಸಿಕೊಂಡು ಸರ್ಕಾರದಿಂದ ನಿಗಮ ಮಂಡಳಿಯ ಅಧಿಕಾರ ಪಡೆದುಕೊಳ್ಳಲು ಈ ಸಮಾವೇಶ ನಡೆಯುತ್ತಿದೆ. ಇದರಿಂದ ಪೌರಕಾರ್ಮಿಕರಿಗೆ ಯಾವುದೇ ಪ್ರಯೋಜನವಾಗುವುದಿಲ್ಲ. ಆಯೋಜಕರು ಲಾಭ ಪಡೆದುಕೊಳ್ಳುತ್ತಾರೆ ಎಂದರು.

ಈ ಹಿಂದೆಯೂ ಇದೇ ರೀತಿ ಪೌರ ಕಾರ್ಮಿಕರನ್ನು ಖಾಯಂಗೊಳಿಸುತ್ತೇವೆ ಎಂದು ಹೇಳಿಕೊಂಡು ಪೌರಕಾರ್ಮಿಕರನ್ನು ನಂಬಿಸಿ ಬೇರೆಯವರು ಅಧಿಕಾರ ಪಡೆದುಕೊಂಡಿದ್ದಾರೆ. ಆದ್ದರಿಂದ ಪೌರ ಕಾರ್ಮಿಕರು ಈ ಸಮಾವೇಶಕ್ಕೆ ಹೋಗಬೇಡಿ. ಅವರು ನೀಡುವ ಸುಳ್ಳು ಭರವಸೆಯನ್ನು ನಂಬಬೇಡಿ. ಮೈಸೂರಿನಿಂದ ಯಾವುದೇ ಪೌರಕಾರ್ಮಿಕರು ಭಾಗವಹಿಸುವುದಿಲ್ಲ ಎಂದು ತಿಳಿಸಿದರು.

ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮೊದಲಾದವರನ್ನು ಸಂಘದ ವತಿಯಿಂದ ಆಹ್ವಾನಿಸಿ, ಮೈಸೂರಿಲ್ಲಿಯೇ ಪ್ರತ್ಯೇಕ ಸಮಾವೇಶ ನಡೆಸಲು ನಿರ್ಧರಿಸಲಾಗಿದೆ. ಹೀಗಾಗಿ ಬೆಂಗಳೂರಿನ ಸಮಾವೇಶಕ್ಕೆ ತಮ್ಮ ಸಂಘ ಯಾವುದೇ ಬಾಹ್ಯ ಅಥವಾ ಇನ್ನಿತರ ಬೆಂಬಲ ನೀಡುತ್ತಿಲ್ಲ ಎಂದು ಸ್ಪಷ್ಟಪಡಿಸಿದರು. ಗೋಷ್ಠಿಯಲಿ ಶ್ರೀನಿವಾಸ, ಆರ್.ನರಸಿಂಹ, ಜಿ.ಮಂಜುನಾಥ್, ಎಸ್.ದಿನೇಶ್, ಬನ್ನಾರಿ ಮತ್ತಿತರರು ಉಪಸ್ಥಿತರಿದ್ದರು.

# ದೇಶ - ವಿದೇಶ


## ಪ್ರಧಾನಿ ನರೇಂದ್ರ ಮೋದಿಗೆ 'ಮಿತ್ರ ವಿಭೂಷಣ' ಪ್ರಶಸ್ತಿ ಪ್ರದಾನ



**ಕೊಲಂಬೊ:** ದ್ವಿಪಕ್ಷೀಯ ಸಂಬಂಧಗಳನ್ನು ಹೆಚ್ಚಿಸುವಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮುಖ್ಯ ಪಾತ್ರ ವಹಿಸಿದ್ದಾರೆ ಎಂದು ಗುರುತಿಸಿ ಶ್ರೀಲಂಕಾ ಅಧ್ಯಕ್ಷ ಅನುರ ಕುಮಾರ ದಿಸಾನಾಯಕ ಅವರು 'ಮಿತ್ರ ವಿಭೂಷಣ' ಪ್ರಶಸ್ತಿಯನ್ನು ಪ್ರದಾನ ಮಾಡಿ, ಗೌರವಿಸಿದ್ದಾರೆ.

ದ್ವೀಪ ರಾಷ್ಟ್ರದ ಅತ್ಯುನ್ನತ ನಾಗರಿಕ ಗೌರವವಾದ ಈ ಪ್ರಶಸ್ತಿಯನ್ನು ಫೆಬ್ರವರಿ 2008ರಲ್ಲಿ ಅಂದಿನ ಅಧ್ಯಕ್ಷ ಮಹಿಂದ ರಾಜಪಕ್ಸೆ ಆರಂಭಿಸಿದ್ದರು. ಈ ಹಿಂದೆ ಮಾಲ್ಡೀವ್ಸ್ ಮಾಜಿ ಅಧ್ಯಕ್ಷ ಮೌಮೂನ್ ಅಬ್ದುಲ್ ಗಯೂಮ್ ಮತ್ತು ಪ್ಯಾಲೆಸ್ತೀನ್ ಮಾಜಿ ನಾಯಕ ಯಾಸರ್ ಅರಾಫತ್ ಅವರಿಗೆ ನೀಡಿ ಗೌರವಿಸಲಾಗಿತ್ತು. ಅಧ್ಯಕ್ಷ ದಿಸಾನಾಯಕ ಅವರಿಂದ ಶ್ರೀಲಂಕಾ ಮಿತ್ರ ವಿಭೂಷಣ ಪ್ರಶಸ್ತಿ ಪಡೆದಿರುವುದು ಸಂತೋಷವಾಗಿದೆ. ಇದು 1.4 ಬಿಲಿಯನ್ ಭಾರತೀಯರಿಗೆ ಗೌರವದ ವಿಷಯವಾಗಿದೆ ಎಂದು ಮೋದಿ ಹೇಳಿದ್ದಾರೆ. ಈ ಗೌರವವನ್ನು ಪಡೆದವರಿಗೆ ಶ್ರೀಲಂಕಾದ 9 ಬಗೆಯ ರತ್ನಗಳು ಮತ್ತು ಕಮಲ, ಗೋಳ, ಸೂರ್ಯ, ಚಂದ್ರ ಮತ್ತು ಅಕ್ಕಿಯ ಕಟ್ಟುಗಳ ಚಿಹ್ನೆಗಳಿಂದ ಅಲಂಕರಿಸಲ್ಪಟ್ಟ ಕುತ್ತಿಗೆಗೆ ಧರಿಸಲು ಬೆಳ್ಳಿ ಪದಕ, ಒಂದು ಪ್ರಶಂಸಾಪತ್ರ ನೀಡಲಾಗುತ್ತದೆ.

## ಪಾಕಿಸ್ತಾನದ ವೈದ್ಯಕೀಯ ಪದವಿ; ಭಾರತದಲ್ಲಿ ಉದ್ಯೋಗಕ್ಕೆ ಅರ್ಹನಲ್ಲ



**ನವದೆಹಲಿ:** ಪಾಕಿಸ್ತಾನದ ವೈದ್ಯಕೀಯ ಕಾಲೇಜಿನಲ್ಲಿ ವೈದ್ಯಕೀಯ ಕೋರ್ಸ್‌ಗೆ ಪ್ರವೇಶ ಪಡೆಯುವ ಯಾವುದೇ ಭಾರತೀಯ ಅಥವಾ ವಿದೇಶಗಳಲ್ಲಿರುವ ಭಾರತೀಯ ನಾಗರಿಕರು ವಿದೇಶಿ ವೈದ್ಯಕೀಯ ಪದವಿ ಪರೀಕ್ಷೆ (FMGE) ಬರೆಯಲು ಅಥವಾ ಭಾರತದಲ್ಲಿ ಉದ್ಯೋಗ ಪಡೆಯಲು ಅರ್ಹರಲ್ಲ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಆರೋಗ್ಯ ಮತ್ತು ಕುಟುಂಬ ವ್ಯವಹಾರಗಳ ರಾಜ್ಯ ಸಚಿವೆ ಅನುಪ್ರಿಯಾ ಪಟೇಲ್ ಲೋಕಸಭೆಯಲ್ಲಿ ನೀಡಿದ ಲಿಖಿತ ಉತ್ತರದಲ್ಲಿ, ಡಿಸೆಂಬರ್ 2018ರ ಮೊದಲು ಅಥವಾ ನಂತರ ಗೃಹ ಸಚಿವಾಲಯದಿಂದ ಭದ್ರತಾ ಅನುಮತಿ ಪಡೆದ ನಂತರ ಪಾಕಿಸ್ತಾನದ ಪದವಿ ಕಾಲೇಜುಗಳು, ಸಂಸ್ಥೆಗಳಿಗೆ ಸೇರಿದವರಿಗೆ ಈ ನಿಯಮ ಅನ್ವಯವಾಗುವುದಿಲ್ಲ ಎಂದರು. ಪಾಕಿಸ್ತಾನದಲ್ಲಿ ವೈದ್ಯಕೀಯ ಪದವಿ ಅಥವಾ ಉನ್ನತ ಶಿಕ್ಷಣವನ್ನು ಪಡೆದ ಭಾರತದ ಪೌರತ್ವ ಹೊಂದಿರುವ ವಲಸಿಗರು ಮತ್ತು ಅವರ ಮಕ್ಕಳು ಗೃಹ ಇಲಾಖೆಯಿಂದ ಭದ್ರತಾ ಅನುಮತಿ ಪಡೆದ ನಂತರ FMGE/NEXT ಗೆ ಹಾಜರಾಗಲು ಅಥವಾ ಭಾರತದಲ್ಲಿ ಉದ್ಯೋಗ ಪಡೆಯಲು ಅರ್ಹರಾಗಿರುತ್ತಾರೆ.

## ಕೆನಡಾದಲ್ಲಿ ಭಾರತೀಯ ಪ್ರಜೆ ಹತ್ಯೆ




**ಒಟ್ಟಾವಾ:** ಕೆನಡಾದಲ್ಲಿ ಭಾರತೀಯ ಪ್ರಜೆಗಳ ಕೊಲೆ ಪ್ರಕರಣ ಮುಂದುವರೆದಿದೆ. ಒಟ್ಟಾವಾ ನಗರದ ಬಳಿ ಭಾರತೀಯ ಪ್ರಜೆಯನ್ನು ಚಾಕುವಿನಿಂದ ಇರಿದು ಹತ್ಯೆ ಮಾಡಲಾಗಿದೆ. ಈ ಸಂಬಂಧ ಪೊಲೀಸರು ಶಂಕಿತನನ್ನು ಕಸ್ಟಡಿಗೆ ತೆಗೆದುಕೊಂಡಿದ್ದಾರೆ ಎಂದು ಅಲ್ಲಿನ ಭಾರತೀಯ ಹೈಕಮಿಷನ್ ತಿಳಿಸಿದೆ. ಕೆನಡಾದ ರಾಜಧಾನಿ ಒಟ್ಟಾವಾದಲ್ಲಿರುವ ರಾಕ್‌ಲ್ಯಾಂಡ್‌ನಲ್ಲಿ ಈ ಘಟನೆ ನಡೆದಿದ್ದು, ಮೃತನ ಗುರುತು ಪತ್ತೆಯಾಗಿಲ್ಲ ಎಂದು ಭಾರತೀಯ ಹೈಕಮಿಷನ್ ತಿಳಿಸಿದೆ. ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಹೈಕಮಿಷನ್, ಮೃತನ ಕುಟುಂಬಕ್ಕೆ ನೆರವಾಗಲು ಸ್ಥಳೀಯ ಸಮುದಾಯ ಸಂಘದೊಂದಿಗೆ ನಿಕಟ ಸಂಪರ್ಕದಲ್ಲಿದ್ದೇವೆ ಎಂದು ಹೇಳಿದೆ. ಘಟನೆ ನಡೆದ ಸ್ಥಳ ಡೌನ್‌ಟೌನ್ ಒಟ್ಟಾವಾದಿಂದ ಪೂರ್ವಕ್ಕೆ ಸರಿಸುಮಾರು 40 ಕಿಲೋಮೀಟರ್ ದೂರದಲ್ಲಿದೆ. ಕಸ್ಟಡಿಯಲ್ಲಿರುವ ವ್ಯಕ್ತಿಯ ಆರೋಪ ಕುರಿತು ಪೊಲೀಸರು ಇನ್ನೂ ಏನನ್ನೂ ಹೇಳಿಲ್ಲ. ಸಾರ್ವಜನಿಕ ಸುರಕ್ಷತೆಯ ಬಗ್ಗೆ ಯಾವುದೇ ಭಯಪಡಬೇಕಾಗಿಲ್ಲ. ತನಿಖೆಯ ಆರಂಭಿಕ ಹಂತದಲ್ಲಿರುವುದರಿಂದ ಹೆಚ್ಚಿನ ಮಾಹಿತಿಯನ್ನು ಒದಗಿಸಲಾಗುವುದಿಲ್ಲ ಪೊಲೀಸರು ಹೇಳಿದ್ದಾರೆ.


## ಅಕ್ರಮ ಸಂಬಂಧ ಶಂಕೆ; ಪತ್ನಿ ಕೊಂದ ಇಂಜಿನಿಯರ್



**ಲಕ್ನೋ:** ಪತ್ನಿಗೆ ಅಕ್ರಮ ಸಂಬಂಧ ಇದೆ ಎಂದು ಶಂಕಿಸಿ ವ್ಯಕ್ತಿಯೊಬ್ಬ ಪತ್ನಿಯ ತಲೆಗೆ ಸುತ್ತಿಗೆಯಿಂದ ಹೊಡೆದು ಹತ್ಯೆಗೈದ ಘಟನೆ ಉತ್ತರ ಪ್ರದೇಶದ ನೋಯ್ಡಾದಲ್ಲಿ ನಡೆದಿದೆ.

ಹತ್ಯೆಯಾದ ಮಹಿಳೆಯನ್ನು ಆಸ್ಮಾ ಖಾನ್ (42) ಎಂದು ಗುರುತಿಸಲಾಗಿದೆ, ಹತ್ಯೆಗೈದ ಆರೋಪಿಯನ್ನು ನೂರುಲ್ಲಾ ಹೈದರ್ ಎಂದು ಗುರುತಿಸಲಾಗಿದೆ. ಹತ್ಯೆಯಾದ ಮಹಿಳೆ ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದು, ನೋಯ್ಡಾದ ಸೆಕ್ಟರ್ 62ರ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಆರೋಪಿ ಬಿಹಾರ ಮೂಲದವನಾಗಿದ್ದು, ಎಂಜಿನಿಯರಿಂಗ್ ಪದವೀಧರನಾಗಿದ್ದೂ ಸಹ ನಿರುದ್ಯೋಗಿಯಾಗಿದ್ದ ಎಂದು ತಿಳಿದುಬಂದಿದೆ. ಇಬ್ಬರು 2005ರಲ್ಲಿ ಮದುವೆಯಾಗಿದ್ದರು. ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಘಟನೆಯ ಬಳಿಕ ದಂಪತಿಯ ಮಗ ಪೊಲೀಸರಿಗೆ ಮಾಹಿತಿ ನೀಡಿದ್ದಾನೆ. ಸ್ಥಳಕ್ಕೆ ಬಂದ ಪೊಲೀಸರು ಆರೋಪಿಯನ್ನು ವಶಕ್ಕೆ ಪಡೆದು ತನಿಖೆ ನಡೆಸುತ್ತಿದ್ದಾರೆ. ಆರೋಪಿ ಹೈದರ್ ತನ್ನ ಪತ್ನಿಗೆ ವಿವಾಹೇತರ ಸಂಬಂಧವಿದೆ ಎಂದು ಶಂಕಿಸಿ ಪದೇ ಪದೇ ಗಲಾಟೆ ಮಾಡುತ್ತಿದ್ದ ಎಂದು ಪ್ರಾಥಮಿಕ ತನಿಖೆಯಲ್ಲಿ ತಿಳಿದು ಬಂದಿದೆ.

## ಅಮೆರಿಕಾ ಷೇರುಪೇಟೆಯಲ್ಲಿ 328 ಲಕ್ಷ ಕೋಟಿ ನಷ್ಟ



**ವಾಷಿಂಗ್ಟನ್:** ವಿಶ್ವದ ಹಲವು ದೇಶಗಳ ಮೇಲೆ ಭಾರೀ ಸುಂಕ ವಿಧಿಸುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಘೋಷಣೆಯು ಅಮೆರಿಕಕ್ಕೆ ದುಬಾರಿಯಾಗಿ ಪರಿಣಮಿಸುತ್ತಿದೆ.

ಶುಕ್ರವಾರ ಅಮೆರಿಕದ ಎಲ್ಲಾ ಮಾನದಂಡ ಸೂಚ್ಯಂಕಗಳು ಕುಸಿತ ಕಂಡವು. ಏಪ್ರಿಲ್ 3 ರಂದು ಅಮೆರಿಕದ ಷೇರು ಮಾರುಕಟ್ಟೆ 2 ಟ್ರಿಲಿಯನ್ ಡಾಲರ್ (ಸುಮಾರು 168 ಲಕ್ಷ ಕೋಟಿ ರೂ.) ನಷ್ಟ ಅನುಭವಿಸಿತು ಮತ್ತು ಶುಕ್ರವಾರವೂ ಹೂಡಿಕೆದಾರರು 160 ಲಕ್ಷ ಕೋಟಿ ರೂಪಾಯಿ ನಷ್ಟ ಅನುಭವಿಸಿದರು.

ಅಂದರೆ ಕೇವಲ ಎರಡು ದಿನಗಳಲ್ಲಿ ಹೂಡಿಕೆದಾರರು 328 ಲಕ್ಷ ಕೋಟಿ ರೂ. ನಷ್ಟ ಅನುಭವಿಸಿದ್ದಾರೆ. ಡೌ ಜೋನ್ಸ್ ಕೈಗಾರಿಕಾ ಸರಾಸರಿ ಶೇ. 5.50ರಷ್ಟು ಕುಸಿದು 38314ಕ್ಕೆ ತಲುಪಿದೆ. ನಾಸ್ಡಾಕ್ ಕಾಂಪೋಸಿಟ್ ಕೂಡ ಶೇ. 5.82ರಷ್ಟು ಕುಸಿತದೊಂದಿಗೆ 15587ಕ್ಕೆ ವಹಿವಾಟು ನಡೆಸುತ್ತಿದೆ. ಎಸ್ & ಪಿ 500 ಸುಮಾರು 6 ಪ್ರತಿಶತದಷ್ಟು ಕುಸಿದು 5074ಕ್ಕೆ ವಹಿವಾಟು ನಡೆಸುತ್ತಿದೆ.

ಮೈಸೂರು ಮಿತ್ರ ಭಾನುವಾರ 6 ಏಪ್ರಿಲ್ 2025

# ಭೂ ಕಬಳಿಕೆ ಆಗದಂತೆ ಅಧಿಕಾರಿಗಳು ಗಮನಹರಿಸಬೇಕು: ಬಿ.ಎ.ಪಾಟೀಲ್

ಮಡಿಕೇರಿ ಏ.5–ಭೂ ಕಬಳಿಕೆ ನಿಷೇಧ ಅಧಿನಿಯಮ ಮತ್ತು ಸಂಬಂಧಿಸಿದ ಕಾಯ್ದೆಗಳ ಬಗ್ಗೆ ಮಾಹಿತಿ ಪಡೆದು ಸರ್ಕಾರಿ ಭೂಮಿ ಸಂರಕ್ಷಿಸುವತ್ತ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಗಮನಹರಿಸಬೇಕು ಎಂದು ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದ ಅಧ್ಯಕ್ಷರಾದ ನ್ಯಾಯಮೂರ್ತಿ ಬಿ.ಎ.ಪಾಟೀಲ್ ತಿಳಿಸಿದ್ದಾರೆ.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯಗಳು, ಕಂದಾಯ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಕೊಡಗು ಜಿಲ್ಲಾಡಳಿತ ಇವರ ಸಹಯೋಗದೊಂದಿಗೆ ಕರ್ನಾಟಕ ಭೂ ಕಬಳಿಕೆ ನಿಷೇಧ ಅಧಿನಿಯಮ ಮತ್ತು ಸಂಬಂಧಿಸಿದ ಕಾಯ್ದೆಗಳ ಬಗ್ಗೆ ಶನಿವಾರ ನಡೆದ ಕಾರ್ಯಾಗಾರದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಭೂ ಕಬಳಿಕೆ ನಿರಂತರವಾಗಿ ನಡೆದಿದ್ದು, ಇದನ್ನು ತಡೆಯುವುದು ವಿವಿಧ ಇಲಾಖೆಗಳ ಜವಾಬ್ದಾರಿಯಾಗಿದೆ ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಮಾತನಾಡಿ, ಕುರುಕ್ಷೇತ್ರ ನಡೆದಿರುವುದೇ ಭೂಮಿಗಾಗಿ ಎನ್ನುವುದನ್ನು ಯಾರೂ ಮರೆಯುವಂತಿಲ್ಲ. ಅನಾದಿಕಾಲದಿಂದಲೂ ನೀರು, ಭೂಮಿಗಾಗಿ ಯುದ್ಧಗಳೇ ನಡೆದಿವೆ. ಆದ್ದರಿಂದ ಸರ್ಕಾರಿ ಭೂಮಿ ಸಂರಕ್ಷಿಸುವುದು ಅಧಿಕಾರಿಗಳ ಕರ್ತವ್ಯವಾಗಿದೆ ಎಂದರು.



ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದ ಅಧ್ಯಕ್ಷರಾದ ನ್ಯಾಯಮೂರ್ತಿ ಬಿ.ಎ.ಪಾಟೀಲ್ ಮಾತನಾಡುತ್ತಿರುವುದು.

ಸರ್ಕಾರಿ ಭೂಮಿ ಉಳಿಸಬೇಕೆಂಬ ಮನಸ್ಸು ಅಧಿಕಾರಿಗಳಲ್ಲಿ ಇರಬೇಕು ಈ ಕಾಯ್ದೆಯನ್ನು ಸದುಪಯೋಗ ಪಡಿಸಿಕೊಂಡು ಸರ್ಕಾರಿ ಭೂಮಿ ಸಂರಕ್ಷಿಸುವತ್ತ ಗಮನಹರಿಸಬೇಕು ಎಂದು ಕೆ.ಎಚ್.ಅಶ್ವತ್ಥ್ ನಾರಾಯಣಗೌಡ ತಿಳಿಸಿದರೆ, ಪ್ರಧಾನ ಜಿಲ್ಲಾ ಮತ್ತು ಸೆಷನ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರಾದ ಹೊಸಮನಿ ಪುಂಡಲೀಕ ಮಾತನಾಡಿ ಕಾನೂನಿನಲ್ಲಿ ಎರಡು ರೀತಿ ಇದ್ದು, ಒಂದು ಮನುಷ್ಯ ಮಾಡಿದ ಕಾನೂನು, ಇನ್ನೊಂದು ಪ್ರಕೃತಿದತ್ತವಾದ ನಿಯಮಗಳಿದ್ದು, ಸಂವಿಧಾನದ ನಿಯಮಗಳು ಒಂದು ವ್ಯವಸ್ಥೆಯಲ್ಲಿ ಕಾನೂನು ಆಗಿದ್ದು, ಇದನ್ನು ಪ್ರತಿಯೊಬ್ಬರೂ ಪಾಲಿಸುವುದು ಅತ್ಯಗತ್ಯವಾಗಿದೆ ಎಂದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶುಭ ಮಾತನಾಡಿ, ಕೆರೆ ಕಟ್ಟೆಗಳನ್ನು ಒತ್ತುವರಿ ಮಾಡಿ ಮನೆ ನಿರ್ಮಾಣ ಮಾಡುವುದು ಎಷ್ಟೋ ಕಡೆ ಕಂಡುಬರುತ್ತಿದೆ. ಅಂತಹವರು ಮಳೆ ಬಂದಾಗ ಪರಿತಪಿಸುತ್ತಾರೆ. ಆದ್ದರಿಂದ ಕರ್ನಾಟಕ ಕೆರೆ ಸಂರಕ್ಷಣಾ ಕಾಯ್ದೆಯಂತೆ ಕೆರೆ, ಕಟ್ಟೆ, ಕಾಲುವೆಗಳನ್ನು ಉಳಿಸಬೇಕು. ಇದರಿಂದ ಜಲ ಸಂರಕ್ಷಣೆ ಸಾಧ್ಯವಾಗಲಿದೆ ಎಂದರು. ನಗರಸಭೆ ಕಂದಾಯ ಅಧಿಕಾರಿ ಎಂ.ಎ.ತಾಹಿರ್ ಅವರು ಮಾತನಾಡಿದರು. ಉಪ ಅರಣ್ಯ ಸಂರಕ್ಷಣಾಧಿಕಾರಿಗಳಾದ ಬಿ.ಭಾಸ್ಕರ್, ಜಗನ್ನಾಥ್, ತಹಶೀಲ್ದಾರ್ ಪ್ರವೀಣ್ ಕುಮಾರ್ ಉಪಸ್ಥಿತರಿದ್ದರು.

# ಸೋಮಯ್ಯ ಸಾವಿಗೂ ಕಾಂಗ್ರೆಸ್ ಪಕ್ಷಕ್ಕೂ ಸಂಬಂಧ ಇಲ್ಲ

## ವಕೀಲರ ಸಂಘದ ಅಧ್ಯಕ್ಷ ಕೊಕ್ಕಂಡ ಅಪ್ಪಣ್ಣ



ವಿರಾಜಪೇಟೆಏ.5–ಬಿಜೆಪಿ ಮುಖಂಡ ವಿನಯ್ ಸೋಮಯ್ಯ ಸಾವಿಗೂ ಕಾಂಗ್ರೆಸ್ ಪಕ್ಷಕ್ಕೂ ಯಾವುದೇ ಸಂಬಂಧ ಇಲ್ಲ ಎಂದು ವಿರಾಜಪೇಟೆ ವಕೀಲರ ಸಂಘದ ಅಧ್ಯಕ್ಷ ಕೊಕ್ಕಂಡ ಅಪ್ಪಣ್ಣ ತಿಳಿಸಿದ್ದಾರೆ.

ಸೋಮವಾರ ಪೇಟೆ ತಾಲೂಕಿನ ಯಡುಂಡೆ ಗ್ರಾಮದ ವಿನಯ್ ಸೋಮಯ್ಯ ಫೆಬ್ರವರಿ ತಿಂಗಳಲ್ಲಿ ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಟ್ಟ ಒಂದು ಅವಹೇಳ ನಾಕಾರಿ ಸಂದೇಶದ ವಿರುದ್ದ ಕಾಂಗ್ರೆಸ್ ವಕ್ತಾರ ತೆನ್ನಿರ ಮೈನಾ ಮಡಿಕೇರಿ ನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಲು ತೆರಳಿದಾಗ ಪೋಲಿಸರು ಪ್ರಕರಣ ದಾಖಲಿಸಲು ನಿರಾಕರಿಸಿದ್ದರಿಂದ ಮಡಿ ಕೇರಿ ನ್ಯಾಯಾಲಯದಲ್ಲಿ ಖಾಸಗಿ ಪ್ರಕರಣ ದಾಖಲಿಸಿದರೆಂದು ಅವರು ಸುದ್ಧಿಗೋಷ್ಠಿಯಲ್ಲಿ ತಿಳಿಸಿದರು.

ನ್ಯಾಂಯಾಲಂಯದ ಆದೇಶದ ಮೇರೆಗೆ ಪೋಲಿಸರು ಪ್ರಕರಣ ದಾಖಲಿಸಿದಾಗ ವಿನಯ್ ಸೋಮಯ್ಯ ರಾಜ್ಯ ಉಚ್ಚ ನ್ಯಾಯಾಲಯದಿಂದ ಇದಕ್ಕೆ ತಡೆಯಾಜ್ಞೆ ತಂದರು. ಉಚ್ಚನ್ಯಾಯಾಲಯ ನೀಡಿದ ಕೆಲವು ಷರತ್ತುಗಳನ್ನು ಸೋಮಯ್ಯ ಅವರು ಪಾಲಿಸದ ಕಾರಣ ಪೋಲಿಸರು ವಿಚಾರಣೆಗಾಗಿ ಕರೆದರೂ ಕೂಡ ಇವರು ವಿಚಾರಣೆ ಹಾಜರಾಗಲಿಲ್ಲ. ಅದರಿಂದ ಪೋಲಿಸರು ಕ್ರಮ ಕೈಗೊಳ್ಳಲು ಮುಂದಾಗಿದ್ದರೆಂದರು.

ಶಾಸಕರಿಬ್ಬರಿಗೂ ವಿನಯ್ ಸೋಮಯ್ಯ ಪರಿಚಯವಿಲ್ಲ ಇದರಲ್ಲಿ ಅವರಿಬ್ಬರ ಯಾವುದೇ ಪಾತ್ರ ವಿಲ್ಲ. ವಿನಾಕಾರಣ ಬಿಜೆಪಿ ಕೆಟ್ಟ ಸಂಪ್ರದಾಯಗಳನ್ನು ಹುಟ್ಟು ಹಾಕಿ ವಿವಾದ ಸೃಷ್ಠಿ ಮಾಡುವುದುನ್ನು ತೀವ್ರವಾಗಿ ಖಂಡಿಸುತ್ತೇವೆ. ಜಿಲ್ಲೆಯಲ್ಲಿ ಉತ್ತಮವಾಗಿ ಜನಪರ ಕೆಲಸ ಮಾಡುತ್ತಿರುವ ಶಾಸಕರ ತೇಜೋವಧೆ ಮಾಡಬೇಕೆಂಬ ಏಕೈಕ ಉದ್ದೇಶದಿಂದ ಈ ವಿಚಾರವನ್ನು ಬಳಸಿಕೊಂಡು ಸಾವಿನಲ್ಲೂ ರಾಜಕೀಯ ಮಾಡುತ್ತಿದ್ದಾರೆ. ಈ ಕೆಟ್ಟ ಪ್ರವೃತ್ತಿ ಸಮಾಜಕ್ಕೆ ಒಳ್ಳೆಯದಲ್ಲ. ಕಾನೂನು ಕಾನೂನಿನ ರೀತಿಯಲ್ಲಿ ಕ್ರಮ ಕೈಗೊಳ್ಳುತ್ತದೆ ಎಂದರು.

ಗೋಷ್ಠಿಯಲ್ಲಿ ಸರ್ಕಾರಿ ವಕೀಲ ನರೇಂದ್ರನಾಥ್ ಕಾಮತ್, ವಕೀಲೆ ಶೃಂಗಾ ಸೋಮಣ್ಣ ಉಪಸ್ಥಿತರಿದ್ದರು.

# ಅಗತ್ಯ ವಸ್ತುಗಳ ಬೆಲೆ ಏರಿಕೆ ವಿರೋಧಿಸಿ ಆಮ್ ಆದ್ಮಿ ಪಾರ್ಟಿ ಪ್ರತಿಭಟನೆ


ಅಗತ್ಯ ವಸ್ತುಗಳ ಬೆಲೆ ಏರಿಕೆ ಮತ್ತು ತೆರಿಗೆ ಹೊರೆಯನ್ನು ವಿರೋಧಿಸಿ ಆಮ್ ಆದ್ಮಿ ಪಾರ್ಟಿ ರಾಜ್ಯ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿತು.

ಮಡಿಕೇರಿ,ಏ.5–ಅಗತ್ಯ ವಸ್ತುಗಳ ಬೆಲೆ ಏರಿಕೆ ಮತ್ತು ತೆರಿಗೆ ಹೊರೆಯನ್ನು ವಿರೋಧಿಸಿ ರಾಜ್ಯ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ಆಮ್ ಆದ್ಮಿ ಪಾರ್ಟಿ ಮಡಿಕೇರಿಯ ಜನರಲ್ ತಿಮ್ಮಯ್ಯ ವೃತ್ತದಲ್ಲಿ ಪ್ರತಿಭಟನೆ ನಡೆಸಿತು.

ಆಮ್ ಆದ್ಮಿ ಪಾರ್ಟಿಯ ಜಿಲ್ಲಾಧ್ಯಕ್ಷ ಮುಕ್ಕಾಟಿರ ಅಪ್ಪಯ್ಯ, ಮಾತನಾಡಿ, ರಾಜ್ಯ ಸರ್ಕಾರ ಮುದ್ರಾಂಕ ಶುಲ್ಕ, ವಾಹನ ನೋಂದಣಿ ಶುಲ್ಕ, ನಂದಿನಿ ಹಾಲಿನ ಬೆಲೆ, ಬಸ್ ಪ್ರಯಾಣ ದರ, ಮದ್ಯದ ಬೆಲೆ, ವಿದ್ಯುತ್ ಶುಲ್ಕ, ವ್ಯಾಸಂಗ ಶುಲ್ಕ ಸೇರಿದಂತೆ ಅಗತ್ಯ ವಸ್ತುಗಳ ಬೆಲೆಯನ್ನು ಏರಿಕೆ ಮಾಡಿದೆ ಇದೇ ರೀತಿ ಕೇಂದ್ರ ಸರ್ಕಾರ ಟೋಲ್, ಔಷಧ, ವಿದೇಶಿ ಶಿಕ್ಷಣ, ಕೃಷಿ ಪರಿಕರಗಳ ದರ, ವೀಸಾ ಶುಲ್ಕ ಮತ್ತಿತರ ಶುಲ್ಕ ಹಾಗೂ ತೆರಿಗೆಯನ್ನು ದುಬಾರಿಗೊಳಿಸಿದೆ. ಇದರಿಂದ ಬಡವರು, ಕೂಲಿ ಕಾರ್ಮಿಕರು ಜನಸಾಮಾನ್ಯರು ಸಂಕಷ್ಟ ಎದುರಿಸುತ್ತಿದ್ದಾರೆ. ದುಬಾರಿ ಶುಲ್ಕದಿಂದ ಬಡ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯುವುದೇ ಕಷ್ಟವಾಗಿದೆ ಎಂದು ಆರೋಪಿಸಿದರು.

ಪಕ್ಷದ ರಾಜ್ಯ ಕಾರ್ಯದರ್ಶಿ ಭೋಜಣ್ಣ ಸೋಮಯ್ಯ ಮಾತನಾಡಿ, ತೆರಿಗೆ ಹೊರೆ ಮತ್ತು ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ನಿಯಂತ್ರಿಸದಿದ್ದಲ್ಲಿ ರಾಜ್ಯ ವ್ಯಾಪಿ ಹೋರಾಟವನ್ನು ತೀವ್ರಗೊಳಿಸುವುದಾಗಿ ಎಚ್ಚರಿಕೆ ನೀಡಿದರು.

ಜನರಲ್ ತಿಮ್ಮಯ್ಯ ವೃತ್ತದಿಂದ ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿದ ಪ್ರತಿಭಟನಾಕಾರರು ಜಿಲ್ಲಾಡಳಿತಕ್ಕೆ ಮನವಿ ಪತ್ರ ಸಲ್ಲಿಸಿದರು. ಜಿಲ್ಲಾ ಕಾರ್ಯದರ್ಶಿ ಹೆಚ್.ಬಿ.ಪೃಥ್ವಿ, ಎಸ್‌ಟಿ ಮೋರ್ಚಾದ ಅಧ್ಯಕ್ಷ ಹೆಚ್.ಎಂ.ರಮೇಶ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

# ಜಗಜೀವನ್‌ರಾಂ ಆದರ್ಶ ಮೌಲ್ಯ ಎಲ್ಲರಿಗೂ ಮಾದರಿ

**ಮಡಿಕೇರಿ:** ಶೋಷಿತ ಸಮುದಾಯಗಳ ಧ್ವನಿಯಾಗಿದ್ದ ಡಾ.ಬಾಬು ಜಗಜೀವನ್ ರಾಂ ಅವರ ಜೀವನ ಸಾಧನೆಗಳನ್ನು ಪ್ರತಿಯೊಬ್ಬರೂ ಸ್ಮರಿಸುವಂತಾಗಬೇಕೆಂದು ಶಾಸಕ ಡಾ.ಮಂತರ್‌ಗೌಡ ತಿಳಿಸಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ನಗರದ ಗಾಂಧಿಭವನದಲ್ಲಿ ಶನಿವಾರ ನಡೆದ ಡಾ.ಜಗಜೀವನ್ ರಾಂ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಜಗಜೀವನ್ ರಾಂರ ಬದುಕು ಆದರ್ಶ ಮತ್ತು ಮಾದರಿಯಾಗಿದೆ ಎಂದರು.

ಬಾಬು ಜಗಜೀವನ್ ರಾಂ ದೇಶ ಕಂಡ ಮುತ್ಸದ್ದಿ ನಾಯಕರಾಗಿದ್ದು, ದೇಶಕ್ಕೆ ಮಾದರಿ ಮತ್ತು ಅನುಕರಣೀಯ ರಾಜಕಾರಣಿ ಎಂದು ನುಡಿದರು.

ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನ ಪ್ರಾಧ್ಯಾಪಕ ಪ್ರೊ. ಡಾ.ಶ್ರೀಧರ ಹೆಗಡೆ ಅವರು ಮಾತನಾಡಿ, ಕಾರ್ಮಿಕರ ಶ್ರೇಯೋಭಿವೃದ್ಧಿಗೆ ಹಲವು ಕಾನೂನು ಜಾರಿಗೊಳಿಸುವ ಮೂಲಕ ಅವರ ಕಲ್ಯಾಣಕ್ಕಾಗಿ ಶ್ರಮಿಸಿದ್ದಾರೆ.

ಜೊತೆಗೆ ಕೃಷಿ ಸಚಿವರಾಗಿ ದೇಶದ ಆಹಾರ ಉತ್ಪಾದನೆ ಅಭಿವೃದ್ಧಿಗೊಳಿಸಿ ಹಸಿರು ಕ್ರಾಂತಿಯ ಹರಿಕಾರನೆಂದು ಜನ ಮನ್ನಣೆಗೆ ಪಾತ್ರರಾಗಿದ್ದಾರೆ. ರೈಲ್ವೆ ಹಾಗೂ ಸಂವಹನ ಸಚಿವರಾದಾಗಲು ತಮ್ಮದೇ ಆದ ಛಾಪು ಮೂಡಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದರು.

ಪ್ರಮುಖರಾದ ಎಚ್.ಎಲ್.ದಿವಾಕರ, ಪ್ರೇಮ ಕೃಷ್ಣಪ್ಪ, ಪ್ರೇಮಕುಮಾರ್, ಮೋಹನ್ ಮೌರ್ಯ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಇತರರು ಇದ್ದರು. ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಶೇಖರ್ ಸ್ವಾಗತಿಸಿದರು.


ಶಾಸಕ ಡಾ.ಮಂತರ್‌ಗೌಡ ಮಾತನಾಡುತ್ತಿರುವುದು.


ಸೋಮೆಯಂಡ ತಂಡದ ಆಟಗಾರರಿಂದ ಗೋಲು ಗಳಿಸುವ ಪ್ರಂಯತ್ನ.

# ಇಂದಿನ ಮುದ್ದಂಡ ಹಾಕಿ ಪಂದ್ಯಾವಳಿಯ ವಿವರ

**ಮೈದಾನ–1:** ಬೆಳಿಗ್ಗೆ 9 ಗಂಟೆಗೆ ಮೊಳ್ಳೇರ–ಅಪ್ಪನೆರವಂಡ, 10 ಗಂಟೆಗೆ ಪಾಂಡಂಡ–ಕುಮ್ಮಂಡ, 11 ಗಂಟೆಗೆ ತಂಬುಕುತ್ತೀರ–ಕಳ್ಳಂಗಡ, ಮಧ್ಯಾಹ್ನ 12 ಗಂಟೆಗೆ ಸಿದ್ದಂಡ–ಮಲ್ಲಂಗಡ, 1 ಗಂಟೆಗೆ ಮೊಣ್ಣಂಡ–ಚೀರಂಡ, 2 ಗಂಟೆಗೆ ಕೈಪಟ್ಟಿರ–ಬೈರಾಜಂಡ, 3 ಗಂಟೆಗೆ ಅರಮಣಮಾಡ–ಮೇವಡ

**ಮೈದಾನ–2:** ಬೆಳಿಗ್ಗೆ 9 ಗಂಟೆಗೆ ಕೆಲೇಟಿರ–ಚೆಯ್ಯಂಡ, 10 ಗಂಟೆಗೆ ಆದೇಂಗಡ–ಪುಗ್ಗೇರ, 11 ಗಂಟೆಗೆ ಪುಚ್ಚಿಮಾಡ–ನಾಪಂಡ, ಮಧ್ಯಾಹ್ನ 12 ಕೊಟೇರ–ಕಾಳೆಂಗಡ, 1 ಗಂಟೆಗೆ ಕಂಗಂಡ–ಕುಪ್ಪಂಡ(ನಾಂಗಾಲ), 2 ಗಂಟೆಗೆ ಚೆಟ್ಟಿಯಾರಂಡ–ಶಾಂತೆಯಂಡ, 3 ಗಂಟೆಗೆ ಅಚ್ಚಪಂಡ–ಮರ್ಚಂಡ

**ಮೈದಾನ–3:** ಬೆಳಿಗ್ಗೆ 9 ಗಂಟೆಗೆ ಉದ್ದಿನಾಡಂಡ–ಕಲಿಯಂಡ, 10 ಗಂಟೆಗೆ ಕರಿನೆರವಂಡ–ಕನ್ನಿಕಂಡ, 11 ಗಂಟೆಗೆ ಕಳ್ಳಿರ–ಕರವಂಡ, ಮಧ್ಯಾಹ್ನ 1 ಗಂಟೆಗೆ ಬಯವಂಡ–ಕೋಣಿಯಂಡ, 2 ಗಂಟೆಗೆ ಮುಕ್ಕಾಟಿರ(ಹರಿಹರ) ಮತ್ತು ಮುಕ್ಕಾಟಿರ(ದೊಡ್ಡಪುಲಿಕೋಟು), 3 ಗಂಟೆಗೆ ಮಣವಟ್ಟಿರ–ಕಳ್ಳಿಚಂಡ ತಂಡಗಳ ನಡುವೆ ಪಂದ್ಯಾವಳಿ ನಡೆಯಲಿದೆ.

# ಸರ್ವರೂ ಅಂಬೇಡ್ಕರ್ ಜಯಂತಿಯಲ್ಲಿ ಭಾಗವಹಿಸಿ–ಎಆರ್‌ಕೆ


ಶಾಸಕ ಎ.ಆರ್. ಕೃಷ್ಣಮೂರ್ತಿ ಅಂಬೇಡ್ಕರ್ ಜಯಂತಿ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು.

ಯಳಂದೂರು,ಏ5–ಡಾ.ಬಿ.ಆರ್. ಅಂಬೇಡ್ಕರ್ ಸಂವಿಧಾನ ದೇಶದ ಎಲ್ಲಾ ಜಾತಿ, ಧರ್ಮ, ವರ್ಗದವರಿಗೂ ಸಲ್ಲುತ್ತದೆ ಹಾಗಾಗಿ ಅಂಬೇಡ್ಕರ್ ಜಯಂತಿಯಲ್ಲಿ ಎಲ್ಲಾ ವರ್ಗದವರೂ ಭಾಗವಹಿಸಬೇಕು ಎಂದು ಶಾಸಕ ಎ.ಆರ್. ಕೃಷ್ಣಮೂರ್ತಿ ಮನವಿ ಮಾಡಿದರು.

ಪಟ್ಟಣದ ತಾಲೂಕು ಪಂಚಾಯಿತಿ ಕಚೇರಿ ಸಭಾಂಗಣದಲ್ಲಿ ನಡೆದ ಅಂಬೇಡ್ಕರ್ ಜಯಂತಿ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ತಾಲೂಕು ಆಡಳಿತದ ವತಿಯಿಂದ ಜಯಂತಿ ಆಚರಣೆ ಜೊತೆಗೆ ತಾಲೂಕಿನ ವಿವಿಧ ಸಂಘಸಂಸ್ಥೆಗಳ ಸಹಯೋಗದಲ್ಲಿ ಅದ್ದೂರಿಯಾಗಿ ಜಯಂತಿ ಆಚರಣೆ ಮಾಡುವಂತೆ ಎಲ್ಲಾ ಗ್ರಾಮಗಳಿಂದಲೂ ಹಲವರು ಮನವಿ ಮಾಡಿದ್ದಾರೆ. ಹಾಗಾಗಿ ಏಪ್ರಿಲ್ ತಿಂಗಳೊಳಗೆ ಜಯಂತಿ ಆಚರಣೆಗೆ ದಿನಾಂಕವನ್ನು ನಿಗಧಿ ಮಾಡಲಾಗುವುದು.

ತಾಲೂಕಿನಿಂದ ನ್ಯಾಯಾಧೀಶರಾಗಿ ಆಯ್ಕೆಯಾಗಿರುವ ಇಬ್ಬರು ಹಾಗೂ ಪಿಎಚ್‌ಡಿ ಪದವಿ ಪಡೆದಿರುವ 35ಕ್ಕೂ ಹೆಚ್ಚು ಮಂದಿಯನ್ನು ಸನ್ಮಾನಿಸುವಂತೆ ಕೆಲವರು ಸಲಹೆ ನೀಡಿದ್ದಾರೆ. ಅಂದು ಮದ್ಯ ಮಾರಾಟ ನಿಷೇಧಿಸಬೇಕೆಂದು ಕೆಲವರ ಒತ್ತಾಸೆಯಾಗಿದೆ, ವಾರಗಳ ಕಾಲ ಪುಸ್ತಕ ಮೇಳ ಮಾಡಬೇಕು, ನಾಡಹಬ್ಬ ದಸರಾ ರೀತಿ ಜಯಂತಿ ಆಚರಣೆ ಮಾಡಬೇಕು, ಆನೆ ಮೇಲೆ ಬಾಬಾ ಸಾಹೇಬರ ಭಾವಚಿತ್ರವನ್ನು ಇಟ್ಟು ಮೆರವಣಿಗೆ ಮಾಡಬೇಕು ಎಂದು ಕಂದಹಳ್ಳಿ ಮಹೇಶ್ ಸಲಹೆ ನೀಡಿದ್ದಾರೆ. ಆದರೆ ಸುಪ್ರೀಂಕೋರ್ಟ್ ಆದೇಶದಂತೆ ಇದನ್ನು ಬಳಸಿಕೊಳ್ಳಲು ಅವಕಾಶ ಇರದ ಕಾರಣ ಇದಕ್ಕೆ ಪರ್ಯಾಯವಾಗಿ ಟ್ಯಾಬ್ಲೋ, ವಿವಿಧ ಕಲಾತಂಡಗಳೊಂದಿಗೆ ಮೆರವಣಿಗೆ ಮಾಡಲು ಕ್ರಮ ವಹಿಸಲಾಗುವುದು.

ಜಯಂತಿ ಆಚರಣೆಗೆ ಸರ್ಕಾರದಿಂದ ಬರುವ ಹಣ ಕಡಿಮೆ ಇದೆ. ಹಾಗಾಗಿ ನಾನು ಸೇರಿದಂತೆ ಎಲ್ಲರ ಸಹಯೋಗದೊಂದಿಗೆ ಜಯಂತಿಯನ್ನು ಉತ್ತಮವಾಗಿ ಆಚರಿಸಲು ಎಲ್ಲರೂ ಸಹಕರಿಸಬೇಕು. ಅಲ್ಲದೆ ಏ.14 ರಂದು ನಡೆಯುವ ಜಯಂತಿಗೂ ಎಲ್ಲರೂ ಕಡ್ಡಾಯವಾಗಿ ಭಾಗವಹಿಸಬೇಕು. ಏ. 5 ರಂದು ನಡೆಯುವ ಬಾಬು ಜಗಜೀವನ್‌ರಾಮ್ ಜಯಂತಿಗೂ ಎಲ್ಲರೂ ಭಾಗವಹಿಸುವಂತೆ ಮನವಿ ಮಾಡಿದರು.

ಪಪಂ ಅಧ್ಯಕ್ಷೆ ಲಕ್ಷ್ಮಿಮಲ್ಲು ಉಪಾಧ್ಯಕ್ಷೆ ಶಾಂತಮ್ಮ ನಿಂಗರಾಜು ಸದಸ್ಯರಾದ ಮಹೇಶ್, ವೈ.ಜಿ.ರಂಗನಾಥ, ನಾಮನಿರ್ದೇಶಿತ ಸದಸ್ಯರಾದ ಲಿಂಗರಾಜಮೂರ್ತಿ, ಮುನವ್ವರ್‌ಬೇಗ್, ಶ್ರೀಕಂಠಸ್ವಾಮಿ, ಬಿಳಿಗಿರಿ ರಂಗನಬೆಟ್ಟ ದೇಗುಲದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಜೆ. ಶ್ರೀನಿವಾಸ್, ಗ್ಯಾರಂಟಿ ಯೋಜನೆಯ ತಾಲೂಕು ಅಧ್ಯಕ್ಷ ಕಿನಕಹಳ್ಳಿ ಪ್ರಭುಪ್ರಸಾದ್ ತಹಶೀಲ್ದಾರ್ ಬಸವರಾಜು ತಾಪಂ ಇಒ ಉಮೇಶ್, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಕೇಶವಮೂರ್ತಿ, ಸಿಪಿಐ ಕೆ.ಶ್ರೀಕಾಂತ್, ಪಪಂ ಮುಖ್ಯಾಧಿಕಾರಿ ಎಂ.ಪಿ.ಮಹೇಶ್‌ಕುಮಾರ್ ಸಿ.ರಾಜಣ್ಣ ಮಾಂಬಳ್ಳಿ ನಂಜುಂಡಸ್ವಾಮಿ, ವೆಂಕಟೇಶ್, ಯರಿಯೂರು ನಾಗೇಂದ್ರ, ನಿರಂಜನ್, ಚಂದ್ರು, ವಿವಿಧ ಸಂಘಸಂಸ್ಥೆಗಳ ಪದಾಧಿಕಾರಿಗಳು ಹಾಜರಿದ್ದರು.

ಯಳಂದೂರು ಪಟ್ಟಣದ ತಾಪಂ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಸಂಜೆ ನಡೆದ ಡಾ.ಬಿ. ಆರ್.ಅಂಬೇಡ್ಕರ್ ಜಯಂತಿ ಪೂರ್ವಭಾವಿ ಸಭೆಯಲ್ಲಿ ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿದರು. ಪಪಂ ಅಧ್ಯಕ್ಷೆ ಲಕ್ಷ್ಮಮ್ಮ ಉಪಾಧ್ಯಕ್ಷೆ ಶಾಂತಮ್ಮ ಸೇರಿದಂತೆ ಅನೇಕರು ಇದ್ದರು.

# ದೇಶಕ್ಕೆ ಡಾ.ಜಗಜೀವನ ರಾಮ್ ಕೊಡುಗೆ ಅಪಾರ: ಸುನೀಲ್ ಬೋಸ್

ಚಾಮರಾಜನಗರ, ಏ.5– ಡಾ.ಬಾಬು ಜಗಜೀವನ ರಾಮ್ ಸುದೀರ್ಘ ಕಾಲ ಕೇಂದ್ರ ಸಚಿವರಾಗಿ ದೇಶಕ್ಕೆ ಅಪಾರವಾದ ಕೊಡುಗೆ ನೀಡಿದ್ದಾರೆ ಎಂದು ಸಂಸದ ಸುನೀಲ್ ಬೋಸ್ ತಿಳಿಸಿದರು.

ನಗರದ ಪೇಟೆ ಪ್ರೈಮರಿ ಶಾಲಾ ಆವರಣದಲ್ಲಿ ಏರ್ಪಡಿಸಲಾಗಿದ್ದ ಜಗಜೀವನರಾಮ್‌ರವರ 118ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೇಂದ್ರದಲ್ಲಿ ಕಾರ್ಮಿಕ ಸಚಿವರಾಗಿದ್ದ ಸಂದರ್ಭದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳಿಗೆ ಅಲ್ಲದೆ ಎಲ್ಲ ಕಾರ್ಮಿಕರಿಗೂ ಅನುಕೂಲವಾಗುವ ಸುಧಾರಣೆಗಳನ್ನು ಜಾರಿಗೆ ತಂದು ಕಾರ್ಮಿಕರಿಗೆ ವಿಮಾ ಸೌಲಭ್ಯವನ್ನು ಕಲ್ಪಿಸಿದ ಹೆಗ್ಗಳಿಕೆ ಡಾ. ಬಾಬು ಜಗಜೀವನ್ ರಾಮ್ ಅವರಿಗೆ ಸಲ್ಲುತ್ತದೆ ಎಂದರು.


ಜಗಜೀವನರಾಮ್‌ರವರ 118ನೇ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಸಂಸದ ಸುನೀಲ್ ಬೋಸ್ ಉದ್ಘಾಟಿಸಿದರು.

ಬಾಬು ಜಗಜೀವನರಾಮ್ ಅವರು ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದರು. ಕಾರ್ಮಿಕರ ಹಿತರಕ್ಷಣೆಗಾಗಿ ಉತ್ತಮ ಯೋಜನೆಗಳನ್ನು ಜಾರಿಗೆ ತಂದರು. ಹಲವಾರು ಖಾತೆಗಳನ್ನು ಕೇಂದ್ರದಲ್ಲಿ ನಿರ್ವಹಿಸಿ ತಮ್ಮದೇ ಆದ ಛಾಪು ಮೂಡಿಸಿದ್ದರೆಂದು ಅಧ್ಯಕ್ಷತೆ ವಹಿಸಿದ್ದ ಶಾಸಕ ಸಿ. ಪುಟ್ಟರಂಗಶೆಟ್ಟಿ ಹೇಳಿದರು.

ಸ್ವಾತಂತ್ರ್ಯ ಹೋರಾಟಗಾರರು ಆಗಿದ್ದ ಬಾಬು ಜಗಜೀವನರಾಮ್ ಅವರು ರಕ್ಷಣಾ ಸಚಿವರು ಹಾಗು ಕೃಷಿ ಸಚಿವರಾಗಿದ್ದ ಅವಧಿಯಲ್ಲಿ ಗಮನಾರ್ಹ ಕೊಡುಗೆಗಳನ್ನು ನೀಡಿದ್ದಾರೆ. ಕೃಷಿಯಲ್ಲಿ ಭಾರತವನ್ನು ಸ್ವಾವಲಂಬಿಯನ್ನಾಗಿಸಿದಲ್ಲದೇ ಹಲವು ವಿನೂತನ ಸುಧಾರಣಾ ಕ್ರಮಗಳನ್ನು ಜಾರಿಗೆ ತಂದು ಹಸಿರುಕ್ರಾಂತಿಯ ಹರಿಕಾರರೆಂದೇ ಕರೆಯಲ್ಪಟ್ಟರು ಎಂದು ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಪ್ರಾಸ್ತಾವಿಕ ನುಡಿಗಳನ್ನಾಡಿ, ಜೊತೆಗೆ ಜಿಲ್ಲಾ ಉಸ್ತುವಾರಿ ಸಚಿವಕೆ. ವೆಂಕಟೇಶ್ ಕಳುಹಿಸಿದ್ದ ಸಂದೇಶ ವಾಚಿಸಿದರು.

ಮುಖ್ಯ ಭಾಷಣ ಮಾಡಿದ ಭೋಗಾಪುರ ಸರ್ಕಾರಿ ಪ್ರಥಮ ದರ್ಜೆ ವಸತಿ ಕಾಲೇಜಿನ ಪ್ರಾಂಶುಪಾಲ ಡಾ. ಪಿ.ದೇವರಾಜು ಸಾಮಾಜಿಕ ವ್ಯವಸ್ಥೆಯನ್ನು ಅರ್ಥ ಮಾಡಿಕೊಂಡಿದ್ದ ಬಾಬು ಜಗಜೀವನ್ ರಾಮ್ ಅವರು ಶೋಷಿತ ವರ್ಗಗಳ ಏಳಿಗೆಗಾಗಿ ಅಪಾರವಾಗಿ ಶ್ರಮಿಸಿದ್ದಾರೆ. ಅವರ ಜನ್ಮ ದಿನವನ್ನು ಸಮಾನತೆಯ ದಿನವನ್ನಾಗಿಯೂ ಆಚರಿಸ ಲಾಗುತ್ತಿದೆ ಎಂದರು.

ಕಾವೇರಿ ಜಲಾನಯನ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಿ. ಮರಿಸ್ವಾಮಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹೆಚ್.ವಿ.ಚಂದ್ರು, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಹಮದ್ ಅಸ್ಗರ್, ನಗರಸಭಾ ಸದಸ್ಯ ನಾಗರಾಜು, ಸ್ವಾಮಿ, ಚೂಡಾ ಸದಸ್ಯ ಪುಟ್ಟಸ್ವಾಮಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರಾದ ಎನ್. ಮುನಿರಾಜು, ತಹಶೀಲ್ದಾರ್ ಗಿರಿಜಾ, ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕರಾದ ಕಿರಣ್ ಪಡ್ನೇಕರ್, ನಗರಸಭಾ ಆಯುಕ್ತರಾದ ಎಸ್.ವಿ.ರಾಮದಾಸ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಅದ್ದೂರಿಯಾಗಿ ನಡೆದ ಮೆರವಣಿಗೆಗೆ ಡಾ. ಬಿ.ಆರ್. ಅಂಬೇಡ್ಕರ್ ಭವನದ ಆವರಣದಲ್ಲಿ ಶಾಸಕ ಸಿ. ಪುಟ್ಟರಂಗಶೆಟ್ಟಿ ಚಾಲನೆ ನೀಡಿದರು. ಮೆರವಣಿಗೆಗೂ ಮೊದಲು ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಪುತ್ಥಳಿಗೆ ಶಾಸಕ ಸಿ. ಪುಟ್ಟರಂಗಶೆಟ್ಟಿ, ಕಾಡಾ ಅಧ್ಯಕ್ಷರಾದ ಪಿ. ಮರಿಸ್ವಾಮಿ, ಜಿಲ್ಲಾಧಿಕಾರಿ ಶಿಲ್ಪಾನಾಗ್, ಇತರೆ ಗಣ್ಯರು, ಮುಖಂಡರು ಮಾಲಾರ್ಪಣೆ ಮಾಡಿದರು.

# ಕಾಂಗ್ರೆಸ್ ಕಚೇರಿಯಲ್ಲಿ ಡಾ.ಬಾಬೂಜಿ ಜನ್ಮದಿನಾಚರಣೆ


ಚಾಮರಾಜನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಕಚೇರಿಯಲ್ಲಿ ನಡೆದ ಜಗಜೀವನರಾಮ್ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಬಾಬೂಜಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿದರು.

ಚಾಮರಾಜನಗರ, ಏ.5–ನಗರದ ಜಿಲ್ಲಾ ಕಾಂಗ್ರೆಸ್ ಸಮಿತಿ ಕಚೇರಿಯಲ್ಲಿ ಜಗಜೀವನ ರಾಮ್ ಜನ್ಮದಿನಾಚರಣೆ ಆಚರಿಸಲಾಯಿತು.

ಡಾ.ಬಾಬು ಜಗಜೀವನರಾಮ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿದ ಶಾಸಕ ಸಿ.ಪುಟ್ಟ ರಂಗಶೆಟ್ಟಿ ಮಾತನಾಡಿ, 50 ವರ್ಷಗಳ ಕಾಲ ಸುಧೀರ್ಘ ಆಡಳಿತ ನಡೆಸಿದ ರಾಜಕಾರಣಿ ಇದ್ದರೆಂದರೆ ಬಾಬುಜಗಜೀವನ್ ರಾಂ ಎಂದು ಬಣ್ಣಿಸಿದರು.

ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಪಿ.ಮರಿಸ್ವಾಮಿ ಮಾತನಾಡಿ, ಬಾಬುಜಗಜೀವನ್ ರಾಂ ಆದರ್ಶಗಳನ್ನು ಪ್ರತಿಯೊಬ್ಬರು ಪಾಲಿಸಬೇಕು ಎಂದು ಸಲಹೆ ನೀಡಿದರು.

ಜಿಲ್ಲಾ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಚುಡಾಅಧ್ಯಕ್ಷ ಮಹಮದ್ ಅಸ್ಗರ್, ಗ್ರಾಮಾಂತರ ಬ್ಲಾಕ್‌ಕಾಂಗ್ರೆಸ್ ಅಧ್ಯಕ್ಷ ಎ.ಎಸ್. ಗುರುಸ್ವಾಮಿ, ಪಂಚಗ್ಯಾರಂಟಿ ಯೋಜನೆ ಅನುಷ್ಠಾನಸಮಿತಿ ತಾಲ್ಲೂಕು ಅಧ್ಯಕ್ಷ ನಲ್ಲೂರು ಸೋಮೇಶ್ವರ್, ಗಾಪಂ ಅಧ್ಯಕ್ಷ ರೂಪೇಶ್, ಎಪಿಎಂಸಿ ಅಧ್ಯಕ್ಷ ಮಹದೇವಸ್ವಾಮಿ, ಸದಸ್ಯ ಎ.ಎಸ್.ಪ್ರದೀಪ್, ನಗರಸಭೆ ನಾಮನಿರ್ದೇಶಿತ ಸದಸ್ಯ ಸ್ವಾಮಿ, ಚುಡಾ ಸದಸ್ಯ ಪುಟ್ಟಸ್ವಾಮಿ, ಎಸ್ಸಿಮೋರ್ಚಾ ಗ್ರಾಮಾಂತರ ಅಧ್ಯಕ್ಷ ಸೋಮಣ್ಣ, ಅರಕಲವಾಡಿ ಗ್ರಾಪಂ ಮಾಜಿಅಧ್ಯಕ್ಷ ಮಹದೇವಯ್ಯ, ರಾಮಸಮುದ್ರ ಶಿವಮೂರ್ತಿ, ಶಿವಕುಮಾರ್, ಆರ್.ಕೆ.ಶಿವ ಕುಮಾರ್, ಜವರಯ್ಯ, ರಮೇಶ್, ಕುಮಾರ್, ಸುಬ್ಬಣ್ಣ, ನವೀನ್, ಜಿ.ಡಿ. ಪ್ರಕಾಶ್, ಯುವ ಕಾಂಗ್ರೆಸ್ ಅಧ್ಯಕ್ಷ ಅಕ್ಷಯ್, ಶ್ರೀನಿವಾಸ್, ಮರಿಯಾಲಹುಂಡಿ ಕುಮಾರ್, ಪಕ್ಷದ ಕಾರ್ಯಕರ್ತರು, ಮುಖಂಡರು ಹಾಜರಿದ್ದರು.

# ಬಂಡೀಪುರ ರಾತ್ರಿ ಸಂಚಾರ ತೆರವಿನ ಲಾಬಿ ವಿರೋಧಿಸಿ ಇಂದು ಪಾದಯಾತ್ರೆ

ಗುಂಡ್ಲುಪೇಟೆ, ಏ.5– ರೈತರ ಹಾಗೂ ಅರಣ್ಯ ಸಂರಕ್ಷಣೆಯ ಹಿತಾಸಕ್ತಿಯಿಂದ ಬಂಡೀಪುರದ ರಸ್ತೆಯಲ್ಲಿ ರಾತ್ರಿ ಸಂಚಾರ ತೆರವಿಗೆ ಕೇರಳ ಸರ್ಕಾರ ನಡೆಸುತ್ತಿರುವ ಲಾಬಿಗೆ ರಾಜ್ಯ ಸರ್ಕಾರ ಮಣಿಯಬಾರದು ಎಂದು ಪರಿಸರವಾದಿ ಎಸ್.ಎಂ. ನಾಗಾರ್ಜುನಕುಮಾರ್ ಒತ್ತಾಯಿಸಿದರು.

ರಾತ್ರಿ ಸಂಚರಿಸುವ ವಾಹನಗಳಿಗೆ ಸಿಲುಕಿ ವನ್ಯಜೀವಿಗಳು ಸಾವಿಗೀಡಾಗುತ್ತಿದ್ದ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ರಾತ್ರಿ ವಾಹನ ಸಂಚಾರ ನಿರ್ಬಂಧಿಸಿತ್ತು. ಇದರ ವಿರುದ್ಧ ಕೇರಳ ಸರ್ಕಾರ ನ್ಯಾಯಾಲಯದ ಮೆಟ್ಟಿಲೇರಿದ್ದು ಇನ್ನೂ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದೆ. ಆದರೆ ಕೇರಳ ಸರ್ಕಾರದ ಒತ್ತಾಯಕ್ಕೆ ಮಣಿದು ರಾಜ್ಯ ಸರ್ಕಾರ ಬಂಡೀಪುರ ರಸ್ತೆಯಲ್ಲಿ ರಾತ್ರಿ ಸಂಚಾರಕ್ಕೆ ಇರುವ ನಿರ್ಬಂಧ ಸಡಿಲಿಸಲು ಸಿದ್ಧತೆ ನಡೆಸಲಾಗುತ್ತಿದೆ ಎಂಬ ಆತಂಕಕಾರಿ ಮಾಹಿತಿ ಬರುತ್ತಿದ್ದು, ಇದರ ವಿರುದ್ಧ ಏ–6ರಂದು ಬೆಳಗ್ಗೆ 11ರಿಂದ ಸ್ಥಳೀಯರು, ರೈತ ಮತ್ತು ಕನ್ನಡ ಸಂಘಟನೆಗಳವರ ಸಹಕಾರದಿಂದ ಸುಲ್ತಾನ್ ಭತ್ತೇರಿ ರಸ್ತೆಯ ಕಗ್ಗಳದಹುಂಡಿ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಮದ್ದೂರು ಚೆಕ್ ಪೋಸ್ಟ್‌ವರೆಗೆ ಪಾದಯಾತ್ರೆ ಆಯೋಜಿಸಲಾಗಿದೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸೇವ್ ಬಂಡೀಪುರ ಹೋರಾಟ ಸಮಿತಿಯ ಸದಸ್ಯ ಮಡಹಳ್ಳಿ ಮಣಿ, ನಮ್ಮ ಬಂಡೀಪುರ ಸಂಘಟನೆಯ ತಾರಾ ಇದ್ದರು.


ಗುಂಡ್ಲುಪೇಟೆ ಪಟ್ಟಣದ ಪ್ರವಾಸಿಮಂದಿರದಲ್ಲಿ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ನಾಗಾರ್ಜುನ ಕುಮಾರ್ ಮಾತನಾಡಿದರು. ಮಡಹಳ್ಳಿ ಮಣಿ, ತಾರಾ ಇದ್ದರು

# ಬಿಜೆಪಿ ಕಚೇರಿಯಲ್ಲಿ ಜಗಜೀವನರಾಂ ಜಯಂತಿ ಆಚರಣೆ

ಚಾಮರಾಜನಗರ, ಏ. 5–ಮಾಜಿ ಉಪಪ್ರಧಾನಿ ಡಾ.ಬಾಬುಜಗಜೀವನರಾಂರ ದೂರದೃಷ್ಠಿಯಿಂದ ಭಾರತ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿತು ಎಂದು ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ಹೇಳಿದರು.

ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ನಡೆದ ಜಗಜೀವನರಾಂ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಶೋಷಿತ ಸಮುದಾಯದ ಮತದಾನದ ಹಕ್ಕುಗಳು, ಸಮಾನ ಅವಕಾಶಗಳಿಗಾಗಿ ಹಲವಾರು ಕಾಯ್ದೆಗಳನ್ನು ರೂಪಿಸಿ ಜಾರಿಗೊಳಿಸುವ ಮೂಲಕ ದೇಶದ ಕಾರ್ಮಿಕರ ಕಾಯ್ದೆಗಳ ಶಿಲ್ಪಿ ಎಂಬ ಗೌರವಕ್ಕೆ ಪಾತ್ರರಾದರು ಎಂದರು.

ನಗರಸಭಾ ಅಧ್ಯಕ್ಷ ಸುರೇಶ್, ಎಸ್‌ಸಿ ಮೋರ್ಚಾದ ಜಿಲ್ಲಾಧ್ಯಕ್ಷ ಮೂಡಹಳ್ಳಿ ಮೂರ್ತಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಪಿ.ವೃಷಭೇಂದ್ರಪ್ಪ ಮೂಡ್ನಾಕೂಡು ಪ್ರಕಾಶ್, ಮಾಜಿ ಅಧ್ಯಕ್ಷ ಆರ್.ಸುಂದರ್, ಜಿಲ್ಲಾ ಮಾಧ್ಯಮ ಪ್ರಮುಖ್ ರಾಮಸಮುದ್ರ ಶಿವಣ್ಣ ಎಸ್‌ಸಿ ಮೋರ್ಚಾದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮುತ್ತಿಗೆ ಮೂರ್ತಿ, ಮಾಂಬಳ್ಳಿ ರಾಮಣ್ಣ, ಕಾರ್ಯಾಲಯ ಕಾರ್ಯದರ್ಶಿ ರಂಗಸ್ವಾಮಿ, ಕಿರಣ್ ಇತರರು ಹಾಜರಿದ್ದರು.

# ನಾಳೆ ಹರದನಹಳ್ಳಿ ಉಪವಿಭಾಗ ವ್ಯಾಪ್ತಿಯ ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಏ.5– ಹರದನಹಳ್ಳಿ ಉಪವಿಭಾಗ ವ್ಯಾಪ್ತಿಯಲ್ಲಿ ನಿರ್ವಹಣೆ ಕಾಮಗಾರಿ ನಿಮಿತ್ತ ಏ.7ರಂದು ಬೆಳಿಗ್ಗೆ 9 ರಿಂದ ಸಂಜೆ 6 ಗಂಟೆಯ ವರೆಗೆ ವಿವಿದೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.


ಸಿದ್ದಯ್ಯನಪುರ, ಹೊಂಗಲವಾಡಿ, ಕೋಳಿಪಾಳ್ಯ, ಬಂಧಿಗೌಡನಹಳ್ಳಿ, ಅಟ್ಟುಗೂಳಿಪುರ, ಕೊತ್ತಲವಾಡಿ, ಅರಕಲವಾಡಿ, ಯರಗನಹಳ್ಳಿ, ಸುವರ್ಣ ನಗರ, ಫ್ಯಾಕ್ಟರಿ, ಬಿಸಿಲವಾಡಿ, ಮಣಜನೂರು, ಡೊಳ್ಳಿಪುರ, ಚನ್ನಪನಪುರ, ಅಮಚವಾಡಿ, ಮಾದಲವಾಡಿ ಕಿಲಗೆರೆ, ಮಾದಲವಾಡಿ, ಯಣಗುಂಬ, ಯರಗನಹಳ್ಳಿ, ಅಚ್ಚಟ್ಟಿಪುರ, ಯಾನಗಳ್ಳಿ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ನಿಗಮದ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಾಗತಿಹಳ್ಳಿ ಸಂಸ್ಕೃತಿ ಹಬ್ಬ

**ಈ ವರ್ಷ ನಾಗತಿಹಳ್ಳಿ ಚಂದ್ರಶೇಖರ್ ಓದಿದ ಸರ್ಕಾರಿ ಪ್ರಾಥಮಿಕ ಶಾಲೆಗೆ ಶತಮಾನೋತ್ಸವ ಸಂಭ್ರಮ. ಇದರ ಅಂಗವಾಗಿ ನಾಗತಿಹಳ್ಳಿ ಸಂಸ್ಕೃತಿ ಹಬ್ಬವನ್ನು ಮಾರ್ಚ್ 26ರಿಂದ 30ರವರೆಗೆ ಆಚರಿಸಲಾಯಿತು. ಸತತ ಐದು ದಿನ ನಡೆದ ಈ ಹಬ್ಬದಲ್ಲಿ ಕೃಷಿ ದಿನ, ವಿಜ್ಞಾನ ದಿನ, ಆರೋಗ್ಯ ದಿನ, ಸಾಹಿತ್ಯ ದಿನ ಹೀಗೆ ವಿಂಗಡಿಸಿಕೊಂಡು ಉಚಿತ ವೈದ್ಯಕೀಯ ಶಿಬಿರಗಳು, ಸಾಹಿತ್ಯ ಸಂವಾದ, ಕೃಷಿ ಚಿಂತನೆ, ನಾಟಕಗಳು, ಕೋಲಾಟ, ನೃತ್ಯ ಸಂಗೀತ ಕಾರ್ಯಕ್ರಮಗಳನ್ನು ಆಯೋಜಿಸಿದಲ್ಲದೆ, ನೆಹರೂ ತಾರಾಲಯ ವೀಕ್ಷಣೆ, ಚಿತ್ರಕಲಾ ಪರಿಷತ್ ವಿದ್ಯಾರ್ಥಿಗಳಿಂದ ಶಾಲಾವರಣದಲ್ಲಿ ಚಿತ್ರರಚನೆಗಳನ್ನೂ ಏರ್ಪಡಿಸಿದ್ದರು. ಸಂಸ್ಕೃತಿ ಹಬ್ಬ ಎಂಬುದು ಗ್ರಾಮೀಣ ಬದುಕಿನ ಸಮಗ್ರ ಹಬ್ಬ. ಸುತ್ತಮುತ್ತಲ ಗ್ರಾಮದವರೂ ಸೇರಿ ಸಂಭ್ರಮಿಸಿದರು.**




ನಾಗತಿಹಳ್ಳಿ ಚಂದ್ರಶೇಖರ್ ಓದಿದ ಈ ಸರ್ಕಾರಿ ಶಾಲೆಗೀಗ ಶತಮಾನೋತ್ಸವ ಸಂಭ್ರಮ



ನಾಗತಿಹಳ್ಳಿ ಚಂದ್ರಶೇಖರ್

ಅದು ಎಂಭತ್ತರ ದಶಕ. ರೈತ ಚಳುವಳಿ, ಪರಿಸರ ಆಂದೋಲನ ಉತ್ತುಂಗದಲ್ಲಿತ್ತು. ಎರಡರಲ್ಲೂ ಸಕ್ರಿಯನಾಗಿದ್ದ ವಿದ್ಯಾರ್ಥಿ ನಾಗತಿಹಳ್ಳಿ ಚಂದ್ರಶೇಖರ್. ಮೊದಲು ಹಳ್ಳಿ ಹಳ್ಳಿಗಳಲ್ಲಿ ಜಾಗೃತಿ ಮೂಡಿಸಬೇಕು ಸಾರ್. ಈ ಆಂದೋಲನ ಹೋರಾಟಗಳಿಂದ ಈಗಿನ ಬೇಡಿಕೆಗಳನ್ನೇನೋ ಈಡೇರಿಸಿಕೊಳ್ಳಬಹುದು. ಆದರೆ ಹಳ್ಳಿಗಳಲ್ಲಿ ನಾವೆಲ್ಲಾ ಒಂದೇ ಎಂಬ ಭಾವಸೆಲೆ ಸದಾ ಹರಿಯುತ್ತಿರಬೇಕು. ಹಾಗಾಗಲು ಸಾಂಸ್ಕೃತಿಕವಾಗಿ ಅವರನ್ನು ಬೆಸೆಯಬೇಕು. ಈ ಬೀದಿ ಹೋರಾಟಗಳು ಆ ಹಾದಿಯದಲ್ಲ. ರಚನಾತ್ಮಕ ಕಾರ್ಯಕ್ರಮಗಳ ಮೂಲಕ ಮಾನಸಿಕ ವಿಕಾಸ ಮೂಡಿಸುವ ಕೆಲಸ ಆಗಬೇಕಿದೆ.

ಚಳವಳಿಯ ಕಾವು ಯುವಕರಲ್ಲಿ ಹುಚ್ಚು ಕಲ್ಪನೆಗಳನ್ನು, ಸಂಕಲ್ಪಗಳನ್ನು ಗರಿಗೆದರಿಸುವುದು ಸಹಜ. ಸುಮ್ಮನೆ ಕೇಳಿಸಿಕೊಳ್ಳುತ್ತಿದ್ದೆ. ಈಗಲೂ ನೆನಪಿದೆ. 1982-83ರಲ್ಲಿ ಹಳ್ಳಿ ಹಳ್ಳಿಗಳಿಂದ ಬೆಂಗಳೂರಿಗೆ ರೈತ ಜಾಥಾ ಕಾಲ್ನಡಿಗೆಯಲ್ಲಿ ಹೊರಟಿದ್ದವು. ಹತ್ತಾರು ಹಳ್ಳಿಗಳ ರೈತ ಗುಂಪು ದಂಡು ಕಟ್ಟಿಕೊಂಡು ನಡೆಯುತ್ತಿದ್ದವು. ದಿನಕ್ಕೆ 18-20 ಕಿಮೀ ಪಾದಯಾತ್ರೆ. ಚಳುವಳಿಗಾರ ಮುಖಂಡರು ರಾತ್ರಿ ಉಳಿಯಬೇಕಾದ ಮುಂದಿನ ಹಳ್ಳಿಗಳನ್ನು ಮೊದಲೇ ಗುರ್ತಿಸಿ, ಅಲ್ಲಿಯ ಸಮುದಾಯ ಭವನ, ದೇವಸ್ಥಾನ, ಜಗುಲಿಗಳಲ್ಲಿ ರಾತ್ರಿ ಊಟ ವಸತಿಯ ವ್ಯವಸ್ಥೆ ಮಾಡಿರುತ್ತಿದ್ದರು. ಹಳ್ಳಿ ಹಳ್ಳಿಯಿಂದ ಜಾಥಾ ಮುನ್ನಡೆಯುತ್ತಿದ್ದಂತೆ ದಾರಿಯುದ್ದಕ್ಕೂ ರೈತ ಕ್ರಾಂತಿ ಗೀತೆಗಳು, ಪೌರಾಣಿಕ ನಾಟಕಗಳ ತುಣುಕುಗಳು, ಜಾನಪದ ಗೀತೆಗಳನ್ನು ಹಾಡುತ್ತ ಊರಿಂದೂರಿನ ಜನರು ಬೆಸೆದುಕೊಂಡು ಸಾಗುತ್ತಿದ್ದರು. ಹಾಸನದ ಕಡೆಯಿಂದ ಬಂದ ರೈತ ಜಾಥಾ ಗುಂಪು ನಾಗತಿಹಳ್ಳಿಯಲ್ಲಿ ಒಂದು ರಾತ್ರಿ ಬೀಡು ಬಿಟ್ಟಿತು. ಬೆಂಗಳೂರು ಹೆದ್ದಾರಿಯಲ್ಲಿರುವ ನಾಗತಿಹಳ್ಳಿಯಲ್ಲಿ ನಾಗತಿಹಳ್ಳಿ ಚಂದ್ರಶೇಖರ್ ತನ್ನ ಗೆಳೆಯರೊಂದಿಗೆ ಊಟ ವಸತಿ ವ್ಯವಸ್ಥೆ ಉಸ್ತುವಾರಿ ವಹಿಸಿದ್ದ. ಹಲವು ಪ್ರತಿಭೆಗಳ ಕಣಜವಾಗಿದ್ದ ನಾಗತಿ ಹಾಡು, ಹರಿಕಥೆ, ಡೈಲಾಗು ಹೇಳಿ ಜಾಥಾದ ರೈತರನ್ನು ರಂಜಿಸುತ್ತಿದ್ದ. ಎಲ್ಲೆಲ್ಲಿಂದಲೋ ಬಂದಿದ್ದ ಹಳ್ಳಿಗರು ಈ ಆತಿಥ್ಯ ಕಂಡು ವಿಸ್ಮಿತರಾಗಿದ್ದರು. ಅವರಿಗೆಲ್ಲಾ ಅದು ತಮ್ಮೂರೇ ಅನ್ನಿಸಿತ್ತು.

ಅಲ್ಲಿಂದ ಮುಂದಕ್ಕೆ ಜಾಥಾ ಬೆಂಗಳೂರಿನತ್ತ ಹೆಜ್ಜೆ ಹಾಕಿತು. ಅಂದಿನ ರೈತ ಮುಖಂಡರೊಟ್ಟಿಗೆ ಯುವಕ ನಾಗತಿಹಳ್ಳಿ ಚಂದ್ರಶೇಖರ್ ಹೆಜ್ಜೆ ಹಾಕಿದ. ಜಾಥಾ ಮುಗಿದು, ನಾನಾ ಶಿಬಿರಗಳಲ್ಲಿ ರೈತ ಸಂಘಟನೆಯ ವಿಚಾರ ವಿಮರ್ಶೆ ನಡೆಯುತ್ತಿದ್ದಂತೆ, ಸಾಹಿತ್ಯದ ಎಂಎ ಓದುತ್ತಿದ್ದ ನಾಗತಿಹಳ್ಳಿ ಚಂದ್ರಶೇಖರ್ ಹಳ್ಳಿಹಳ್ಳಿಗಳನ್ನು ಸಾಂಸ್ಕೃತಿಕವಾಗಿ ಬೆಸೆಯುವ ಅನೇಕ ವಿಚಾರಗಳು ಮೊಳೆತಿದ್ದವು. ಅವು ಯಾವಕ್ಕೂ ಸ್ಪಷ್ಟ ರೂಪವಿರಲಿಲ್ಲ. ಶಿವರಾಮ ಕಾರಂತರು, ನಟ ಅನಂತನಾಗ್ ಜೊತೆ ಪರಿಸರ ಉಳಿಸಿ ಆಂದೋಲನದಲ್ಲೂ ಈ ಮೊದಲೇ ಪಾಲ್ಗೊಂಡಿದ್ದ. ಕಲಿತವರು ಮರಳಿ ಹಳ್ಳಿಗೆ ತೆರಳಿ ಅಲ್ಲಿಯ ಬದುಕು ಹಸನುಗೊಳಿಸುವ ಕನಸು ಕಾಡುತ್ತಿತ್ತು. ಸಾಹಿತ್ಯ ಕೃಷಿ, ಓದು ಮುಂದುವರೆಯಿತು. ಎಂಟು ಚಿನ್ನದ ಮೆಡಲುಗಳೊಂದಿಗೆ ಎಂಎ ರ್‍ಯಾಂಕ್ ಬಂತು. ಉದ್ಯೋಗಕ್ಕೂ ಮತ್ತು ರ್‍ಯಾಂಕ್‌ಗೂ ಸಂಬಂಧವೆಲ್ಲಿದೆ?

ನ್ಯಾಯಾಂಗ ಇಲಾಖೆ ಉಗ್ರಾಣದ ಮೂಲೆಯಲ್ಲಿ ಕೊನೆಗೊಂದು ಕಾರಕೂನಿಕೆ ಕೆಲಸ ಸಿಕ್ಕಿತು. ಆದರೆ ಆ ವೇಳೆಗಾಗಲೇ ನಾಗತಿಹಳ್ಳಿ ಚಂದ್ರಶೇಖರ್ ಸ್ಟಾರ್ ಯುವ ಬರಹಗಾರ. ಚಿತ್ರಕತೆ, ಸಂಭಾಷಣೆ ರಚಿಸುವ ಅವಕಾಶವೂ ದೊರೆಯಿತು. ಒಂದಷ್ಟು ದಿನ ಅಜ್ಞಾತ ಘೋಸ್ಟ್ ರೈಟರ್!. ನಂತರದಲ್ಲಿ ರಾಜ್ಯ, ರಾಷ್ಟ್ರ ಪ್ರಶಸ್ತಿಗಳು ಅರಸಿ ಬಂದವು. ಬಿಇಎಸ್ ಕಾಲೇಜಿನಲ್ಲಿ ಅಧ್ಯಾಪನ ಕೆಲಸವೂ ಸಿಕ್ಕಿತು. ಮೆಚ್ಚಿದ ಶೋಭಾ ಕೈ ಹಿಡಿದರು. ಬದುಕು ಒಂದು ನೆಲೆ ಕಂಡಿತು. ಸತತ ಏಳೆಂಟು ಯಶಸ್ವಿ ಚಿತ್ರದ ನಿರ್ದೇಶಕನೂ ಆದ. ಐದಾರು ಟೆಲಿ ಸೀರಿಯಲ್‌ಗಳೂ ಹೊರಬಂದವು. ಯಶಸ್ಸಿನ ಉತ್ತುಂಗಕ್ಕೆ ಹೋದಮೇಲೆ, ಕುಗ್ರಾಮ, ಯೌವ್ವನದ ಕನಸುಗಳು ಹಸಿರಾಗಿ ಉಳಿಯುವುದುಂಟೇ?

ವಿದ್ಯಾರ್ಥಿ ದೆಸೆಯಲ್ಲೇ ಸಮಾಜಸೇವೆಯ ಆದರ್ಶ ಮೈಗಂಟಿತ್ತು. ಹುಟ್ಟೂರಿನಲ್ಲಿ ಓರಗೆಯವರ ಜೊತೆಗೂಡಿ ವಿವೇಕಾನಂದ ಯುವಕ ಕೇಂದ್ರ ಸ್ಥಾಪಿಸಿ ಅನೇಕ ಸಾಮಾಜಿಕ ಕಾರ್ಯ ಕೈಗೊಂಡಿದ್ದ. ಸ್ವಾಭಿಮಾನಿ ಸಂಘವೆಂದು ಕರೆದುಕೊಂಡು ಹಳ್ಳಿಗರ ಹಣದಿಂದಲೇ ಊರ ಅಭಿವೃದ್ಧಿ ಕೆಲಸಗಳನ್ನು ನಡೆಸಿದ್ದು ಈವತ್ತಿಗೂ ಒಂದು ಕೌತುಕ. ಯುವಕರು ಪ್ರತಿಯೊಂದು ಮನೆಯಿಂದಲೂ ಒಂದೊಂದು ತೆಂಗಿನಕಾಯಿ ಸಂಗ್ರಹಿಸಿ, ಅದರಿಂದ ಬರುವ ಹಣದಿಂದ ಗ್ರಾಮದ ರಸ್ತೆ, ಚರಂಡಿಗಳನ್ನು ಸ್ವಚ್ಛಗೊಳಿಸುವ, ಬೀದಿದೀಪಗಳನ್ನು ದುರಸ್ತಿ ಮಾಡಿಸುವ ಕೆಲಸ ಕೈಗೊಂಡಿದ್ದರು. ಹೊಸದಾಗಿ ಮದುವೆಯಾಗಿ ಬಂದ ಅಳಿಮಯ್ಯರಿಂದ ಊರಿಗೆ ಅಗತ್ಯವಾದ ಟ್ಯೂಬ್‌ಲೈಟುಗಳನ್ನು ಬಳುವಳಿಯಾಗಿ ಪಡೆದು ಬಳಸಿದ್ದು ಮತ್ತೊಂದು ವಿಶೇಷ. ಅಳಿಮಯ್ಯರಿಗೆ ಮುದ್ದಿನ ಹೆಂಡತಿಯರ ತವರೂರಿನೊಂದಿಗೆ ಸೌಹಾರ್ದತೆ ಬೆಳೆಯಲೂ ಇದು ಸಹಾಯಕವಾಯಿತು. ಹೀಗಾಗಿ ಸಂಸ್ಕೃತಿ ಹಬ್ಬ ನಡೆಸಲು ಗ್ರಾಮಕ್ಕೆ ಗ್ರಾಮವೇ ಸಜ್ಜಾಗಿತ್ತು.

ನಾಚಂ ಎಂಎಯಲ್ಲಿದ್ದಾಗಲೇ ಪ್ರಾರಂಭಿಸಿದ್ದ ಅಭಿವ್ಯಕ್ತಿ ಸಾಂಸ್ಕೃತಿಕ ವೇದಿಕೆಯಲ್ಲಿ (1985) ಸರಳ ಮದುವೆ, ರಕ್ತದಾನ ಮುಂತಾದ ನಾನಾ ಸಾಮಾಜಿಕ ಜಾಗೃತಿಯ ಕೆಲಸಗಳು ನಡೆಯುತ್ತಿದ್ದವು. ಅದೊಂದು ರೀತಿಯಲ್ಲಿ ರೈತ ಚಳುವಳಿ, ಪರಿಸರ ಆಂದೋಲನ, ಮೂಢನಂಬಿಕೆಯ ವಿರುದ್ಧದ ಹೋರಾಟಗಳ ಮುಂದುವರಿಕೆ. ಅಲ್ಲದೆ ವರ್ಷಕ್ಕೊಂದಾದರೂ ಪುಸ್ತಕದ ಬಿಡುಗಡೆ ನಡೆದಿತ್ತು. ಆಗಿನ ಎಲ್ಲವೂ ನಗರಮುಖಿ ಚಟುವಟಿಕೆಗಳು.

ಇಷ್ಟಾಗುವಲ್ಲಿ ಬರೋಬ್ಬರಿ ಇಪ್ಪತ್ತು ವರ್ಷಗಳೇ ಸದ್ದಿಲ್ಲದೆ ಉರುಳಿದ್ದವು. ರೈತ ಚಳುವಳಿ ನೆಲಕಚ್ಚಿತ್ತು. ಹೋರಾಟ, ಆಂದೋಲನಗಳ ಹೊಳಪು ಮಾಸಿತ್ತು. ನಗರ ಬದುಕಿನ ಜಂಜಡದಲ್ಲಿ ಹಿಂದೆ ವಿದ್ಯಾರ್ಥಿಯಾಗಿದ್ದಾಗ ಮಾತಾಡುತ್ತಿದ್ದ ಮರಳಿ ಹಳ್ಳಿಗೆ, ಗ್ರಾಮಸಂಸ್ಕೃತಿ ಚಟುವಟಿಕೆಗಳ ಸಂಗತಿ ನೆನಪಾಗುವುದಾದರೂ ಹೇಗೆ?

ಆದರೆ ಅದಕ್ಕೂ ಕಾಲ ಕೂಡಿಬಂತು. 2000 ಇಸವಿಯ ಆರಂಭದಲ್ಲೇ ಮಾತಾಡ್ ಮಾತಾಡ್ ಮಲ್ಲಿಗೆ ಚಿತ್ರದ ಕಥಾವಸ್ತು ಅಂಕುರವಾಗಿತ್ತು. ಅದರ ಪೂರ್ಣ ಹಂದರ ಮೂಡುತ್ತಿರುವಾಗಲೇ ಚಂದ್ರುವಿನಲ್ಲಿ ಹಳೇ ಸಂಕಲ್ಪಗಳು ಮತ್ತೆ ಜಾಗೃತವಾದವು. ಯೌವ್ವನದ ಬೀದಿ ಹೋರಾಟಗಳಲ್ಲಿ ಕನಸಿದ್ದ ಹತ್ತಾರು ಚಿಂತನೆಗಳು ಹೊರಬರಲು ಗುದುಮುರಿಗೆ ಹಾಕಿದ್ದವು. ನಾವು ಮಾತ್ರ ಬೆಳೆದರಾಯಿತೇ, ನಮಗೆ ನೀರುಣಿಸಿ ಜೀವ ತಣಿಸಿದ ಹಳ್ಳಿಗಳೂ ಬೆಳೆಯಬೇಕಲ್ಲವೇ. ನಮ್ಮ ಹಳ್ಳಿಗಳನ್ನು ಸಾಂಸ್ಕೃತಿಕ ಕೇಂದ್ರಗಳನ್ನಾಗಿ ರೂಪಿಸುವ ಮತ್ತು ಹಳತನ್ನು ಕಾಪಾಡುವ ಹೊಣೆಗಾರಿಕೆ ಇದೆ. ಬೇರುಗಳು ಬಲಿಷ್ಠವಾಗಿದ್ದರೆ ತಾನೆ ತೆನೆಗಳು ಹೊಮ್ಮಲು ಸಾಧ್ಯ. ಬೇರಿನಿಂದ ತೆನೆ, ತೊನೆಯುವ ತೆನೆಗಳಿಂದ ಸಾವಿರಾರು ಕಾಳುಗಳು. ಪ್ರತಿ ಕಾಳೂ ಬೇರನ್ನು ನೆನೆದು, ಪ್ರೀತಿಯನ್ನು ಮತ್ತು ಶಕ್ತಿಯನ್ನು ಮರಳಿ ಕೊಡುತ್ತವೆ. ಈ ಋಣ ಪ್ರಜ್ಞೆಯಿಂದ ನಾವು ನಮ್ಮ ಹಳ್ಳಿಗಳಲ್ಲಿ ಸಾಂಸ್ಕೃತಿಕವಾದ ಕೆಲಸ ಮಾಡಬೇಕು. ಜೀರೋ ಬಂಡವಾಳದೊಡನೆ ಈ ಭೂಮಿಗೆ ಬಂದ ನಾವು ಬೆಳೆದಿದ್ದು, ಬದುಕಿದ್ದು ಗ್ರಾಮೀಣ ನೆಲೆಯಿಂದ, ಅದರ ಸೆಲೆಯಿಂದ. ಇಲ್ಲಿ ಪಡೆದದ್ದನ್ನು ಅಲ್ಲಿಗೇ ಕೊಡಬೇಕು. ಎನಿತು ಜೀವರಿಗೆ ಎನಿತು ಋಣಿಯೋ ನಾವು.

ಚಂದ್ರುವಿನ ಈ ಚಿಂತನೆಗೆ ಒತ್ತಾಸೆಯಾಗಿ ನಿಂತದ್ದು ರೈತ ಚಳುವಳಿಯ ಹಿನ್ನೆಲೆ. ಗ್ರಾಮೀಣ ಬದುಕನ್ನು ನೋಡಿದಾಗಲೆಲ್ಲ, ತನ್ನೆಲ್ಲ ಬೆಳವಣಿಗೆಗೆ ತನ್ನ ಗ್ರಾಮದ ಬೇರುಗಳೇ ಕಾರಣ. ಇದಕ್ಕೆ ಏನಾದರೂ ಗಟ್ಟಿಯಾದ ಬಾಗಿನ ನೀಡಬೇಕು. ಅಂತೂ ಸಂಕಲ್ಪ ಹೆಪ್ಪುಗಟ್ಟುತ್ತಿತ್ತು.

ಮರಳಿ ಹಳ್ಳಿಗೆ ಹೋಗೋಣ ಎಂಬುದು ವೇದಿಕೆಯ ಮಾತಾಗಿ ಉಳಿಯಬೇಕೇ, ಅನ್ನಿಸಿದ್ದನ್ನು ಮಾಡುವ ಮನಸ್ಸು, ಉತ್ಸಾಹ ಇರುವಾಗ ಮಾಡಬಾರದೇಕೆ.

ಚಂದ್ರು ತಡಮಾಡಲಿಲ್ಲ. ಸಮಾನಮನಸ್ಕರನ್ನು ಕಂಡು ತಮ್ಮ ಮನಸ್ಸು ಬಿಚ್ಚಿಟ್ಟರು. ಒಗ್ಗೂಡಿ ಕೆಲಸ ಮಾಡೋಣ ಎಂದು ವಿನಂತಿಸಿದರು. ಎಲ್ಲರೂ ಅವರವರ ಭಾವಕ್ಕೆ ತಕ್ಕ ಸಲಹೆ ನೀಡಿದರು, ಸುಮ್ಮನಾದರು. ಮಾತಿನಲ್ಲಿ ಉದ್ದುದ್ದ ಆದರ್ಶ ಹೇಳುತ್ತಿದ್ದವರು, ಕೆಲಸ ಅಂದೊಡನೆ ತಣ್ಣಗಾದರು. ಸಾಮಾಜಿಕ ಸೇವೆ, ಬದಲಾವಣೆ ಎಂದರೆ ಸ್ವಯಂ ಲಾಭದ ಹುನ್ನಾರ ಇರಲೇಬೇಕು ಎಂಬಂತಹ ಮನಸ್ಥಿತಿ ಅದಾಗಲೇ ಬಂದಾಗಿತ್ತು. ಸೇವೆ ಅಂತ ಮಾಡಿದರೆ ಏನಾದರೂ ಅಧಿಕಾರ, ಹಣ, ಮನ್ನಣೆ ಸಿಕ್ಕಲೇಬೇಕು ಎಂಬ ಧೋರಣೆ. ಫಲಾಪೇಕ್ಷೆ ಇಲ್ಲದ ಆದರ್ಶಗಳು ಗಾಂಧೀಜಿಯೊಂದಿಗೇ ಮರೆಯಾಗಿದ್ದವು.

ಚಂದ್ರುವಿಗಾದರೆ ರೈತ ಹೋರಾಟದ ಗಟ್ಟಿ ಹಿನ್ನೆಲೆಯಿತ್ತು. ಮಾಡಬೇಕು ಎಂಬ ಬದ್ಧತೆ ಆ ದಿನಗಳಿಂದಲೇ ಬೆಳೆದು ಬಂದಿತ್ತು. ಅವರಿವರನ್ನು ನೆಚ್ಚಿಕೊಂಡರೆ ಆಗ ಬೇಕಾದದ್ದಕ್ಕೂ ಕಲ್ಲು ಹಾಕುತ್ತಾರೆ ಅನ್ನಿಸಿತು. ಇದು ನನ್ನ ಕನಸು. ನಾನೇ ಮಾಡ್ತೀನಿ ಎಂಬ ಛಲ ಮೂಡಿತು. ಯಾರನ್ನೂ ನೆಚ್ಚಿಕೊಳ್ಳಲು ಹೋಗಲಿಲ್ಲ. ನಾಗತಿಹಳ್ಳಿ ಸಂಸ್ಕೃತಿ ಹಬ್ಬಕ್ಕೆ 2004ರ ಯುಗಾದಿಯಲ್ಲಿ ಬಿತ್ತು ಮೊದಲ ಹೆಜ್ಜೆ. ಕನಸಿನ ರೆಕ್ಕೆ ಬಿಚ್ಚಿತು. ಅದ್ಧೂರಿಯಾದ ಸಂಸ್ಕೃತಿ ಊರಹಬ್ಬ ಮೂರು ದಿನ ನಡೆಯಿತು. ಚಿತ್ರರಂಗದಲ್ಲಿ ದುಡಿದಿದ್ದ ಸ್ವಂತ ಹಣವನ್ನು ಧಾರಾಳವಾಗಿ ಖರ್ಚು ಮಾಡಲು ಚಂದ್ರು ಹಿಂದೆ ಮುಂದೆ ನೋಡಲಿಲ್ಲ. ಮಾಡೋದೇ ಮಾಡ್ತೀವಿ. ಅಚ್ಚುಕಟ್ಟಾಗಿ ಅದ್ಧೂರಿ ಉತ್ಸವದಂತೆ ಮಾಡೋಣ. ಇದು ಕಾಟಾಚಾರದ ಕಾರ್ಯವಲ್ಲ. ಯಾವುದಕ್ಕೂ ಕೊರತೆಯಾಗ ಕೂಡದು. ಇವೆಲ್ಲವೂ ಸ್ವಯಂ ಉದ್ಭವಿಸಿದ್ದ ಆಲೋಚನೆಗಳು. ಯಾರ ಪ್ರೇರಣೆ, ಪ್ರಚೋದನೆಯೂ ಇಲ್ಲದೆ ಅರಳಿದಂತವು.

ಉತ್ಸವದ ತೇರು ಹೊರಟಿತು. ಉಘೇ ಎನ್ನುತ್ತ ನಾಗತಿಹಳ್ಳಿಯವರೆಲ್ಲರೂ ಸೇರಿ ಎಳೆದರು. 1990-2010 ಅವು ಚಂದ್ರುವಿನ ಉಚ್ಛ್ರಾಯದ ದಶಕಗಳು. ಅಲ್ಲಿ ದುಡಿದದ್ದು, ಇಲ್ಲಿ ಸುರಿದದ್ದು. ತಾನು ಓದಿದ ಸರ್ಕಾರಿ ಶಾಲೆಯ ಆವರಣದಲ್ಲೇ ಸುಸಜ್ಜಿತ ರಂಗಮಂದಿರ, ಗ್ರಂಥಾಲಯ, ಕಂಪ್ಯೂಟರ್ ಕಲಿಕಾ ಕೇಂದ್ರ ಎಲ್ಲವೂ ಸ್ವಂತ ಖರ್ಚಿನಲ್ಲಿ ಒಂದೊಂದಾಗಿ ಅರಳಿದವು.

2004ರ ನಾಗತಿಹಳ್ಳಿಯ ಸಂಸ್ಕೃತಿ ಹಬ್ಬ ಏಪ್ರಿಲ್ 18ರಿಂದ 23 ರವರೆಗೆ ಆರು ದಿನಗಳು ನಡೆದೇ ಬಿಟ್ಟಿತು. ಊರಿನ ಮನೆ ಮನೆಯಲ್ಲೂ ಸಂಭ್ರಮ ಸಡಗರ ಉಕ್ಕಿ ಹರಿದವು. ಆರು ದಿನಗಳ ಹಬ್ಬದಲ್ಲಿ ಹಳ್ಳಿಯ ಸಮಸ್ತರೂ ಪಾಲ್ಗೊಳ್ಳುವಂತೆ ಚಂದ್ರು ಆಯೋಜಿಸಿದ್ದ, ಉಚಿತ ವೈದ್ಯಕೀಯ ಶಿಬಿರ, ಗಿಡ ನೆಡುವ ಕಾರ್ಯಕ್ರಮ, ಜನಪದ ಉತ್ಸವ, ನಾಟಕ, ಸಂಗೀತ ಮತ್ತು ಚಿತ್ರಕಲೆಗಳ ಉತ್ಸವ, ಕವಿಮೇಳ, ಕ್ರೀಡಾಮೇಳ, ಹಾಸ್ಯೋತ್ಸವ ಮತ್ತು ಹರಿಕಥೆ ಇಷ್ಟೂ ಕಾರ್ಯಕ್ರಮಗಳು ಅರೂ ದಿನ ಸತತ ನಡೆಯಬೇಕು. ಹಾಗೆ ಸಂಸ್ಕೃತಿಹಬ್ಬ ರೂಪುಗೊಂಡಿತು. ಖರ್ಚು-ವೆಚ್ಚಗಳು ನೀರಾಗಿ ಹರಿದವು. ಬಲವತ್ತರ ಪ್ರಾಂಜಲ ಸಂಕಲ್ಪ ಇದ್ದಾಗ ಯಾವ ಖರ್ಚೂ ಖರ್ಚಲ್ಲ. ದುಂದಂತೂ ಅಲ್ಲವೇ ಅಲ್ಲ.


ರೈತ ಚಳುವಳಿಯಲ್ಲಿ, ಅಭಿವ್ಯಕ್ತಿಯ ಆರಂಭದ ದಿನಗಳಲ್ಲಿ ಕಂಡಿದ್ದ ಕನಸು- ಯೋಚನೆ-ಯೋಜನೆಗಳಿಗೆ ಪೂರ್ಣರೂಪ ಸಿಗತೊಡಗಿತ್ತು.

ಹೊರಡುವುದಷ್ಟೇ ಕಷ್ಟ ತೇರಿಗೆ. ಸಂಸ್ಕೃತಿ ಹಬ್ಬದ ಮಹತ್ವ ಮನಗಂಡ ಸುತ್ತಲಿನ ಹತ್ತೂರು ಗ್ರಾಮಸ್ಥರೂ ಮುಂದಿನ ಹಬ್ಬಗಳಿಗೆ ಒಗ್ಗೂಡಿದರು. ಮಾಡುವ ಕೆಲಸದಲ್ಲಿ ಪವಿತ್ರ ಉದ್ದೇಶವಿದ್ದಾಗ, ಆಚರಣೆಯಲ್ಲಿ ಪ್ರಾಮಾಣಿಕತೆಯಿದ್ದಾಗ ಸಹಕಾರ ಸಿಕ್ಕಲು ತಡವಾಗಲಿಲ್ಲ. ಶಾಲಾ ಶಿಕ್ಷಕ ವರ್ಗ, ಊರಿನ ಯುವಕ ಮಂಡಲಿ, ಮಹಿಳಾ ಸಂಘಗಳು, ಗೆಳೆಯರು ಒಡನಾಡಿಗಳ ಒತ್ತಾಸೆ ಸಿಕ್ಕಿತು. ನಾಗತಿಹಳ್ಳಿಯ ಹಬ್ಬದ ತೇರು ವರ್ಷದಿಂದ ವರ್ಷಕ್ಕೆ ಹೊಸ ಅಲಂಕಾರದೊಂದಿಗೆ ಮೈದುಂಬಿಸಿಕೊಂಡು ಚಲಿಸಿತು. ಗ್ರಾಮ ಬದುಕಿನ ಉನ್ನತಿಗೆ ಚಿಂತನೆ, ಚಿಕಿತ್ಸೆ, ಚೈತನ್ಯ ಎಂಬ ಆದರ್ಶ ಅಡಕವಾಗಿತ್ತು. ಉಚಿತ ವೈದ್ಯಕೀಯ ಶಿಬಿರಗಳು, ರೈತರ ನಿತ್ಯ ಬೇಸಾಯಕ್ಕೆ ಬೇಕಾದ ಉಪಯುಕ್ತ ಉಪನ್ಯಾಸಗಳು, ಪ್ರಾತ್ಯಕ್ಷಿಕೆಗಳ ಕಾರ್ಯಾಗಾರ ಶಿಬಿರಗಳು ನಡೆದವು. ನಾಡಿನ ಹೆಸರಾಂತ ಸಂಸ್ಥೆಗಳಿಂದ ನಾಟಕ, ಹಾಡು, ನೃತ್ಯಗಳ ಕಾರ್ಯಕ್ರಮಗಳೂ ಜರುಗಿದವು. ಗೀತಗಾಯನ, ನಾಟಕ, ಯಕ್ಷಗಾನಗಳ ಕಲಿಕೆ. ಇಂಗ್ಲೀಷ್ ಕಲಿಕಾ ಶಿಬಿರ. ಏನುಂಟು ಏನಿಲ್ಲ? ನಾಗತಿಹಳ್ಳಿಯ ಗ್ರಾಮಸ್ಥರು, ಮಕ್ಕಳೂ ಪಾಲ್ಗೊಂಡರು.

ಕಾರ್ಯಸಾಧನೆಗೆ ಪವಿತ್ರವಾದ ಉದ್ದೇಶವಿದ್ದಾಗ ಜನರ ಪ್ರೋತ್ಸಾಹ, ಸಹಕಾರಗಳು ಹೇಗೆ ಜತೆಗೂಡುತ್ತವೆ ಎಂಬುದಕ್ಕೂ ಸಂಸ್ಕೃತಿ ಹಬ್ಬ ನಿದರ್ಶನ. ಇಪ್ಪತ್ತೊಂದು ವರ್ಷಗಳಿಂದ ದಾಪು ಗಾಲು ಹಾಕುತ್ತ ಬಂದಿರುವ ಇದು ರಜತೋತ್ಸವದ ಮೆಟ್ಟಿಲಿಗೆ ಬಂದಿದೆ. ಇದನ್ನು ಇದೇ ಉತ್ಸಾಹದಿಂದ ಮುಂದುವರೆಸಿಕೊಂಡು ಹೋಗಬಲ್ಲ ಯುವ ಪಡೆಯೇ ಸಿದ್ಧವಾಗಿದೆ. ರಾಜಕೀಯ ಪುಢಾರಿಗಳು, ಪರಾನ್ನ ಪುಷ್ಟರಿಗೆ ಸ್ಕೋಪ್ ಇಲ್ಲದಂತಾಗಿದೆ. ಈ ವರ್ಷ ಆ ಶಾಲೆಗೆ ನೂರರ ಸಂಭ್ರಮ ಬೇರೆ. ಡಾ.ನಾಗತಿಹಳ್ಳಿ ಚಂದ್ರಶೇಖರ್ ಹಚ್ಚಿರುವ ಹಣತೆಯನ್ನು ಮುಂದಿನ ಪೀಳಿಗೆ ಹೀಗೇ ದೇದೀಪ್ಯವಾಗಿ ಬೆಳಗಬಲ್ಲದು. ಅನುಮಾನವಿಲ್ಲ.



ಜೆ.ಬಿ.ರಂಗಸ್ವಾಮಿ
ವಿಶ್ರಾಂತ ಪೊಲೀಸ್ ಅಧಿಕಾರಿ, ಮೈಸೂರು
ಮೊ: 94490 10009




ಕಲಾ ತಂಡಗಳೊಂದಿಗೆ ನಾಗತಿಹಳ್ಳಿ ಚಂದ್ರಶೇಖರ್

## ಒಳ್ಳೆ ಕೆಲಸಕ್ಕೂ ಕಲ್ಲು ಹಾಕಲೆತ್ನಿಸುವ ಜನರು..!

ವಿಜ್ಞಾನ, ಶಿಕ್ಷಣ, ಭಾಷೆ ಮತ್ತು ಸಂಸ್ಕೃತಿಗಳ ಮೂಲಕ ನಾಗತಿಹಳ್ಳಿಯ ಎಳೆಯರು ಹೊಸ ಕಾಲವನ್ನು, ಹೊಸ ಜಗತ್ತನ್ನು ವೈಚಾರಿಕ ಪ್ರಜ್ಞೆಯಿಂದ ಅರ್ಥಮಾಡಿಕೊಳ್ಳುವಂಥ ಪರಿಸರ ನಿರ್ಮಿಸಬೇಕು ಎಂಬ ಆಶಯ ಚಂದ್ರೂವಿನದು. ಗಾಂಧೀಜಿ, ವಿನೋಬಾ, ಅಣ್ಣಾ ಹಜಾರೆ ಮುಂತಾದವರ ಸಿದ್ಧ ಮಾದರಿ ಕಣ್ಣೆದುರಿಗಿದ್ದವು. ಅದಕ್ಕಾಗಿ ಯಾರ ನೆರವನ್ನೂ ಯಾಚಿಸದೆ, ತಾನೇ ಕಷ್ಟಪಟ್ಟು ಅರ್ಜಿಸಿದ ಹಣದಿಂದ ಎಲ್ಲವನ್ನೂ ನಾಗತಿಹಳ್ಳಿಯಲ್ಲಿ ಕಟ್ಟಿಸಿದ. ಸ್ವಂತ ದುಡ್ಡಿನಲ್ಲಿ ಸಾರ್ವಜನಿಕರಿಗಾಗಿ ಮಾಡಿದಂತಹ ಕಾರ್ಯಕ್ಕೂ ವಿಚಿತ್ರ ವಿಘ್ನಗಳು. ನೂರೆಂಟು ಕುತ್ಸಿತ ಟೀಕೆಗಳು. ಜಗಲೀಕಟ್ಟೆ ಮೇಧಾವಿಗಳು, ಇದರ ಮೂಲೋದ್ದೇಶವನ್ನು ಕಂಡು ಹಿಡಿದೇ ಬಿಟ್ಟರು. "ಯಲಕ್ಷನ್ನಿಗೆ ನಿಲ್ಲೋಕೆ ನಾಗ್ತಿ ಪ್ಲ್ಯಾನ್ ಮಾಡ್ಕಂಡು ಕಟ್ಟಿಸ್ತಾ ಅವ್ನೆ. ಸ್ವಂತ ಕಾಸು ಖರ್ಚು ಮಾಡ್ಕಂಡು ಕಟ್ಟಡ ಕಟ್ಟೋಕೆ ಅವ್ನಿಗೇನು ಹುಚ್ಚೇ ಎಂದರು. ವೃಥಾ ಟೀಕಿಸುವವರಿಗೇನು. ಇಲ್ಲಾ ಇಕ್ಕಿ ಗೊತ್ತಿರಬೇಕು. ಇಲ್ಲವೇ ನೆಕ್ಕಿ ಗೊತ್ತಿರಬೇಕು. ಎರಡೂ ಗೊತ್ತಿಲ್ಲದ ಕ್ಯಾತೆಗಳಿಗೆ ಗ್ರಾಮಸಂಸ್ಕೃತಿ ಬೆಳೆಸುವ ಅರಿವಿರಲು ಸಾಧ್ಯವೇ.

ಇವರ ತಾಲೂಕಿನ ಮಂತ್ರಿಯೊಬ್ಬ ನಾಗ್ತಿಯ ಹುನ್ನಾರವೇ ಯಲಕ್ಸನ್ನು ಎಂದು ಅಲ್ಲಲ್ಲಿ ಮಾತಾಡಿದ. ತನಗೆ ಇವನೇ ಮುಳಿವು ಎಂದು ಖಾತ್ರಿಯಾಗಿ ಅವನಿಗವನೆ ಅಂದುಕೊಂಡಿದ್ದ. ವಿದ್ಯಾ ಇಲಾಖೆ ಅಧಿಕಾರಿಗಳಿಗೆ, ವಿಘ್ನಕಾರಕರಾಗುವಂತೆ ಮುಲಾಜಿಲ್ಲದ ಸೂಚನೆಯನ್ನೂ ಕೊಟ್ಟುಬಿಟ್ಟ. ಕಟ್ಟುತ್ತಿದ್ದ ಕಂಪ್ಯೂಟರ್, ಗ್ರಂಥಾಲಯ, ರಂಗಮಂದಿರಗಳ ಕೆಲಸಕ್ಕೆ ಉಸಿರು ಕಟ್ಟಿತು. ಆದರೆ ಚಂದ್ರುವಿನ ವ್ಯಕ್ತಿತ್ವಕ್ಕೆ ಸ್ವಂತದ ಗಟ್ಟಿ ವರ್ಚಸ್ಸಿತ್ತು. ನಾಡಿನ ಜನಪ್ರಿಯ ಸಾಹಿತಿ, ಚಿತ್ರ ನಿರ್ದೇಶಕ. ಅವರಿವರ ಮರ್ಜಿಯೇ ಬೇಕಿಲ್ಲ. ಜಾಗ ಸರ್ಕಾರದ್ದೇ ಇರಬಹುದು. ಸ್ವಂತ ಹಣದಲ್ಲಿ ಮಾಡುತ್ತಿರುವ ಊರ ಕೆಲಸ. ಅಗತ್ಯದ ಎಲ್ಲ ಪರವಾನಗಿಗಳನ್ನೂ ಪಡೆದಾಗಿತ್ತು. ಅಧಿಕಾರಿಗಳು ಬೆಂಬಲವಾದರು. ಕ್ಷುದ್ರ ಪುಡಾರಿ ತೀಟನೆ ಆಟ ನಿಂತಿತು. ಕಟ್ಟಡಗಳು ಹೇಗೋ ಉಸಿರಾಡಿಕೊಂಡು ಗಟ್ಟಿಯಾಗಿ ಮೈದಳೆದುಬಿಟ್ಟವು. ಚಂದ್ರು ಇವ್ಯಾವೂ ಟೀಕೆಗಳಿಗೆ ಗಮನ ಕೊಡದೆ ತಮ್ಮ ಕಾಯಕದಲ್ಲಿ ತೊಡಗಿಕೊಂಡರು. ಅಭಿವ್ಯಕ್ತಿ ವೇದಿಕೆಯೊಂದಿಗೆ, ಚಂದ್ರೂ ಚಿಕ್ಕಂದಿನಲ್ಲಿ ಕಟ್ಟಿ ಒಡನಾಡಿದ್ದ, ಸ್ವಾಮಿ ವಿವೇಕಾನಂದ ಯುವಕ ರೈತಸಂಘದ ಉತ್ಸಾಹಿಗಳೂ ಜೊತೆಯಾದರು.



## ವಾರಭವಿಷ್ಯ

6.04.2025 ರಿಂದ 12.04.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಮೀನ, ಚಂದ್ರ-ಕಟಕ, ಸಿಂಹ, ಕನ್ಯಾ, ಸಿಂಹ, ಕುಜ-ಮಿಥುನ, ಕಟಕ (ವ) ಬುಧ - ಮೀನ, ಗುರು-ವೃಷಭ, ಶುಕ್ರ-ಮೀನ, ಶನಿ-ಮೀನ, ರಾಹು-ಮೀನ ಮತ್ತು ಕೇತು-ಕನ್ಯಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720



### ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವಾರದ ಆದಿಗೆ ಸುವರ್ಣ, ರಜತ ಪದಾರ್ಥಗಳ ಖರೀದಿ ಯೋಗ, ನಿವೇಶನ, ಗೃಹ ಹೊಂದುವ ಪೂರ್ವಭಾವಿ ಸಿದ್ಧತೆಗಳು ನಡೆಯುವುದು. ಕುಶಲಕರ್ಮಿಗಳಿಗೆ ಹೆಚ್ಚಿನ ಬೇಡಿಕೆ ಹಾಗೂ ಧನ ಸಂಚಯ, ಪ್ರೀತಿ-ಪ್ರಣಯ ವಿಚಾರಗಳು ವಿವಾಹ ನಿಶ್ಚಿತಾರ್ಥದಲ್ಲಿ ಸುಖಾಂತ್ಯಗೊಳ್ಳಬಹುದು. ಹಿರಿಯರ ಸಾಧನೆಯ ಗೌರವ ನಿಮಗೂ ದೊರೆಯಲಿದೆ. ಪ್ರಯಾಣಗಳಲ್ಲಿ ಹಾನಿ ಉಂಟಾಗಬಹುದು. ಎಚ್ಚರದಿಂದಿರಿ.

ಶ್ರೀ ಸುಬ್ರಹ್ಮಣ್ಯಸ್ವಾಮಿ ದರ್ಶನ. ಶುಭ ಸಂಖ್ಯೆ-1

### ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಹಿತೈಷಿಗಳೊಂದಿಗೆ ಸಮಾಗಮವಾಗಿ ಮೈಮನಸ್ಸುಗಳು ಪ್ರಫುಲ್ಲವಾಗಿರುವುದು. ಕೌಟುಂಬಿಕ ಸಮಸ್ಯೆಗಳಿಗೆ ಪರಿಹಾರ ದೊರಕುವುದು. ನೂತನ ರೀತಿಯ ವಸ್ತ್ರ ವಿನ್ಯಾಸಕಾರರಿಗೆ ಭರಪೂರ ಕೆಲಸವೂ, ಧನಲಾಭವೂ ಆಗುವುದು. ಫ್ಯಾನ್ಸಿ ಅಂಗಡಿಯವರಿಗೆ ವ್ಯಾಪಾರದಲ್ಲಿ ಹೆಚ್ಚಳ ಹಾಗೂ ಧನಾದಾಯ. ಆಹಾರ ವ್ಯತ್ಯಾಸದಿಂದ ಆರೋಗ್ಯಕ್ಕೆ ತೊಂದರೆ.

ಶ್ರೀ ಶಕ್ತಿ ದೇವತೆ ದರ್ಶನ. ಶುಭ ಸಂಖ್ಯೆ-4

### ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಭಾಗ್ಯ ಬಂದಾಗ ಕಣ್ಣು ಮುಚ್ಚಿ ಕೂರಬೇಡಿ. ಸಮಾಜದಲ್ಲಿ ಪ್ರತಿಷ್ಠಿತ ಸ್ಥಾನ ಲಭ್ಯವಾಗಲಿದೆ. ಟೂರಿಸಂ ಸಂಸ್ಥೆಗಳಿಗೆ ನಿರೀಕ್ಷೆ ಮೀರಿ ಪ್ರವಾಸಿಗರೂ, ಧನಲಾಭವೂ ಆಗುವುದು. ಒಳ್ಳೆಯ ಮಾತಿನಿಂದ ಸಮಸ್ಯೆ ಪರಿಹಾರ. 'ಮಾತೆ ಮುತ್ತು ಮಾತೇ ಮೃತ್ಯು'. ಉದ್ಯೋಗ ಸಂಬಂಧಿ ಸಂದರ್ಶನಗಳು ಸಫಲವಾಗುವುದು. ಮಾತೃಶ್ರೀಯವರ ಆರೋಗ್ಯದಲ್ಲಿ ವ್ಯತ್ಯಯ, ವೈದ್ಯರ ಭೇಟಿ ಅನಿವಾರ್ಯವಾಗುವುದು.

ಶ್ರೀ ವೆಂಕಟೇಶ್ವರಸ್ವಾಮಿ ಆರಾಧನೆ, ಶುಭ ಸಂಖ್ಯೆ-3

### ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ಈ ವಾರದಲ್ಲಿ ಉನ್ನತಾಧಿಕಾರಿಗಳನ್ನು ಭೇಟಿ ಮಾಡುವುದರಿಂದ ಶುಭ ಫಲವನ್ನು ಹೊಂದುವಿರಿ. ಯತ್ನ ಕಾರ್ಯಗಳು ನಿಧಾನಗತಿಯಲ್ಲಿ ಸಾಗಿದರೂ ಗುರಿಯನ್ನು ಮುಟ್ಟುವಿರಿ. ಸಕಲರೊಡನೆ ಆದರ-ಪ್ರೀತಿಗಳು ನಿಮ್ಮ ಉನ್ನತಿಗೆ ಕಾರಣವಾಗುವುದು. ಸ್ಥಿರಾಸ್ತಿ ಮಾರಾಟದಿಂದ ಲಾಭ ಅಸಹಾಯಕರಿಗೆ ಸಹಾಯ ಮಾಡಿ ಇತರರ ಮಾತಿಗೆ ಮರುಳಾಗದಿರಿ. ಕುಟುಂಬದಲ್ಲಿನ ಕಲಹಗಳನ್ನು ಸಮಾಧಾನ ಚಿತ್ತದಿಂದ ಪರಿಹರಿಸಿಕೊಳ್ಳಿ.

ಶ್ರೀ ಸಪ್ತಮಾತೃಕಾ ಪೂಜೆ. ಶುಭ ಸಂಖ್ಯೆ-8

### ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಶುಭ ಫಲ ದೊರೆಯುವ ಶುಭ ಸೂಚನೆಗಳು ಗೋಚರಿಸುತ್ತಿದೆ. 'ಧೈರ್ಯಂ ಸರ್ವತ್ರ ಸಾಧನಂ. ಹಿಂದೆ ಆಗಿದ್ದಕ್ಕೆ ಚಿಂತಿಸುತ್ತಾ ಕೂರದಿರಿ. ವ್ಯಾಪಾರ, ವ್ಯವಹಾರಗಳು ಚುರುಕಾಗಿ ನಡೆದು ಹೆಚ್ಚಿನ ಧನಲಾಭವಾಗುವುದು. ಅಧ್ಯಾಪಕ ವೃತ್ತಿಯವರಿಗೆ ಬಡ್ತಿ ದೊರೆಯುವ ಸಾಧ್ಯತೆ ಇದೆ. ವಿದೇಶದಲ್ಲಿ ಉದ್ಯೋಗ ಲಭಿಸಬಹುದು. ಯಾವುದೇ ಮಿಷನರಿಗಳ ಮೇಲೆ ಕೆಲಸ ಮಾಡುವಾಗ ಜಾಗ್ರತೆ ಇರಲಿ.

ಶ್ರೀ ನವಗ್ರಹ ಪ್ರದಕ್ಷಿಣೆ. ಶುಭ ಸಂಖ್ಯೆ-9

### ಕನ್ಯಾ (ಟೊ.ಪ.ಪಿ.ಪು.ಫ.ಣ.ಠ.ಪೆ.ಪೊ)

ಚಂದ್ರಗ್ರಹ ಪ್ರಭಾವದಿಂದ ಸಾಮಾಜಿಕ ಗೌರವಾದರಗಳಿಗೆ ಭಾಜನರಾಗುವಿರಿ. ಮುತ್ತು-ಹವಳ ವ್ಯಾಪಾರಿಗಳಿಗೆ ಹೆಚ್ಚಿನ ಲಾಭವನ್ನು ತರುವುದು. ಹತ್ತಿ ಬೆಳೆದ ರೈತರ ಮುಖದಲ್ಲಿ ಮಂದಹಾಸ ಮೂಡುವುದು. ಶನಿದೇವ ಸಪ್ತಮಕ್ಕೆ ಬಂದಾಗಿದೆ. ಎಲ್ಲರೊಡನೆಯೂ ಗಂಟೂ ಉಳಿಯಬೇಕು, ನಂಟೂ ಉಳಿಯಬೇಕು; ಎಂಬ ನಾಣ್ಣುಡಿಯಂತೆ ನಡೆದುಕೊಳ್ಳಿ. ಶ್ರೀಮತಿಯೊಡನೆ ಸವಿಮಾತು ಇರಲಿ.

ಶ್ರೀ ಶಮೀವೃಕ್ಷ ಪ್ರದಕ್ಷಿಣೆ. ಶುಭ ಸಂಖ್ಯೆ-7

### ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಕುಟುಂಬ ಜವಾಬ್ದಾರಿಗಳನ್ನು ಸರಿಯಾಗಿಯೇ ನಿಭಾಯಿಸಿದರೂ ತೊಂದರೆಗೆ ಒಳಪಡುವಿರಿ. ಕೆಲವೊಮ್ಮೆ ಆತುರಗಾರನಿಗೆ ಬುದ್ಧಿ ಮಟ್ಟ ಎಂಬಂತೆ ನಡೆದು ನಂತರ ಪಶ್ಚಾತ್ತಾಪ ಪಡುವುದು ಜಾಣತನವಲ್ಲ. ಅಷ್ಟಮ ಗುರುವಿನಿಂದ ದೇಹ ಸ್ವಾಸ್ಥ್ಯ ಕೆಡಬಹುದು. ಆಹಾರ-ವಿಹಾರಗಳಲ್ಲಿ ಕಂಟ್ರೋಲ್ ಇರಲಿ. ವಾರದ ಕಡೆಗೆ ಉತ್ತಮರ ಸಹವಾಸ, ಮಾರ್ಗದರ್ಶನಗಳಿಂದ ಧನ ಸಂಪಾದನೆಯ ಮಾರ್ಗ ತೆರೆದುಕೊಳ್ಳುವುದು.

ಶ್ರೀ ಲಕ್ಷ್ಮಿ ಅಷ್ಟಕ ಪಠಿಸಿ, ಶುಭ ಸಂಖ್ಯೆ-4

### ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ)

ವಾರದಾರಂಭಕ್ಕೆ ನವಮ ಚಂದ್ರನಿಂದ ನಿರೀಕ್ಷಿತ ಧನ ಕೈಸೇರುವುದು. ಧಾರ್ಮಿಕ ಉತ್ಸವ ಜಾತ್ರೆಗಳಲ್ಲಿ ಭಾಗಿಯಾಗುವಿರಿ, ಮಾತು ಮತ್ತು ಮನಸ್ಸು ಸ್ವಚ್ಛವಾಗಿರುವುದು. ಗುರುಬಲವೂ ಇರುವುದರಿಂದ ಉತ್ತಮ ಭೋಜನ, ಶಯನ ಸುಖಗಳನ್ನು ಅನುಭವಿಸುವಿರಿ. ವಾರದ ಉತ್ತರಾರ್ಧಕ್ಕೆ ಸಾಧನೆಯ ಹಾದಿ ಸುಗಮವಲ್ಲ ಅನ್ನಿಸುವುದು. ಹಾಸಿಗೆ ಇದ್ದಷ್ಟು ಕಾಲುಚಾಚಿ. ನುಡಿದಂತೆ ನಡೆಯಿರಿ.

ಶ್ರೀ ನೃಸಿಂಹಸ್ವಾಮಿ ದರ್ಶನ. ಶುಭ ಸಂಖ್ಯೆ-7

### ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ವಾರದಾರಂಭಕ್ಕೆ ದ್ರವ್ಯಲಾಭ, ಕ್ಷೇಮ ಸಮಾಚಾರ ಬರುವುದು. ನಿಮ್ಮ ಸಾಧನೆಗೆ ಅನೇಕ ಮಾರ್ಗಗಳು ತೆರೆದಿವೆ. ಎಣ್ಣೆ ಬಂದಾಗ ಕಣ್ಣು ಮುಚ್ಚಿ ಕುಳಿತರು ಎಂಬ ಗಾದೆಯಂತೆ ಇರಬೇಡಿ. ಆದರೆ ಚತುರ್ಥ ಶನಿಯ ಸತ್ವ ಪರೀಕ್ಷೆಗಳನ್ನೂ ಎದುರಿಸಲು ಸಿದ್ಧರಿರಿ. ಸರ್ಕಾರಿ ಅಧಿಕಾರಿಗಳಿಗೆ ತನಿಖಾ ಸಂಸ್ಥೆಗಳ ಬಿಸಿ ತಟ್ಟುವುದು. ವ್ಯಾಪಾರ ವಹಿವಾಟುಗಳಲ್ಲಿ ನಷ್ಟವನ್ನು ಅನುಭವಿಸುವಿರಿ.

ಶ್ರೀ ಶನ್ಯಾಷ್ಟೋತ್ತರ ಪಠಿಸಿ, ಶುಭ ಸಂಖ್ಯೆ-8

### ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಹೊಸ ಸಂವತ್ಸರ ಹೊಸ ಹರುಷ ತರಲಿದೆ. ಕಾರಣ ನಿಮಗೆ ಸಾಡೇಸಾತಿಯಿಂದ ಮುಕ್ತಿ ದೊರಕಿದೆ. ವೈಯಕ್ತಿಕ ಕ್ಷೇತ್ರದಲ್ಲಿ ಅಭಿವೃದ್ಧಿಯನ್ನು ಸಾಧಿಸುವಿರಿ. ಹೊಸ ಹೂಡಿಕೆಗಳನ್ನು ಸಂಕೋಚವಿಲ್ಲದೆ ಮಾಡಬಹುದು. ಸರ್ಕಾರಿ ನೌಕರರಿಗೆ ಪದೋನ್ನತಿಯ ಜೊತೆಗೆ ವರ್ಗಾವರ್ಗಿ ಆಗುವುದು. ಕೃಷಿಕರಿಗೂ, ಕೃಷಿ ಉಪಕರಣ ಮಾರಾಟಗಾರರಿಗೂ ನಿರೀಕ್ಷೆ ಮೀರಿ ಲಾಭವಾಗುವುದು.

ಶ್ರೀ ಶಿವ ಪಂಚಾಕ್ಷರಿ ಜಪಿಸಿ. ಶುಭ ಸಂಖ್ಯೆ-2

### ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಈ ವಾರದಲ್ಲಿ ಆರ್ಥಿಕ ಪರಿಸ್ಥಿತಿಯಲ್ಲಿ ಗಣನೀಯ ಮುನ್ನಡೆಯನ್ನು ಸಾಧಿಸುವಿರಿ. ಖಾಸಗಿ ಕಂಪನಿ ಉದ್ಯೋಗಿಗಳಿಗೆ ಬೋನಸ್ ಇತ್ಯಾದಿ ಧನ ಲಾಭ. ಹೊಸ ಯೋಜನೆಗಳನ್ನು ಆರಂಭಿಸಲು ಗ್ರಹಗಳ ಅನುಕೂಲವಿದೆ. ನ್ಯಾಯಾಲಯದ ವಿಚಾರಗಳು ಮಂದಗತಿಯಲ್ಲಿ ಸಾಗುವುದು. ಅನವಶ್ಯಕ ತಿರುಗಾಟಗಳನ್ನು ಕೈಬಿಡಿ. ಡ್ರೈವಿಂಗ್ ಮಾಡುವಾಗ ನಿಮ್ಮನ್ನು ಪ್ರೀತಿಸುವವರು ಮನೆಯಲ್ಲಿ ಇದ್ದಾರೆ ಎಂಬುದು ನೆನಪಿರಲಿ.

ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ-1

### ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ವಾರದಾರಂಭಕ್ಕೆ ಶುಭ ಫಲವನ್ನು ಅನುಭವಿಸುವಿರಿ. ಸ್ಥಿರಾಸ್ತಿ ಮಾರಾಟದಿಂದ ಧನ ಸಂಗ್ರಹ. ರಿಯಲ್ ಎಸ್ಟೇಟ್ ವ್ಯವಹಾರಗಳಲ್ಲಿ ಲಾಭ ಗಳಿಕೆಯನ್ನು ನಿರೀಕ್ಷಿಸಬಹುದು. ಗೃಹ ಸಂಬಂಧಿ ವಿಚಾರಗಳಲ್ಲಿ ಭಿನ್ನಾಭಿಪ್ರಾಯಗಳು ಉಂಟಾಗಬಹುದು. ಜಾಣ್ಮೆಯಿಂದ ನಿಭಾಯಿಸಿ. ನಿಮ್ಮ ರಾಶಿಗೆ ಶನಿದೇವನ ಪ್ರವೇಶವಾಗಿದೆ. ಕಡ್ಡಿಯನ್ನು ಗುಡ್ಡ ಮಾಡದಿರಿ. ಕಳ್ಳ ಕಾಕರಿಂದ ಜಾಗೃತರಾಗಿರಿ.

ಶ್ರೀ ರಾಘವೇಂದ್ರ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-3

# ಬಾಬೂಜಿ, ಅಂಬೇಡ್ಕರ್ ದಲಿತರ ಕಣ್ಣುಗಳು

## ತಿ.ನರಸೀಪುರದಲ್ಲಿ ತಾಲೂಕು ಆಡಳಿತದಿಂದ ಬಾಬೂಜಿ ಜಯಂತಿ ಆಚರಣೆ

ತಿ.ನರಸೀಪುರ, ಏ.5– ಬಾಬು ಜಗಜೀವನರಾಂ ಎಂಬುದು ಕೇವಲ ಹೆಸರಲ್ಲ, ಅದೊಂದು ಅದ್ಭುತ ಶಕ್ತಿಯಾಗಿದ್ದು, ಬಾಬೂಜಿ ಹಾಗೂ ಡಾ.ಅಂಬೇಡ್ಕರ್ ದಲಿತ ಸಮುದಾಯದ ಎರಡು ಕಣ್ಣುಗಳಿದ್ದಂತೆ ಎಂದು ಪುರಸಭೆ ಸದಸ್ಯ ಅರ್ಜುನ್ ರಮೇಶ್ ಬಣ್ಣಿಸಿದರು.


ಡಾ.ಬಾಬು ಜಗಜೀವನರಾಂ ಅವರ 118ನೇ ಜಯಂತಿ ಕಾರ್ಯಕ್ರಮವನ್ನು ತಹಸೀಲ್ದಾರ್ ಟಿ.ಜಿ.ಸುರೇಶಾಚಾರ್ ಉದ್ಘಾಟಿಸಿದರು.

ತಾಲೂಕು ಆಡಳಿತ, ತಾಲೂಕು ಪಂಚಾಯ್ತಿ, ಪುರಸಭೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಹಯೋಗದೊಂದಿಗೆ ಪಟ್ಟಣದ ತಾಲೂಕು ಪಂಚಾಯ್ತಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಹಸಿರುಕ್ರಾಂತಿಯ ಹರಿಕಾರ, ಮಾಜಿ ಉಪ ಪ್ರಧಾನಿ ಡಾ.ಬಾಬು ಜಗಜೀವನರಾಂ ಅವರ 118ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಅವರು ಮಾತನಾಡಿದರು.

ಸಂವಿಧಾನದಡಿಯಲ್ಲಿ ನಾವು ಇಂದು ಏನೇನು ಸೌಲಭ್ಯಗಳನ್ನು ಪಡೆಯುತ್ತಿದ್ದೇವೋ ಅದಕ್ಕೆ ಈ ಮಹಾನ್ ನಾಯಕರು ನೀಡಿದ ಕೊಡುಗೆ ಕಾರಣ, ಹಾಗಾಗಿಯೇ ಇವರಿಬ್ಬರೂ ದಲಿತ ಸಮಾಜದ ಎರಡು ಕಣ್ಣುಗಳಿದ್ದಂತೆ ಎಂದ ಅವರು, ದೇಶಾದ್ಯಂತ 'ಬಾಬೂಜಿ' ಎಂದೇ ಕರೆಯಲ್ಪಡುವ ಜಗಜೀವನ ರಾಮ್ ಧೀಮಂತ ರಾಷ್ಟ್ರೀಯ ನಾಯಕ, ಸ್ವಾತಂತ್ರ್ಯ ಮತ್ತು ಸಾಮಾಜಿಕ ನ್ಯಾಯ ಹೋರಾಟಗಾರ ಹಾಗೂ ಅತ್ಯುತ್ತಮ ಸಂಸದೀಯ ಪಟುವಾಗಿದ್ದರು. ಬಾಬು ಜಗಜೀವನ ರಾಮ್ ಅವರು ಸ್ವಾತಂತ್ರ್ಯ ಹೋರಾಟಗಾರರಾಗಿ, ಸಂವಿಧಾನ ರಚನಾ ಸಭೆಯ ಸದಸ್ಯರಾಗಿ ಮತ್ತು ಮೊದಲ ಉಪ ಪ್ರಧಾನಿಯಾಗಿ ನಮ್ಮ ದೇಶಕ್ಕೆ ಮಹತ್ತರ ಕೊಡುಗೆ ನೀಡಿದ್ದಾರೆ ಎಂದರು.

ಮುಂದೆ ದಲಿತ ನಾಯಕರಾಗಿ ರೂಪುಗೊಂಡ ಜಗಜೀವನ ರಾಮ್ ಅವರಿಗೆ ಬಿಹಾರ ಕಾರ್ಯಕ್ಷೇತ್ರವಾಯಿತು. ಗಾಂಧೀಜಿಯವರು ಆರಂಭಿಸಿದ್ದ ಅಸ್ಪೃಶ್ಯತೆಯ ವಿರುದ್ಧದ ಹೋರಾಟದಲ್ಲಿ ರಾಮ್ ಪಾಲ್ಗೊಂಡರು. 1935ರಲ್ಲಿ ದಲಿತರ ಸಮಾನತೆಗಾಗಿ ಹೋರಾಡುವ ಉದ್ದೇಶದಿಂದ ಅಖಿಲ ಭಾರತ ದಮನಿತ ವರ್ಗಗಳ ಒಕ್ಕೂಟವನ್ನು ಸ್ಥಾಪಿಸುವಲ್ಲಿ ಜಗಜೀವನ್ ರಾಮ್ ಅವರು ನಿರ್ವಹಿಸಿದ ಪಾತ್ರ ಮಹತ್ವದಾಗಿತ್ತು.

ಜಗಜೀವನ್‌ರಾಮ್ ಅವರು ದೀರ್ಘಕಾಲ ಸೇವೆ ಸಲ್ಲಿಸಿದ ಕ್ಯಾಬಿನೆಟ್ ಮಂತ್ರಿ ಎಂಬ ದಾಖಲೆಯನ್ನು ಹೊಂದಿದ್ದಾರೆ. 1952ರಲ್ಲಿ ನಡೆದ ಮೊದಲ ಚುನಾವಣೆಯಿಂದ ಹಿಡಿದು 34 ವರ್ಷಗಳ ಕಾಲ ನಿರಂತರ ಸಂಸದರಾಗಿ ಸೇವೆ ಸಲ್ಲಿಸಿದರು. 1986ರಲ್ಲಿ ಅವರು ಮರಣ ಹೊಂದುವವರೆಗೂ ಸಂಸತ್ತಿನಲ್ಲಿ ಸದಸ್ಯರಾಗಿದ್ದರು ಎಂದು ತಿಳಿಸಿದರು.

ವಿಧಾನಪರಿಷತ್ತಿನ ಮಾಜಿ ಸದಸ್ಯ ಸಿ. ರಮೇಶ್ ಮಾತನಾಡಿ, ಜವಾಹರಲಾಲ್ ನೆಹರು ಅವರ ಮೊದಲ ಸಂಪುಟದ ಸದಸ್ಯರಾಗಿದ್ದ ಜಗಜೀವನ್ ರಾಮ್, ಅತ್ಯಂತ ಕಿರಿಯ ಸಚಿವರಾಗಿದ್ದರು ಮತ್ತು ಭಾರತದ ಸಂವಿಧಾನ ಸಭೆಯ ಸದಸ್ಯರೂ ಆಗಿದ್ದರು. ಕೆಲವೇ ಜನರು ಮಾತ್ರ ಸಾಮಾಜಿಕ ನ್ಯಾಯದ ತತ್ವಗಳನ್ನು ಬಲವಾಗಿ ಒತ್ತಿ ಹೇಳಿದರು.

1937ರಲ್ಲಿ ಬಿಹಾರದ ವಿಧಾನಸಭೆಗೆ ಸೇರಿದ ನಂತರ ಗ್ರಾಮೀಣ ಕಾರ್ಮಿಕರ ಕ್ಷೇತ್ರಕ್ಕೆ ಸಂಘಟನೆಯನ್ನು ಸಮರ್ಥವಾದ ಹಲವಾರು ಚಳವಳಿಗಳನ್ನು ಆಯೋಜಿಸುವ ಮೂಲಕ ಅವರು ಜನಪ್ರಿಯರಾಗಿದ್ದರು.

ನಂತರ, ಅವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸೇರಿದರು, ಅಲ್ಲಿ ಅವರು ನೀಡುವ ಮಾರ್ಗಗಳಿಗೂ ಹೆಚ್ಚು ಕಾಲ ಅನೇಕ ಖಾತೆಗಳಲ್ಲಿ ಪೂರ್ಣ ಹುದ್ದೆಯಿಂದ ಕೆಲಸ ಮಾಡಿದರು.


ಈ ದಲಿತ ನಾಯಕನ ಉಗ್ರ ಪ್ರರ್ಚನವು ಭಾರತದ ಪ್ರತಿಯೊಬ್ಬ ನಾಗರಿಕ ಮತ್ತು ಅವರ ವ್ಯಕ್ತಿತ್ವಕ್ಕೆ ನೀಡಿದ ಕೊಡುಗೆಗಳಿಗಾಗಿ ಆಚರಣೆಗಳಿಗೆ ಕಾರಣವಾಯಿತು ಸಮಾಜ ಸುಧಾರಣೆ ಹಾಗೂ ಎಲ್ಲರೂ ಸಮಾನವಾಗಿ ಜೀವನ ನಡೆಸಬೇಕು ಎನ್ನುವ ಮಹತ್ವಾಕಾಂಕ್ಷೆಯನ್ನು ಅವರು ಹೊಂದಿದ್ದರು. ಕಾರ್ಮಿಕರ ಏಳಿಗೆಯನ್ನು ಸದಾ ಬಯಸುತ್ತಿದ್ದರು. ದೇಶದ ಜನರು ಆಹಾರ ಕೊರತೆ ಅನುಭವಿಸುತ್ತಿರುವುದನ್ನು ಕಂಡು ಹಸಿರುಕ್ರಾಂತಿ ಪ್ರಾರಂಭಿಸಿ ನೆರವಾದರು ಎಂದು ತಿಳಿಸಿದರು.

ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಸಾಧಕರನ್ನು ಗೌರವಿಸಲಾಯಿತು.

ತಹಸೀಲ್ದಾರ್ ಸುರೇಶ್ ಆಚಾರ್, ಬಾಬು ಜಗಜೀವನರಾಂ ಸಂಘದ ಅಧ್ಯಕ್ಷ ಪುಟ್ಟಣ್ಣ, ಮೂಗೂರು ಸಿದ್ದರಾಜು, ಕೊಂಬಿಟ್ಟ ಮಹದೇವಯ್ಯ, ಬನ್ನೂರು ನಾರಾಯಣ್ ಪುರಸಭಾ ಸದಸ್ಯ ಎಲ್.ಮಂಜುನಾಥ್, ತಾಲೂಕು ಕುರುಬರ ಅಧ್ಯಕ್ಷ ಮನ್ನೆಹುಂಡಿ ಮಹೇಶ್, ಕೆ.ಎನ್.ಪ್ರಭುಸ್ವಾಮಿ, ಗ್ರಾಪಂ ಸದಸ್ಯ ವಿಜಾಪುರ ಕೆ.ಬಿ.ಮಹೇಶ್, ಆಲಗೂಡು ಶಿವಕುಮಾರ್, ಪುಟ್ಟಸ್ವಾಮಿ, ಎನ್.ನಾಗರಾಜು, ಸೋಸಲೆ ಶಿವಕುಮಾರ್ (ಬಡ್ಡ), ರಾಜಶೇಖರ್, ಸೋಮಣ್ಣ ಹಿಡ್ಡೂಪ್ಪ ಇಂಜಿನಿಯರ್ ಸತೀಶ್ ಚಂದ್ರ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಗೋವಿಂದರಾಜು, ಇಒ ಅನಂತ ರಾಜು, ಆಲಗೂಡು ನಾಗರಾಜು, ಮತ್ತಿತರರಿದ್ದರು.

## ಇಂದು ಚುಂಚನಕಟ್ಟೆಯಲ್ಲಿ ಶ್ರೀ ರಾಮನವಮಿ ಉತ್ಸವ

**ಚುಂಚನಕಟ್ಟೆ:** ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆ ಕೋದಂಡರಾಮ ದೇವಾಲಯದಲ್ಲಿ ಭಾನುವಾರ(ಏ.6) ಶ್ರೀರಾಮ ನವಮಿ ಉತ್ಸವ ನಡೆಯಲಿದೆ.



ಉತ್ಸವದ ಅಂಗವಾಗಿ ಸೀತಾ ಸಮೇತ ಶ್ರೀರಾಮ ದೇವರಿಗೆ ಬೆಳಿಗ್ಗೆ 5 ಗಂಟೆಗೆ ಪಂಚಾಮೃತ ಅಭಿಷೇಕ, ತೋಮಾಲೆ ಸೇವೆ, ಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿತರಣೆ ನಡೆಯಲಿದೆ.

8.30ಕ್ಕೆ ರಾಮ ತಾರಕ ಹೋಮ 11.30ಕ್ಕೆ ಪೂರ್ಣಾಹುತಿ ತೀರ್ಥ ಪ್ರಸಾದ ಮತ್ತು ಮಧ್ಯಾಹ್ನ 12.30ಕ್ಕೆ ದೇವರ ಉತ್ಸವ ಹಾಗೂ ಮಹಾ ಮಂಗಳಾರತಿ ಏರ್ಪಡಿಸಲಾಗಿದೆ.

ಆನಂತರ ದೇವಾಲಯ, ಭಕ್ತರು ಮತ್ತು ಸೇವಾರ್ಥದಾರರಿಂದ ಪಾನಕ ಮಜ್ಜಿಗೆ ಸೇರಿದಂತೆ ಪ್ರಸಾದ ವಿತರಣೆ ಮಾಡಲಾಗುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ಸುತ್ತೂರಿನಲ್ಲಿ ಬಾಬೂಜಿ ಜನ್ಮದಿನ ಆಚರಣೆ


ನಂಜನಗೂಡು ತಾಲೂಕು ಸುತ್ತೂರಿನ ಸಾರ್ವಜನಿಕರ ಬಸ್ ನಿಲ್ದಾಣದಲ್ಲಿ ಜಗಜೀವನ ರಾಮ್ ಜನ್ಮದಿನವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಅಧಿಕಾರಿ ಬಸವರಾಜ್.ಎಸ್.ಸಿ ಮತ್ತು ಗ್ರಾಮದ ಶ್ರೀ ದೊಡ್ಡಮ್ಮತಾಯಿ ಆಟೋ ಮಾಲೀಕರ ಸಂಘದ ವತಿಯಿಂದ ಸಿಹಿ ತಿಂಡಿಯನ್ನು ವಿತರಿಸಲಾಯಿತು.

# ಬೆಲೆ ಏರಿಕೆ ಖಂಡಿಸಿ ನಂ.ಗೂಡಲ್ಲಿ ಬಿಜೆಪಿ ಪ್ರತಿಭಟನೆ

ನಂಜನಗೂಡು, ಏ.5– ಬೆಲೆ ಏರಿಕೆ ಹಾಗೂ 18 ಜನ ಶಾಸಕರನ್ನು ಅನರ್ಹಗೊಳಿಸಿರುವ ನಡೆಯನ್ನು ಖಂಡಿಸಿ ಬಿಜೆಪಿ ಕಾರ್ಯಕರ್ತರು ಶನಿವಾರ ಪ್ರತಿಭಟನೆ ನಡೆಸಿದರು.

ನಗರದ ಹುಲ್ಲಹಳ್ಳಿ ವೃತ್ತದ ಬಳಿ ಜಮಾಮಗೊಂಡ ಬಿಜೆಪಿ ಪಕ್ಷದ ಕಾರ್ಯಕರ್ತರು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಕಾಂಗ್ರೆಸ್ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ, ಆಕ್ರೋಶ ವ್ಯಕ್ತಪಡಿಸಿದರು.



ಬೆಲೆ ಏರಿಕೆ ಖಂಡಿಸಿ ನಂ.ಗೂಡಿನಲ್ಲಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮಾಜಿ ಶಾಸಕ ಬಿ.ಹರ್ಷವರ್ಧನ್ ಮಾತನಾಡಿ, ಕಾಂಗ್ರೆಸ್ ಸರ್ಕಾರ ಡೀಸೆಲ್ ಬೆಲೆಯನ್ನು ಎರಡು ರೂಪಾಯಿಗೆ ಏರಿಕೆ ಮಾಡಿರುವುದರಿಂದ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗಿ ಜನ ಕಂಗಾಲಾಗಿದ್ದಾರೆ, ಅಲ್ಲದೆ ಹಾಲಿನ ಬೆಲೆ ಏರಿಕೆ ಮಾಡಿ ರೈತರಿಗೂ ಸಹ ಹಣ ನೀಡದೆ ವಂಚಿಸಲಾಗುತ್ತಿದೆ. ಇನ್ನು ಬಸ್ ದರ, ವಿದ್ಯುತ್ ದರ, ಅಬಕಾರಿ ಸುಂಕ, ಮುದ್ರಾಂಕ ಶುಲ್ಕ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡುವ ಮೂಲಕ ಜನರ ಮೇಲೆ ಹೊರೆ ಹೊರಿಸಲಾಗಿದೆ, ಜೊತೆಗೆ ಎಸ್ಸಿ, ಎಸ್ಟಿ, ಸಮುದಾಯದ 36 ಸಾವಿರ ಕೋಟಿ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ದುರ್ಬಳಕೆ ಮಾಡಿಕೊಳ್ಳುವ ಮೂಲಕ ಎಸ್ಸಿ ಎಸ್ಟಿ ಸಮುದಾಯಕ್ಕೆ ವಂಚನೆ ಮಾಡಲಾಗಿದೆ. ಕಾಂಗ್ರೆಸ್ ಸರ್ಕಾರದ ಯುವ ನಿಧಿ ಯೋಜನೆ ಕೂಡ ಸರಿಯಾಗಿ ತಲುಪುತ್ತಿಲ್ಲ, ಇಂತಹ ಜನ ವಿರೋಧಿ ಕಾಂಗ್ರೆಸ್ ಸರ್ಕಾರ ತೊಲಗುವವರೆಗೂ ನಮ್ಮ ಹೋರಾಟ ನಿಲ್ಲುವುದಿಲ್ಲ ಎಂದರು.

ಜಿ.ಪಂ. ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ ಮಾತನಾಡಿ ಕಾಂಗ್ರೆಸ್ ಸರ್ಕಾರದ ಜನ ವಿರೋಧಿ ನಡೆಯನ್ನು ಖಂಡಿಸಿ ಏ.7ರ ಸೋಮವಾರ ಮೈಸೂರಿನಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ಬೃಹತ್ ಜನಾಕ್ರೋಶ ಯಾತ್ರೆಯನ್ನು ಹಮ್ಮಿಕೊಂಡಿದ್ದು, ಆ ದಿನ ಹೆಚ್ಚಿನ ಸಂಖ್ಯೆಯಲ್ಲಿ ಪಕ್ಷದ ಕಾರ್ಯಕರ್ತರು ಮತ್ತು ಜನಸಾಮಾನ್ಯರು ಸೇರಿ ಕಾಂಗ್ರೆಸ್ ಸರ್ಕಾರದ ಜನವಿರೋಧಿ ನೀತಿಯನ್ನು ಜನರಿಗೆ ಮನವರಿಕೆ ಮಾಡಿಕೊಡಲಾಗುವುದು ಎಂದರು.

ಪ್ರತಿಭಟನೆಯಲ್ಲಿ ಬಿಜೆಪಿ ತಾಲೂಕು ಅಧ್ಯಕ್ಷ ಕೆಂಡಗಣ್ಣಪ್ಪ, ಕಾರ್ಯದರ್ಶಿ ವಳಗೆರೆಪುಟ್ಟಸ್ವಾಮಿ, ಸಿದ್ದರಾಜು, ನಗರಸಭಾ ಸದಸ್ಯ ಎಚ್.ಎಸ್.ಮಹದೇವಸ್ವಾಮಿ, ಮಹೇಶ್ ಅತ್ತಿಖಾನೆ, ತಾಪಂ ಮಾಜಿ ಸದಸ್ಯ ಹೆಮ್ಮರಗಾಲ ಶಿವಣ್ಣ ಹುಲ್ಲಹಳ್ಳಿ ಶಿವಣ್ಣ ಮುಖಂಡರಾದ ಬಾಲಚಂದ್ರ ಉಪಸ್ಥಿತರಿದ್ದರು.

# ಹೆಚ್.ಡಿ.ಕೋಟೆ ತಾಲೂಕಿನ ಎಲ್ಲಾ ಗ್ರಾಮಗಳಲ್ಲಿ ಬಾಬು ಜಗಜೀವನರಾಂ ಸಮುದಾಯ ಭವನ ನಿರ್ಮಾಣ

**ಹೆಚ್.ಡಿ.ಕೋಟೆ:** ಬಾಬು ಜಗಜೀವನ್ ರಾಮ್ ಅವರು ಚಿಕ್ಕ ವಯಸ್ಸಿಗೆ ರಾಜಕೀಯಕ್ಕೆ ಬಂದು ಕಾರ್ಮಿಕ ಸಚಿವರಾಗಿ ಈ ದೇಶಕ್ಕೆ ಕೊಟ್ಟಂತ ಕೊಡುಗೆ ಅಪಾರ ಎಂದು ಶಾಸಕ ಅನಿಲ್ ಚಿಕ್ಕಮಾದು ಶ್ಲಾಘಿಸಿದರು.

ಪಟ್ಟಣದಲ್ಲಿರುವ ಆಡಳಿತ ಸೌಧದ ಸಭಾಂಗಣದಲ್ಲಿ, ತಾಲೂಕು ಆಡಳಿತ, ತಾಲೂಕು ಪಂಚಾಯಿತಿ ಪುರಸಭೆ ಮತ್ತು ಸಮಾಜ ಕಲ್ಯಾಣ ಇಲಾಖೆಯ ಸಂಯುಕ್ತಾಶ್ರಯದಲ್ಲಿ ರಾಷ್ಟ್ರ ನಾಯಕ ಡಾ.ಬಾಬು ಜಗಜೀವನರಾಂ ಅವರ 118ನೇ ಜನ್ಮದಿನಾಚರಣೆ ಆಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ, ಅವರು ಮಾತನಾಡಿದರು.


ಬಾಬೂಜಿ ಅವರ ಭಾವಚಿತ್ರಕ್ಕೆ ಶಾಸಕ ಅನಿಲ್ ಚಿಕ್ಕಮಾದು ಪುಷ್ಪಾರ್ಚನೆ ನೆರವೇರಿಸಿದರು.

ಇವರ ತತ್ವ ಆದರ್ಶಗಳನ್ನು ಪ್ರತಿಯೊಬ್ಬರು ಅಳವಡಿಸಿಕೊಂಡು ಶಿಕ್ಷಣ ಪಡೆದು ಐಎಎಸ್, ಕೆಎಎಸ್ ಅಧಿಕಾರಿಗಳಾಗಬೇಕು ಎಂದು ತಿಳಿಸಿ, ನಾನು ಮತ್ತು ನಮ್ಮ ಸರ್ಕಾರ ನಿಮ್ಮ ಪರವಾಗಿ ಧ್ವನಿಯಾಗಿರುತ್ತೇವೆ, ನಾನು ಈಗಾಗಲೇ ಕೋಟೆ ಮತ್ತು ಸರಗೂರು ತಾಲೂಕಿನ ಸಮುದಾಯ ಭವನಗಳಿಗೆ 5 ಕೋಟಿ ಅನುದಾನವನ್ನು ಬಿಡುಗಡೆ ಮಾಡಿದ್ದು ಮುಂದಿನ ದಿನಗಳಲ್ಲಿ ಸಮುದಾಯದ ಪ್ರತಿಯೊಂದು ಗ್ರಾಮಗಳಲ್ಲಿರುವ ಬಾಬು ಜಗಜೀವನರಾಂ ಸಮುದಾಯ ಭವನಕ್ಕೆ ಅನುದಾನವನ್ನು ಬಿಡುಗಡೆ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಬಾಬು ಜಗಜೀವರಾಂ ವಿಚಾರ ವೇದಿಕೆಯ ಅಧ್ಯಕ್ಷ ಸಿ.ತಿಮ್ಮಯ್ಯ ಮಾತನಾಡಿ, ಜಗಜೀವನ್ ರಾಮ್ ಅವರು ಹುಟ್ಟು ಹೋರಾಟಗಾರರು. ಕಾರ್ಮಿಕ ಮಂತ್ರಿಯಾಗಿ ಸಂಘಟನೆ ಮಾಡಿ ಕಾರ್ಮಿಕರಿಗೆ ಅನುಕೂಲ ವಾಗುವಂತಹ ಕೊಡುಗೆಗಳನ್ನು ಕೊಟ್ಟ ಪುಣ್ಯಪುರುಷ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬಾಬು ಜಗಜೀವರಾಂ ವಿಚಾರ ವೇದಿಕೆಯ ಮಾಜಿ ಅಧ್ಯಕ್ಷ ಪಿ. ನಾಗರಾಜು, ತಹಶೀಲ್ದಾರ್ ಶ್ರೀನಿವಾಸ್, ಗ್ರೇಡ್ 2 ತಹಶೀಲ್ದಾರ್ ಶ್ರೀಧರ್, ಇಓ ಧರಣೇಶ್, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ರಾಮಸ್ವಾಮಿ, ಅಧಿಕಾರಿಗಳಾದ ಮಹೇಶ್, ನೇತ್ರಾವತಿ, ಸರ್ಕಲ್ ಇನ್ಸ್‌ಪೆಕ್ಟರ್ ಗಂಗಾಧರ್, ಸಿಡಿಪಿಓ ದೀಪಾ, ಮುಖಂಡರುಗಳಾದ ಪರಶಿವಮೂರ್ತಿ, ಶಿವಯ್ಯ, ರಾಜೇಶ್ವರಿ, ರೂಪ, ಶಂಭುಲಿಂಗನಾಯಕ, ಪ್ರಕಾಶ್, ಡಿ. ನಾಗರಾಜು, ವೆಂಕಟೇಶ್, ಚೆಲುವರಾಜು, ಕಾಳಪ್ಪಾಜಿ.ಸಿ, ರವೀಶ್, ಮಹದೇವ, ಗಿರಿ ಪ್ರಸಾದ್, ರಾಜನಾಯಕ, ಮಹೇಂದ್ರ, ಶಿವರಾಜ್, ಶಿವಾಜಿ, ಉಮೇಶ್, ಸಣ್ಣಕುಮಾರ್, ಅನುಷಾ, ದೇವರಾಜು, ಶಿವಕುಮಾರ್, ಚಿಕ್ಕಸ್ವಾಮಿ, ಚೇತನ್, ಧರ್ಮ, ರಾಜಣ್ಣ, ಸೇರಿದಂತೆ ತಾಲೂಕಿನ ಎಲ್ಲಾ ಇಲಾಖೆಯ ಅಧಿಕಾರಿಗಳು ಎಲ್ಲಾ ಸಮುದಾಯದ ಸಮುದಾಯದ ಮುಖಂಡರು ಹಾಜರಿದ್ದರು.

# ಬೈಕಿಗೆ ಟಿಪ್ಪರ್ ಡಿಕ್ಕಿ: ಮಗ ಸಾವು, ತಂದೆಗೆ ತೀವ್ರ ಗಾಯ

## ಹೆಚ್.ಡಿ.ಕೋಟೆ ಬಳಿ ದುರಂತ

**ಹೆಚ್.ಡಿ.ಕೋಟೆ:** ಬೈಕಿಗೆ ಟಿಪ್ಪರ್ ಡಿಕ್ಕಿ ಹೊಡೆದ ಪರಿಣಾಮ ಮಗ ಸಾವನ್ನಪ್ಪಿ, ತಂದೆ ತೀವ್ರವಾಗಿ ಗಾಯಗೊಂಡಿರುವ ಘಟನೆ ಮೈಸೂರು–ಮಾನಂದವಾಡಿ ಮುಖ್ಯ ರಸ್ತೆಯ ಸೋಗಳ್ಳಿ ಗೇಟ್ ಬಳಿ ಸಂಭವಿಸಿದೆ.


ನಟರಾಜು

ತಾಲೂಕಿನ ಎನ್.ಬೆಳತೂರು ನಿವಾಸಿ ನಟರಾಜು(20) ಮೃತ ದುರ್ದೈವಿಯಾಗಿದ್ದು, ತೀವ್ರವಾಗಿ ಗಾಯಗೊಂಡಿರುವ ಮೃತನ ತಂದೆ ದಾಸನಾಯಕ ಅವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ನಟರಾಜು, ತಮ್ಮ ತಂದೆ ದಾಸನಾಯಕ ಅವರ ಜೊತೆ ಬೈಕ್‌ನಲ್ಲಿ ಕೆಲಸದ ನಿಮಿತ್ತ ಮೈಸೂರು–ಮಾನಂದವಾಡಿ ಮುಖ್ಯ ರಸ್ತೆಯಲ್ಲಿ ಅಂತರಸಂತೆಗೆ ತೆರಳುತ್ತಿದ್ದ ವೇಳೆ, ಮೈಸೂರು ಕಡೆಯಿಂದ ತೆರಳುತ್ತಿದ್ದ ಟಿಪ್ಪರ್ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲೇ ನಟರಾಜು ಸಾವನ್ನಪ್ಪಿದ್ದು, ತಂದೆ ದಾಸನಾಯಕ ಅವರಿಗೆ ತಲೆ ಭಾಗಕ್ಕೆ ತೀವ್ರ ಪೆಟ್ಟು ಬಿದ್ದ ಹಿನ್ನೆಲೆಯಲ್ಲಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ಸೇರಿಸಲಾಗಿದೆ.

ಹೆಚ್.ಡಿ.ಕೋಟೆ ಪಟ್ಟಣದ ಸರ್ಕಾರಿ ಆಸ್ಪತ್ರೆಯ ಶವಾಗಾರದಲ್ಲಿ ನಟರಾಜು ಮರಣೋತ್ತರ ಪರೀಕ್ಷೆ ನಡೆಸಿ ನಂತರ ವಾರಸುದಾರರಿಗೆ ಶವವನ್ನು ಹಸ್ತಾಂತರಿಸಲಾಯಿತು.

ಈ ಸಂಬಂಧ ಅಂತರಸಂತೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಪೊಲೀಸರು ತನಿಖೆ ಕೈಗೊಂಡಿದ್ದಾರೆ.

# ಹಸಿರು ಕ್ರಾಂತಿಯ ಹರಿಕಾರ ಬಾಬೂಜಿ ಹೆಸರು ಅಜರಾಮರ


ಬಾಬು ಜಗಜೀವನರಾಂ ಪ್ರತಿಮೆಗೆ ಶಾಸಕ ರವಿಶಂಕರ್ ಮಾಲಾರ್ಪಣೆ.

**ಕೆ.ಆರ್.ನಗರ:** ತಮ್ಮ ಜೀವಿತಾವಧಿಯಲ್ಲಿ ದೇಶದ ಏಳಿಗೆಗೆ ಅಪಾರವಾದ ಕೊಡುಗೆ ನೀಡಿ ಆಹಾರ ಕ್ರಾಂತಿಗೆ ಮುನ್ನುಡಿ ಬರೆದ ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನ ರಾಂ ಅವರ ಹೆಸರು ಅಜರಾಮರ ಎಂದು ಶಾಸಕ ಡಿ.ರವಿಶಂಕರ್ ಹೇಳಿದರು.

ಪಟ್ಟಣದ ಪುರಸಭೆಯ ಆವರಣದಲ್ಲಿ ನಡೆದ ಡಾ.ಬಾಬು ಜಗಜೀವನ ರಾಂ ಅವರ 118ನೇ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಹನೀಯರ ತತ್ವ ಮತ್ತು ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಅವರಿಗೆ ನಿಜವಾದ ಗೌರವ ಸಲ್ಲಿಸಿದಂತಾಗುತ್ತದೆ ಎಂದರು.

ಏ.25 ರಂದು ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಡಾ.ಬಾಬು ಜಗಜೀವನ ರಾಂ ಅವರ ಜಯಂತಿ ಕಾರ್ಯಕ್ರಮವನ್ನು ಸಾಲಿಗ್ರಾಮ ಹಾಗೂ ಕೆ.ಆರ್.ನಗರ ಎರಡು ತಾಲೂಕಿನ ಎಲ್ಲಾ ಸಮಾಜದ ಬಾಂಧವರ ಸಮ್ಮುಖದಲ್ಲಿ ಪಟ್ಟಣದ ಪುರಸಭೆ ಬಯಲು ರಂಗ ಮಂದಿರದ ಆವರಣದಲ್ಲಿ ವಿಜೃಂಭಣೆಯಿಂದ ಆಚರಣೆ ಮಾಡಲು ನಿರ್ಧಾರ ಮಾಡಿದ್ದು ಈ ವಿಚಾರದಲ್ಲಿ ಕೆಲವರ ನಡುವೆ ಬಿನ್ನಾಭಿಪ್ರಾಯ ಇರುವುದು ನನ್ನ ಗಮನಕ್ಕೆ ಬಂದಿದ್ದು ಕೂಡಲೇ ಎರಡು ತಾಲೂಕಿನ ತಹಸೀಲ್ದಾರುಗಳು ಸಮಾಜದ ಪ್ರಮುಖರ ಸಭೆ ನಡೆಸಿ ಗೊಂದಲ ಪರಿಹರಿಸಿ ಸುಸೂತ್ರವಾಗಿ ಜಯಂತಿ ನಡೆಯುವಂತೆ ನೋಡಿಕೊಳ್ಳಬೇಕೆಂದು ಸೂಚಿಸಿದರು. ನಿವೃತ್ತ ಉಪನ್ಯಾಸಕ ಡಾ. ಕೃಷ್ಣ ಪ್ರಗತಿಪರ ಚಿಂತಕ ವಿ.ಸುರೇಶ್ ಮದುವನ, ಗ್ಯಾರಂಟಿ ಸಮಿತಿ ಅಧ್ಯಕ್ಷ ಎಂ.ಎಸ್. ಮಹದೇವ್, ದಲಿತ ಮುಖಂಡ ಹನಸೋಗೆನಾಗರಾಜು ಮಾತನಾಡಿದರು.

ಪುರಸಭೆ ಅಧ್ಯಕ್ಷ ಶಿವುನಾಯಕ್, ಸದಸ್ಯರಾದ ಮಿಕ್ಸರ್ ಶಂಕರ್, ಕೋಳಿಪ್ರಕಾಶ್, ಶಂಕರ್‌ಸ್ವಾಮಿ, ಮಾಜಿ ಅಧ್ಯಕ್ಷರಾದ ಡಿ.ಕಾಂತರಾಜು, ಗೀತಾಮಹೇಶ್, ನರಸಿಂಹರಾಜು, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಕೆ.ಎಸ್.ಮಹೇಶ್, ಗ್ಯಾರಂಟಿ ಸಮಿತಿ ಅಧ್ಯಕ್ಷ ಎಂ.ಎಸ್.ಮಹದೇವ್ ಇದ್ದರು.

# ಚರಂಡಿ ಕಾಮಗಾರಿಗೆ ಭೂಮಿ ಪೂಜೆ



**ಸರಗೂರು:** ಸರಗೂರು ಪಟ್ಟಣದ 9ನೇ ವಾರ್ಡ್‌ನಲ್ಲಿರುವ ಹಳ್ಳದ ಮನೆ ಬಳಿ ಚರಂಡಿ ಕಾಮಗಾರಿಗೆ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಸಂತೋಷ್‌ಕುಮಾರ್ ಹಾಗೂ 9ನೇ ವಾರ್ಡ್ ಪಟ್ಟಣ ಪಂಚಾಯಿತಿ ಸದಸ್ಯ ಶ್ರೀನಿವಾಸ್ ಭೂಮಿ ಪೂಜೆ ನೆರವೇರಿಸಿದರು, ನಂತರ ಮಾತನಾಡಿದ ಶ್ರೀನಿವಾಸ್ 9ನೇ ವಾರ್ಡ್ ಹಳ್ಳದ ಮನೆ ನಿವಾಸಿಗಳಿಗೆ ಹಲವಾರು ವರ್ಷಗಳಿಂದ ಚರಂಡಿ ಇಲ್ಲದೆ ತಿರುಗಾಡಲು ಸಮಸ್ಯೆಯಾಗಿತ್ತು, ಚರಂಡಿ ಇಲ್ಲದಿರುವುದರಿಂದ ಮಳೆ ಬಂದರೆ ಮನೆಗಳು ನೀರಿನಿಂದ ಜಲಾವೃತವಾಗುತ್ತಿತ್ತು 2024–25ರ 15ನೇ ಹಣಕಾಸು ಯೋಜನೆಯಡಿ ಕಾಮಗಾರಿಗೆ ಮುಖ್ಯಾಧಿಕಾರಿ ಸಂತೋಷ್ ಕುಮಾರ್ ಚಾಲನೆ ನೀಡಿದ್ದಾರೆ. ಇದರಿಂದ ಇಲ್ಲಿನ ನಿವಾಸಿಗಳಿಗೆ ಅನುಕೂಲವಾಗಲಿದೆ ಎಂದು ತಿಳಿಸಿದರು. ಮುಖ್ಯಾಧಿಕಾರಿ ಸಂತೋಷ್‌ಕುಮಾರ್ ಮಾತನಾಡಿದರು, ಹಳ್ಳದ ಮನೆ ನಿವಾಸಿಗಳು, ಗುತ್ತಿದಾರ ವೆಂಕಟೇಶ್, ಇನ್ನಿತರರು ಭಾಗವಹಿಸಿದ್ದರು.

# ಬಾಬೂಜಿ ಅವರ ಹೋರಾಟ, ನಿಲುವುಗಳು ಎಲ್ಲರಿಗೂ ಪ್ರೇರಣೆ

ನಂಜನಗೂಡು, ಏ.5– ಹಸಿರು ಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನರಾಂ ಅವರು ಸಮಾನತೆಗಾಗಿ ನಡೆಸಿದ ಹೋರಾಟ, ಶೋಷಿತ ಸಮಾಜಗಳಿಗೆ ನ್ಯಾಯ ಒದಗಿಸಲು ತೆಗೆದುಕೊಂಡ ನಿಲುವುಗಳು ಎಲ್ಲರಿಗೂ ಪ್ರೇರಣೆಯಾಗಿವೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ ಹೇಳಿದರು.

ತಾಲೂಕು ಕಚೇರಿ ಸಭಾಂಗಣದಲ್ಲಿ ಶನಿವಾರ ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ, ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಏರ್ಪಡಿಸಲಾಗಿದ್ದ ಮಾಜಿ ಉಪ ಪ್ರಧಾನಿ ಡಾ. ಜಗಜೀವನರಾಂ ಅವರ 118ನೇ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.



ಬಾಬು ಜಗಜೀವನರಾಂ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ್ ಮಾತನಾಡುತ್ತಿರುವುದು.

ಡಾ.ಬಾಬು ಜಗಜೀವನರಾಂ ಅವರು 50 ವರ್ಷಗಳ ಕಾಲ ಸಂಸದರಾಗಿ ರೈಲ್ವೆ ಖಾತೆ, ಕಾರ್ಮಿಕ ಇಲಾಖೆ, ರಕ್ಷಣಾ ಖಾತೆಯ ಸಚಿವರಾಗಿ ದೇಶದ ಅಭಿವೃದ್ಧಿಗೆ ಅಪಾರ ಕೊಡುಗೆಯನ್ನು ನೀಡಿದ್ದಾರೆ. ದೇಶ ಬರಗಾಲದ ಸನ್ನಿವೇಶದಲ್ಲಿ ಇದ್ದಾಗ ಬಾಬು ಜಗಜೀವನರಾಂ ಅವರು ಕೃಷಿ ಮಂತ್ರಿಯಾಗಿ ದೇಶದಲ್ಲಿ ಹಸಿರು ಕ್ರಾಂತಿಯನ್ನೇ ಸೃಷ್ಟಿ ಮಾಡಿ ದೇಶವನ್ನು ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬಿ ಆಗುವಂತೆ ಮಾಡಿ ದೇಶದ ಚಿತ್ರಣವನ್ನೇ ಬದಲಾಗುವಂತೆ ಮಾಡಿದರು, ಅವರ ತತ್ವ ಸಿದ್ಧಾಂತಗಳು ಇಂದಿಗೂ ಪ್ರಸ್ತುತವಾಗಿದ್ದು, ನಾವೆಲ್ಲರೂ ಅವರ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು ಎಂದರು.

ಮುಖ್ಯ ಭಾಷಣಕಾರ ದೇವರಾಜು ಮಾತನಾಡಿ, ಬಾಬು ಜಗಜೀವನರಾಂ ವಿದ್ಯಾರ್ಥಿ ದೆಸೆಯಿಂದಲೇ ಸಮಾನತೆ, ಸಾಮಾಜಿಕ ಆದರ್ಶ ಗುಣಗಳನ್ನು ಮೈಗೂಡಿಸಿಕೊಂಡು ಗಾಂಧೀಜಿಯವರ ಜೊತೆಗೆ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದವರು. ಉಪ ಪ್ರಧಾನಿಗಳಾಗಿ ಅವರ ಸೇವೆ ಅಪಾರವಾದದ್ದು, ದೇಶದ ಪ್ರಧಾನಿಯಾಗುವ ಅವಕಾಶ ಅರ್ಹತೆ ಇದ್ದರೂ ಸಹ ದಲಿತ ಎನ್ನುವ ಕಾರಣಕ್ಕಾಗಿ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಅವರಿಗೆ ಅವಕಾಶವನ್ನು ತಪ್ಪಿಸಿದರು ಎಂದರು.

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಹಾಗೂ ವಿವಿಧ ರಂಗಗಳಲ್ಲಿ ಸೇವೆ ಸಲ್ಲಿಸಿರುವ ಗಣ್ಯರನ್ನು ಸನ್ಮಾನಿಸಿ ಗೌರವಿಸಲಾಯಿತು.

ಸಮಾರಂಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ತಹಸಿಲ್ದಾರ್ ಶಿವಕುಮಾರ ಕಾಸ್ನೂರು, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ, ಮುಖಂಡರಾದ ರಾಜೇಶ್, ಚಂದ್ರು, ನಾಗರಾಜಯ್ಯ, ದೇವರಾಜು, ಸ್ವಾಮಿ, ರೈತ ಸಂಘದ ತಾಲೂಕು ಅಧ್ಯಕ್ಷ ದಸಂಸ ಸಂಚಾಲಕರಾದ ಕಾರ್ಯ ಬಸವಣ್ಣ, ಮಲ್ಲಹಳ್ಳಿ ನಾರಾಯಣ್, ಶಂಕರಪುರ ಸುರೇಶ್ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಸಿದ್ದಲಿಂಗ, ತಾಪಂ ಇಓ ಜೆರಾಲ್ಡ್ ರಾಜೇಶ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ಅಂಗನವಾಡಿ ಮಕ್ಕಳಿಗೆ ಕ್ರೀಡಾಸಾಮಗ್ರಿ ವಿತರಣೆ




ಅಂಗನವಾಡಿ ಮಕ್ಕಳುಗಳಿಗೆ ಕ್ರೀಡಾ ಸಾಮಗ್ರಿ ವಿತರಿಸುತ್ತಿರುವುದು.

**ಬನ್ನೂರು:** ಪಟ್ಟಣದ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯ ಆವರಣದಲ್ಲಿರುವ ಅಂಗನವಾಡಿ ಕೇಂದ್ರಕ್ಕೆ ರೋಟರಿ ಸಂಸ್ಥೆಯ ವತಿಯಿಂದ ಅಗತ್ಯ ಕ್ರೀಡಾಸಾಮಗ್ರಿಯನ್ನು ವಿತರಣೆ ಮಾಡಲಾಯಿತು.

ನಂತರ ರೋಟರಿ ಸಂಸ್ಥೆಯ ಮಾಜಿ ಅಧ್ಯಕ್ಷ ಮಹೇಂದ್ರಸಿಂಗ್ ಕಾಳಪ್ಪ ಮಾತನಾಡಿ, ಸರ್ಕಾರ ಮಕ್ಕಳ ಆರೋಗ್ಯವನ್ನು ಕಾಪಾಡುವ ನಿಟ್ಟಿನಲ್ಲಿ ಅಂಗನವಾಡಿ ಕೇಂದ್ರಗಳ ಮೂಲಕ ಪೌಷ್ಟಿಕ ಆಹಾರವನ್ನು ನೀಡುವ ಕಾರ್ಯವನ್ನು ಮಾಡುತ್ತಿದೆ. ಇದರಿಂದ ಮಕ್ಕಳ ಆರೋಗ್ಯ ಬಹಳಷ್ಟು ಸುಧಾರಿಸುತ್ತಿದ್ದು ಎಲ್ಲರೂ ಇವುಗಳ ಉಪಯೋಗವನ್ನು ಪಡೆದುಕೊಳ್ಳುವಂತೆ ಸಲಹೆಯನ್ನು ನೀಡಿದರು.

ನಂತರ ರೋಟರಿ ಸಂಸ್ಥೆಯ ಸದಸ್ಯರೊಡಗೂಡಿ ವಿವಿಧ ಸಮುದಾಯ ಭವನಗಳು, ದೇವಾಲಯದ ಆವರಣದಲ್ಲಿ ನೀರನ್ನು ಮಿತವಾಗಿ ಬಳಸಿ, ಆಹಾರವನ್ನು ವ್ಯರ್ಥಗೊಳಿಸದಿರಿ ಎನ್ನುವ ಫಲಕವನ್ನು ಅಳವಡಿಸಿದರು.

# ಹುಣಸೂರಲ್ಲಿ ಬಾಬೂಜಿ ಜಯಂತಿ ಆಚರಣೆ




ಹುಣಸೂರು.ಏ.5– ನಗರದ ಕಾಂಗ್ರೆಸ್ ಕಚೇರಿಯಲ್ಲಿ ಹಸಿರುಕ್ರಾಂತಿಯ ಹರಿಕಾರ ಬಾಬು ಜಗಜೀವನ್ ರಾಮ್ ಅವರ 118ನೇ ಜನ್ಮದಿನವನ್ನು ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಪಕ್ಷದ ಕಾರ್ಯಾಧ್ಯಕ್ಷ ವಕೀಲ ಪುಟ್ಟರಾಜು ಮಾತನಾಡಿದರು. ತಾಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಕಲ್ಕುಣಿಕೆ ರಾಘು, ಅಕ್ರಮ ಸಕ್ರಮ ಸಮಿತಿ ಸದಸ್ಯ ಎಚ್‌ಎಸ್ ಕುಮಾರ್, ಅಕ್ರಮ ಸಕ್ರಮ ಸಮಿತಿ ಮಾಜಿ ಸದಸ್ಯ ಬನ್ನಿಕುಪ್ಪೆ ಚಿಕ್ಕಸ್ವಾಮಿ, ತಾಪಂ ಮಾಜಿ ಉಪಾಧ್ಯಕ್ಷ ಚಿನ್ನವೀರಯ್ಯ, ಮುಖಂಡರಾದ ಬೆಳ್ತೂರುರಾಜು, ಪರಶುರಾಮ್ ನಂದೀಶ್, ರಕ್ಷಾ ಸಮಿತಿ ಸದಸ್ಯ ಸದಾಶಿವನಕೊಪ್ಪಲು ಸಂತೋಷ್ ಸೇರಿದಂತೆ ಇತರರು ಇದ್ದರು.

# ಬಾಬು ಜಗಜೀವನರಾಂ ಎಲ್ಲಾ ಜನಾಂಗದ ಆಶಾಕಿರಣ

ತಿ.ನರಸೀಪುರ, ಏ.5– ಹಸಿರು ಕ್ರಾಂತಿಯ ಮೂಲಕ ದೇಶದ ಜನಮಾನಸದಲ್ಲಿ ಅಚ್ಚಳಿಯದೇ ಸಾಧನೆಗೈದು ಉಳಿದ ನಾಯಕ ಮಾಜಿ ಉಪ ಪ್ರಧಾನಿ ಡಾ.ಬಾಬು ಜಗಜೀವನರಾಂ ಅವರ ಸ್ಮರಣೆ ಅನನ್ಯ ಎಂದು ತಾಲೂಕು ಪಂಚಾಯ್ತಿ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಹೇಳಿದರು.

ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನರಾಂ ಅವರ 118ನೇ ಜಯಂತಿ ಹಿನ್ನೆಲೆಯಲ್ಲಿ ಟಿ.ನರಸೀಪುರ–ಮೈಸೂರು ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ಬೈರಾಪುರ ಗ್ರಾಮದಲ್ಲಿ ನಿರ್ಮಿಸಲಾಗಿರುವ ಡಾ.ಬಾಬೂಜಿಯವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಅವರು ಮಾತನಾಡಿದರು.

ಡಾ.ಬಾಬು ಜಗಜೀವನ ರಾಮ್ ಅವರು ದೇಶಕ್ಕಾಗಿ ಹಗಲಿರುಳು ಶ್ರಮವಹಿಸಿ ಎಲ್ಲ ಜನಾಂಗದ ಜನರ ಆಶಾಕಿರಣವಾಗಿ ನಮ್ಮೆಲ್ಲರಿಗೂ ಮಾದರಿಯಾಗಿದ್ದಾರೆ. ಸರಳ ಸಜ್ಜನಿಕೆಗೆ ಹೆಸರುವಾಸಿಯಾಗಿ ದೇಶದ ಜನತೆಗೆ ಹಸಿರು ಕ್ರಾಂತಿ ಮಾಡುವ ಮೂಲಕ ಎಲ್ಲರ ಜನಮಾನಸದಲ್ಲಿ ಉಳಿದಿದ್ದಾರೆ ಎಂದರು.


ಬೈರಾಪುರ ಗ್ರಾಮದ ಬಾಬೂಜಿ ಪುತ್ಥಳಿ ಬಳಿ ಹಮ್ಮಿಕೊಳ್ಳಲಾಗಿದ್ದ ಬಾಬೂಜಿ ಜಯಂತಿ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ ಸಾಧಕರನ್ನು ಸನ್ಮಾನಿಸಲಾಯಿತು.

ಈ ವೇಳೆ ಬೈರಾಪುರ ಗ್ರಾಮದ ವಕೀಲೆ ಅರ್ಪಿತಾ, ಇತಿಹಾಸ ಶಾಸ್ತ್ರದಲ್ಲಿ ಚಿನ್ನದ ಪದಕ ಪಡೆದ ರಶ್ಮಿತಾ, ರೇಖಾಚಿತ್ರದಲ್ಲಿ ರ್‍ಯಾಂಕ್ ಪಡೆದ ತ್ರಿಶಿಕ, ಕವಿ.ಬರಹಗಾರ ಎಂ.ಜವರಾಜ್, ಬೈರಾಪುರದ ಜವರಯ್ಯ, ವಜ್ರಯ್ಯ ಅವರನ್ನು ಸನ್ಮಾನಿಸಲಾಯಿತು.

ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಸಮಿತಿಯ ವೈದ್ಯಕೀಯ ವಿಭಾಗದ ಅಧ್ಯಕ್ಷ ಡಾ.ಬಿ.ಪ್ರದೀಪ್ ಶಾಲಾ ಮಕ್ಕಳಿಗೆ ನೋಟ್ ಬುಕ್ ವಿತರಿಸಿದರು. ಪುರಸಭೆ ಮಾಜಿ ಅಧ್ಯಕ್ಷೆ ಪ್ರೇಮ ಮರಯ್ಯ, ಘಟಕ ಮಹದೇವು, ತಿರುಮಕೂಡಲು ಲಕ್ಷ್ಮಣ, ಡಾ.ಪ್ರದೀಪ್, ತಾ.ಪಂ. ಮಾಜಿ ಅಧ್ಯಕ್ಷ ಕೆಬ್ಬೇಶಿವಸ್ವಾಮಿ, ರಾಮಚಂದ್ರ ಕೆ.ರಾಚು, ಕೃಷ್ಣಪ್ರಕಾಶ್, ಮಂಟೇಲಿಂಗಯ್ಯ, ಗ್ರಾಪಂ. ಮಾಜಿ ಸದಸ್ಯ ದಿವಾಕರ್, ಕಂಪ್ಯೂಟರ್ ಮಹೇಂದ್ರ ರಂಗಸ್ವಾಮಿ, ಎಂ.ಜವರಾಜು, ಚಿಕ್ಕನಂಜಯ್ಯ, ಮರಿಸ್ವಾಮಿ, ಸೋಮಣ್ಣ, ಶಂಕರ್, ಸುರೇಶ್, ಚಿಕ್ಕಲಿಂಗಯ್ಯ, ರಂಗಸ್ವಾಮಿ, ನಾಗೇಶ್, ರಾಜೇಶ್, ಪುಟ್ಟಸ್ವಾಮಿ, ಮಹಾದೇವ, ಹರೀಶ್, ಮಂಜು, ಸ್ವಾಮಿ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

## ಭವ್ಯ ನಿಧನ

**ಹೆಚ್.ಡಿ.ಕೋಟೆ:** ಪುರಸಭೆಯ ಮಾಜಿ ಅಧ್ಯಕ್ಷೆ ಮಂಜುಳಾ ಗೋವಿಂದಾಚಾರ್ ಅವರ ಸೊಸೆ ಭವ್ಯ (30) ಶನಿವಾರ ನಿಧನರಾಗಿದ್ದಾರೆ.



ದಿವಂಗತರು ಪತಿ ಪ್ರದೀಪ್, ಪುತ್ರಿ, ಪುತ್ರ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ಪಟ್ಟಣದ ಸಾರ್ವಜನಿಕರ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬ ವರ್ಗ ತಿಳಿಸಿದೆ.

# ಐಪಿಎಲ್ ಹಂಗಾಮ

## ಚೆನ್ನೈ ಸೂಪರ್‌ಕಿಂಗ್ಸ್‌ಗೆ 'ಹ್ಯಾಟ್ರಿಕ್' ಸೋಲು



ಚೆನ್ನೈ, ಏ.5– ಕನ್ನಡಿಗ ಕೆ.ಎಲ್. ರಾಹುಲ್ ಬ್ಯಾಟಿಂಗ್ ಬಲದಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡವು 'ಹ್ಯಾಟ್ರಿಕ್' ಜಯ ಸಾಧಿಸಿದರೆ, ಚೆನ್ನೈ ಸೂಪರ್‌ಕಿಂಗ್ಸ್ 'ಹ್ಯಾಟ್ರಿಕ್' ಸೋಲು ಅನುಭವಿಸಿತು.

ಇಲ್ಲಿನ ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ಶನಿವಾರ ಮಧ್ಯಾಹ್ನ ನಡೆದ 17ನೇ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್, ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ 25 ರನ್ ಜಯ ಗಳಿಸಿ, ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಡೆಲ್ಲಿ ಕ್ಯಾಪಿಟಲ್ಸ್, ಮೊದಲ ಓವರ್‌ನಲ್ಲಿಯೇ ಜೇಕ್ ಫ್ರೇಸರ್ ಮೆಕ್‌ಗುರ್ಕ್ ವಿಕೆಟ್ ಕಳೆದುಕೊಂಡಿತು. ಈ ವೇಳೆ ಇನ್ನಿಂಗ್ಸ್ ಕಟ್ಟುವ ಜವಾಬ್ದಾರಿ ಹೊತ್ತ ಕನ್ನಡಿಗ ಕೆ.ಎಲ್.ರಾಹುಲ್, 51 ಎಸೆತಗಳಲ್ಲಿ 3 ಸಿಕ್ಸ್, 6 ಬೌಂಡರಿ ಸಹಿತ 77 ರನ್ ಸಿಡಿಸಿ, ಟೂರ್ನಿಯಲ್ಲಿ ಮೊದಲ ಅರ್ಧಶತಕ ದಾಖಲಿಸಿದರು.

ಅಭಿಷೇಕ್ ಪೊರೆಲ್ 33 ರನ್, ನಾಯಕ ಅಕ್ಷರ್ ಪಟೇಲ್ 21 ರನ್, ಸಮೀರ್ ರಿಜ್ವಿ 20 ರನ್ ಹಾಗೂ ಟ್ರಿಸ್ಟಾನ್ ಸ್ಟಬ್ಸ್ 24 ರನ್ ಕೊಡುಗೆ ನೀಡಿದರು. ಅಂತಿಮವಾಗಿ ಡೆಲ್ಲಿ ಕ್ಯಾಪಿಟಲ್ಸ್ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 183 ರನ್ ಗಳಿಸಿತು. ಖಲೀಲ್ ಅಹಮದ್ 2 ವಿಕೆಟ್ ಪಡೆದರು.

184 ರನ್ ಗುರಿ ಬೆನ್ನತ್ತಿದ ಚೆನ್ನೈ ಸೂಪರ್ ಕಿಂಗ್ಸ್ 41 ರನ್‌ಗಳಿಗೆ 3 ವಿಕೆಟ್ ಕಳೆದುಕೊಳ್ಳುವ ಮೂಲಕ ಆರಂಭಿಕ ಆಘಾತ ಅನುಭವಿಸಿತು. ರಚಿನ್ ರವೀಂದ್ರ 3 ರನ್, ಡೆವೊನ್ ಕಾನ್ವೇ 13 ರನ್, ನಾಯಕ ರುತುರಾಜ್ ಗಾಯಕವಾಡ್ 5 ರನ್, ಶಿವಂ ದುಬೆ 18 ರನ್, ರವೀಂದ್ರ ಜಡೇಜಾ 2 ರನ್‌ಗಳಿಗೆ ವಿಕೆಟ್ ಒಪ್ಪಿಸುವ ಮೂಲಕ ಅಭಿಮಾನಿಗಳಿಗೆ ನಿರಾಶೆ ಉಂಟುಮಾಡಿದರು.

ನಂತರ ಕ್ರೀಸ್‌ಗೆ ಬಂದ ಆಲ್‌ರೌಂಡರ್ ವಿಜಯ್ ಶಂಕರ್ 54 ಎಸೆತಗಳಲ್ಲಿ 1 ಸಿಕ್ಸ್, 5 ಬೌಂಡರಿ ಸಹಿತ 69 ರನ್‌ಗಳಿಸಿದರೆ, ಅನುಭವಿ ಮಹೇಂದ್ರ ಸಿಂಗ್ 26 ಎಸೆತಗಳಲ್ಲಿ 1 ಸಿಕ್ಸ್, 1 ಬೌಂಡರಿ ಸಹಿತ 30 ರನ್‌ಗಳಿಸಿ ಅಜೇತರಾಗಿ ಉಳಿದರು. ಅಂತಿಮವಾಗಿ 5 ವಿಕೆಟ್ ನಷ್ಟಕ್ಕೆ 158 ರನ್‌ಗಳಿಸಿದ ಚೆನ್ನೈ ಸೂಪರ್‌ಕಿಂಗ್ಸ್ 25 ರನ್‌ಗಳ ಸೋಲು ಅನುಭವಿಸಿತು. ಈ ಮೂಲಕ ಡೆಲ್ಲಿ ಕ್ಯಾಪಿಟಲ್ಸ್ ಹ್ಯಾಟ್ರಿಕ್ ಜಯ ಸಾಧಿಸಿದರೆ, ಚೆನ್ನೈ ಹ್ಯಾಟ್ರಿಕ್ ಸೋಲು ಕಂಡಿತು. ಕೆ.ಎಲ್.ರಾಹುಲ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

## ರಾಜಸ್ಥಾನ್ ರಾಯಲ್ಸ್‌ಗೆ ಭರ್ಜರಿ ಗೆಲುವು



ಚಂಡೀಗಢ, ಏ.5– ಯಶಸ್ವಿ ಜೈಸ್ವಾಲ್ ಆಕರ್ಷಕ ಅರ್ಧಶತಕದ ನೆರವಿನಿಂದ ರಾಜಸ್ಥಾನ್ ರಾಯಲ್ಸ್, ಪಂಜಾಬ್ ಕಿಂಗ್ಸ್ ವಿರುದ್ಧ 50 ರನ್‌ಗಳ ಭರ್ಜರಿ ಗೆಲುವು ಸಾಧಿಸಿದರೆ, ಪಂಜಾಬ್ ಕಿಂಗ್ಸ್ ಟೂರ್ನಿಯಲ್ಲಿ ಮೊದಲ ಸೋಲು ಅನುಭವಿಸಿತು.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನ ರಾಯಲ್ಸ್, ನಿಗದಿತ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 205 ರನ್ ಗಳಿಸಿತು. ಆರಂಭಿಕರಾದ ಯಶಸ್ವಿ ಜೈಸ್ವಾಲ್ 45 ಎಸೆತಗಳಲ್ಲಿ 5 ಸಿಕ್ಸ್, 3 ಬೌಂಡರಿ ಸಹಿತ 67 ರನ್‌ಗಳಿಸಿದರೆ, ನಾಯಕ ಸಂಜು ಸ್ಯಾಮ್‌ಸನ್ 38 ರನ್ ಗಳಿಸಿ ಉತ್ತಮ ಆರಂಭ ಒದಗಿಸಿದರು.

ನಂತರ ಬಿರುಸಿನ ಬ್ಯಾಟಿಂಗ್ ನಡೆಸಿದ ರಿಯಾನ್ ಪರಾಗ್ ಅಜೇಯ 43 ರನ್, ಶಿಮ್ರಾನ್ ಹೆಟ್ಮೆಯರ್ 20 ರನ್ ಸಿಡಿಸಿ ತಂಡದ ಮೊತ್ತ 200ರ ಗಡಿದಾಟಲು ನೆರವಾದರು. ಪಂಜಾಬ್ ಕಿಂಗ್ಸ್ ಪರ ಲಾಕಿ ಫರ್ಗುಸನ್ 2 ವಿಕೆಟ್ ಪಡೆದರು.

206 ರನ್ ಗುರಿ ಬೆನ್ನತ್ತಿದ ಪಂಜಾಬ್ ಕಿಂಗ್ಸ್ ನಿಗದಿತ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 155 ರನ್ ಗಳಿಸಲಷ್ಟೇ ಶಕ್ತವಾಯಿತು. ನೆಹಾಲ್ ವಧೇರ 41 ಎಸೆತಗಳಲ್ಲಿ 3 ಸಿಕ್ಸ್, 4 ಬೌಂಡರಿ ಸಹಿತ 62 ರನ್ ಗಳಿಸಿದರೆ, ಗ್ಲೆನ್ ಮ್ಯಾಕ್ಸ್‌ವೆಲ್ 30 ರನ್ ಗಳಿಸಿದರು. ನಾಯಕ ಶ್ರೇಯರ್ ಅಯ್ಯರ್ ಸೇರಿದಂತೆ ಉಳಿದ ಯಾವ ಬ್ಯಾಟ್ಸ್‌ಮನ್‌ಗಳಿಂದ ಉತ್ತಮ ಪ್ರದರ್ಶನ ಮೂಡಿಬರಲಿಲ್ಲ. ಅಂತಿಮವಾಗಿ ಪಂಜಾಬ್ ಕಿಂಗ್ಸ್ 50 ರನ್‌ಗಳ ಸೋಲು ಅನುಭವಿಸುವ ಮೂಲಕ ಟೂರ್ನಿಯಲ್ಲಿ ಮೊದಲ ಹಿನ್ನಡೆ ಅನುಭವಿಸಿತು.

ಕರಾರುವಕ್ಕಾಗಿ ದಾಳಿ ನಡೆಸಿದ ರಾಜಸ್ಥಾನ್ ರಾಯಲ್ಸ್‌ನ ಜೋಫ್ರಾ ಆರ್ಚರ್ 3 ವಿಕೆಟ್, ಸಂದೀಪ್ ಶರ್ಮಾ ಮತ್ತು ಮಹೇಶ್ ತೀಕ್ಷಣ ತಲಾ 2 ವಿಕೆಟ್ ಪಡೆದು ಮಿಂಚಿದರು. ಜೋಫ್ರಾ ಆರ್ಚರ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

### ತಂಡದ ಅಂಕಪಟ್ಟಿ ವಿವರ

| ತಂಡ | ಪಂದ್ಯಗಳು | ಗೆಲುವು | ಸೋಲು | ಡ್ರಾ | ಅಂಕ |
|---|---|---|---|---|---|
| ಡೆಲ್ಲಿ | 3 | 3 | 0 | 0 | 6 |
| ಬೆಂಗಳೂರು | 3 | 2 | 1 | 0 | 4 |
| ಗುಜರಾತ್ | 3 | 2 | 1 | 0 | 4 |
| ಪಂಜಾಬ್ | 3 | 2 | 1 | 0 | 4 |
| ಕೋಲ್ಕತ್ತಾ | 4 | 2 | 2 | 0 | 4 |
| ಲಕ್ನೋ | 4 | 2 | 2 | 0 | 4 |
| ರಾಜಸ್ಥಾನ್ | 4 | 2 | 2 | 0 | 4 |
| ಮುಂಬೈ | 4 | 1 | 3 | 0 | 2 |
| ಚೆನ್ನೈ | 4 | 1 | 3 | 0 | 2 |
| ಹೈದರಾಬಾದ್ | 4 | 1 | 3 | 0 | 2 |

### ಇಂದಿನ ಪಂದ್ಯ

ಸನ್‌ರೈಸರ್ಸ್ ಹೈದರಾಬಾದ್
V/S
ಗುಜರಾತ್ ಟೈಟಾನ್ಸ್
ಸಮಯ: ಸಂಜೆ 7.30
ಸ್ಥಳ : ರಾಜೀವ್ ಗಾಂಧಿ, ಕ್ರೀಡಾಂಗಣ, ಹೈದರಾಬಾದ್

## ಮೈಸೂರು ಚಿತ್ರಮಂದಿರಗಳಲ್ಲಿ

| | |
|---|---|
| **ಪದ್ಮ ಚಿತ್ರಮಂದಿರ** | (ದೂ: 2521923) |
| ವೀರ ಧೀರ ಶೂರನ್–2 (ತ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್ ಚಿತ್ರಮಂದಿರ** | (ದೂ: 2422871) |
| ಮನದ ಕಡಲು (ಕ) | 4 ಪ್ರದರ್ಶನಗಳು |
| **ಬಾಲಾಜಿ ಚಿತ್ರಮಂದಿರ** | (ದೂ: 2497199) |
| ಸಿಕಂದರ್ (ಹಿಂ) | 4 ಪ್ರದರ್ಶನಗಳು |
| **ಮಹದೇಶ್ವರ ಚಿತ್ರಮಂದಿರ** | (ಮೊ:9900820093) |
| ಮಿಸ್ ಟೀಚರ್ (ಹಿಂ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಅಪ್ಪು (ಕ) | 4 ಪ್ರದರ್ಶನಗಳು |
| **ರಾಜಕಮಲ್** | |
| ರಾಬಿನ್ ಹುಡ್ (ತೆ) | 4 ಪ್ರದರ್ಶನಗಳು |
| **ಸಂಗಂ** | |
| ಸಿಕಂದರ್ (ಹಿಂ) | 4 ಪ್ರದರ್ಶನಗಳು |
| **ಲಿಡೋ** | |
| ನಿಮ್ದೇ ಕಥೆ (ಕ–2), ಬೆಂಕಿಯ ಬಲೆ (ಕ–2) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| ಭಗೀರಥ (ಕ) | 4 ಪ್ರದರ್ಶನಗಳು |
| **ಪ್ರಭಾ** | |
| ಭಗೀರಥ (ಕ) | 4 ಪ್ರದರ್ಶನಗಳು |

### ಡಿಆರ್‌ಸಿ ಸಿನಿಮಾಸ್
ದೂ : 4240422/4241800

| | |
|---|---|
| ಸ್ಕ್ರೀನ್ 1 | ಡಿಸ್ನಿ ಸ್ನೋ ವೈಟ್ (ಇಂ): ಬೆ.9.55ಕ್ಕೆ, ಮ.12.20ಕ್ಕೆ, ಮ.2.40ಕ್ಕೆ, ಸಂ.5ಕ್ಕೆ, ದಿ ಡಿಪ್ಲೊಮೆಟ್ (ಹಿಂ): ರಾ.7.20ಕ್ಕೆ, ಯಾರಿಯನ್ (ಹಿಂ): ರಾ.10.10ಕ್ಕೆ. |
| ಸ್ಕ್ರೀನ್ 2 | ಬರ್ಗೆಟ್ ಬಸ್ಯಾ (ಕ): ಬೆ.10.20ಕ್ಕೆ, ಅಸ್ತ್ರಂ (ತ): ಮ.1.10ಕ್ಕೆ, ಕೋರ್ಟ್ ಸ್ಟೇಟ್ V/s ಎ ನೋಬಡಿ (ತೆ): ಮ.3.55ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ರಾ.7ಕ್ಕೆ, ರಾ.10.20ಕ್ಕೆ. |
| ಸ್ಕ್ರೀನ್ 3 | ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕು ಗ್ರಾಮ ಯಾಳ್ಪಿ (ಕ): ಬೆ.10.35ಕ್ಕೆ, ಡ್ರ್ಯಾಗನ್ (ತ): ಮ.1.05ಕ್ಕೆ, ಪಿಂಟು ಕಿ ಪಪ್ಪಿ (ಹಿಂ): ಸಂ.4.15ಕ್ಕೆ, ಛಾವಾ (ಹಿಂ): ರಾ.7ಕ್ಕೆ, ಘಾತಕ್ (ಹಿಂ): ಬೆ.10.15ಕ್ಕೆ. |
| ಸ್ಕ್ರೀನ್ 4 | ಡ್ರ್ಯಾಗನ್ (ತ): ಬೆ.10.20ಕ್ಕೆ, ಅಪ್ಪು (ಕ): ಮ.1.30ಕ್ಕೆ, ಷಣ್ಮುಖ (ತೆ): ಸಂ.4.15ಕ್ಕೆ, ರಾ.9.45ಕ್ಕೆ, ಡಿಸ್ನಿ ಸ್ನೋ ವೈಟ್ (ಇಂ): ರಾ.7.05ಕ್ಕೆ. |

### ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

| | |
|---|---|
| ಸ್ಕ್ರೀನ್ 1 | ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ. |
| ಸ್ಕ್ರೀನ್ 2 | ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ. |
| ಸ್ಕ್ರೀನ್ 3 | ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ. |
| ಸ್ಕ್ರೀನ್ 4 | ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ. |

### ಮೈಸೂರು ವಿಷನ್ ಸಿನಿಮಾ
ದೂ : 0821–2973519

| | |
|---|---|
| ಸ್ಕ್ರೀನ್ 1 | ಫಾರೆಸ್ಟ್ (ಕ): ಮ.1.45ಕ್ಕೆ, ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕು ಗ್ರಾಮ ಯಾಳ್ಪಿ (ಕ): ಸಂ.6.35ಕ್ಕೆ ಅಸ್ತ್ರಂ (ತ): ರಾ.7ಕ್ಕೆ, ಷಣ್ಮುಖ (ತೆ): ರಾ.9.15ಕ್ಕೆ. |
| ಸ್ಕ್ರೀನ್ 2 | ಪಿಂಟು ಕಿ ಪಪ್ಪಿ (ಹಿಂ): ಮ.1.15ಕ್ಕೆ, ಮ.3.55ಕ್ಕೆ, ಛಾವಾ (ಹಿಂ): ಸಂ.6.30ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ರಾ.9.30ಕ್ಕೆ. |
| ಸ್ಕ್ರೀನ್ 3 | ಡಿಸ್ನಿ ಸ್ನೋ ವೈಟ್ (ಇಂ): ಮ.1.30ಕ್ಕೆ, ಸಂ.4.05ಕ್ಕೆ, ರಾ.9.20ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ಸಂ.6.15ಕ್ಕೆ. |

### ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

# ಮೈಸೂರಲ್ಲಿ ಡಾ. ಬಾಬು ಜಗಜೀವನ್ ರಾಂ ಜನ್ಮ ದಿನಾಚರಣೆ

ಮೈಸೂರು, ಏ. 5(ಆರ್‌ಕೆ)– ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಮೈಸೂರು ಮಹಾನಗರ ಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಂಯುಕ್ತಾಶ್ರಯದಲ್ಲಿ ಇಂದು ಹಸಿರುಕ್ರಾಂತಿ ಹರಿಕಾರರಾದ ಭಾರತದ ಮಾಜಿ ಉಪರಾಷ್ಟ್ರಪತಿ ಡಾ. ಬಾಬು ಜಗಜೀವನ್ ರಾಂ ಅವರ 118ನೇ ಜನ್ಮದಿನವನ್ನು ಮೈಸೂರಲ್ಲಿ ಆಚರಿಸಲಾಯಿತು.



ಮೈಸೂರಿನ ಕಲಾಮಂದಿರದಲ್ಲಿ ನಡೆದ ಬಾಬು ಜಗಜೀವನ್ ರಾಂ ಜಯಂತಿ ಕಾರ್ಯಕ್ರಮವನ್ನು ಬಾಬೂಜಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಶಾಸಕ ಕೆ.ಹರೀಶ್‌ಗೌಡ ಉದ್ಘಾಟಿಸಿದರು. ವಿಧಾನಪರಿಷತ್ ಸದಸ್ಯರಾದ ಡಾ. ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ ಇನ್ನಿತರರು ಉಪಸ್ಥಿತರಿದ್ದರು

ರೈಲು ನಿಲ್ದಾಣ ಸರ್ಕಲ್‌ನಲ್ಲಿರುವ ಡಾ. ಬಾಬು ಜಗಜೀವನ್ ರಾಂ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ಬಳಿಕ ಕಲಾಮಂದಿರದಲ್ಲಿ ನಡೆದ ವೇದಿಕೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ವಿಧಾನಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಕಾರ್ಮಿಕರು, ಶ್ರಮಿಕರ ಸಮಸ್ಯೆಗಳ ಪರಿಹಾರೋಪಾಯಗಳ ಬಗ್ಗೆ ಚರ್ಚಿಸಿ ಸರ್ಕಾರಕ್ಕೆ ಮೊದಲು ಮನವರಿಕೆ ಮಾಡಿದ್ದವರು ಡಾ. ಬಾಬು ಜಗಜೀವನ್ ರಾಂ ಎಂದರು.

ಮಹಾತ್ಮ ಗಾಂಧೀಜಿ ಜೊತೆಯಲ್ಲಿ ಉಪವಾಸ ಸತ್ಯಾಗ್ರಹ ಮಾಡಿ, ನಂತರ 1935ರಲ್ಲಿ ರಾಷ್ಟ್ರೀಯ ಅಸ್ಪೃಶ್ಯತಾ ಸಮ್ಮೇಳನ ನಡೆಸಿ ಸಂಘಟನೆ ಮಾಡಿದ್ದ ಅವರು, 1946ರಲ್ಲಿ ಕಾರ್ಮಿಕ ಸಚಿವರಾಗಿ ಜಾರಿಗೆ ತಂದ ಇಎಸ್‌ಐ ಯೋಜನೆ ಈಗಲೂ ನಡೆಯುತ್ತಿದೆ ಎಂದರು.


ಶಾಸಕ ಕೆ. ಹರೀಶ್‌ಗೌಡ ಮಾತನಾಡಿ, ಹಸಿವು ಮುಕ್ತ ದೇಶವಾಗಿಸಲು ಹಸಿರು ಕ್ರಾಂತಿ ಮಾಡಿ ಹೊರ ದೇಶಕ್ಕೂ ಆಹಾರ ಪದಾರ್ಥ ರಫ್ತು ಮಾಡುವಂತೆ ಆಹಾರ ಉತ್ಪಾದನೆಯಲ್ಲಿ ಸಾಧನೆ ಮಾಡಿದ್ದ ಡಾ. ಬಾಬು ಜಗಜೀವನ್ ರಾಂ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಬದುಕು ಹಸನಾಗಲು ಆರ್ಥಿಕ, ಸಾಮಾಜಿಕ ಸ್ಥಾನಮಾನಗಳನ್ನು ಹೆಚ್ಚಿಸಿದ್ದರು ಎಂದರು.

ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಮಾತನಾಡಿ, ಮಹಾನ್ ವ್ಯಕ್ತಿಗಳ ಬಗ್ಗೆ ಇಂದಿನ ಯುವ ಜನತೆಗೆ ಅರಿವು ಮೂಡಿಸುವ ಅಗತ್ಯವಿದೆ. ಡಾ. ಬಾಬು ಜಗಜೀವನ್ ರಾಂ, ಡಾ. ಬಿ.ಆರ್. ಅಂಬೇಡ್ಕರ್, ಬಸವಣ್ಣ, ಕನಕದಾಸ, ಪುರಂದರದಾಸರ ವ್ಯಕ್ತಿತ್ವ, ಸಮಾಜಮುಖಿ ಚಿಂತನೆ ಇಂದಿನವರಲ್ಲಿ ಮಾಯವಾಗುತ್ತಿರುವುದು ವಿಪರ್ಯಾಸ ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ಡಾ. ಪಿ. ಶಿವರಾಜು ಮಾತನಾಡಿ, ಇಡೀ ಜೀವನವನ್ನು ಇತರರಿಗಾಗಿ ತ್ಯಾಗ ಮಾಡಿದ ಮಹನೀಯರ ಜನ್ಮದಿನವನ್ನು ಸರ್ಕಾರದ ವತಿಯಿಂದ ಆಚರಿಸಲಾಗುತ್ತಿದೆ. ಹುಟ್ಟಿದಾಗಿನಿಂದಲೇ ಅಸ್ಪೃಶ್ಯತೆ ಅನುಭವಿಸಿದ ಡಾ. ಬಾಬು ಜಗಜೀವನ್ ರಾಂ, ತಮಗೆ ಎದುರಾದ ಸವಾಲು ಸ್ವೀಕರಿಸಿ ಒಂದೊಂದೇ ಮೆಟ್ಟಿಲೇರಿ ಸಾಧನೆಯ ಶಿಖರವನ್ನೇರಿದ ಮಹಾನ್ ನಾಯಕರು ಎಂದು ಬಣ್ಣಿಸಿದರು.

ಬೆಂಗಳೂರು ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ. ಎಂ. ನರಸಿಂಹಮೂರ್ತಿ ಡಾ. ಜಗಜೀವನ್ ರಾಂ ಕುರಿತು ಪ್ರಧಾನ ಭಾಷಣ ಮಾಡಿದರು. ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಸ್. ಯುಕೇಶ್‌ಕುಮಾರ್, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಬಿ. ರಂಗೇಗೌಡ, ಸಹಾಯಕ ನಿರ್ದೇಶಕ ಎ.ಎನ್. ಜನಾರ್ಧನ್, ಸಮುದಾಯದ ಹಲವು ಮುಖಂಡರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ಡಾ.ಬಾಬು ಜಗಜೀವನ್ ರಾಮ್ ಅವರಿಗೆ ನಮನ



ಹಸಿರು ಕ್ರಾಂತಿ ಹರಿಕಾರ ಮಾಜಿ ಉಪಪ್ರಧಾನಿ ಡಾ.ಬಾಬು ಜಗಜೀವನ್ ರಾಂ ಅವರ 118ನೇ ಜಯಂತಿ ಅಂಗವಾಗಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ, ಯುವ ನಾಯಕ ಆರ್.ನರೇಂದ್ರ ಬಾಬೂಜಿ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವಿಸಿದರು. ಈ ಸಂದರ್ಭದಲ್ಲಿ ಕೆಪಿಸಿಸಿ ಸಂಯೋಜಕ ಬಂಡಿಪಾಳ್ಯ ವಿಜಯ್ ಕುಮಾರ್, ಐಎನ್‌ಟಿಯುಸಿ ರಾಜ್ಯ ಯುವ ಉಪಾಧ್ಯಕ್ಷ ನಾಗರಾಜು, ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಪ್ರಸನ್ನ, ಯುವ ಮುಖಂಡರಾದ ನಾರಾಯಣ್, ಹರೀಶ್, ಶಿವು, ಪುಟ್ಟರಾಜು, ಮಂಜು, ಡಿಎಸ್‌ಎಸ್ ಮುಖಂಡ ಮುರಡಗಳ್ಳಿ ಮಂಜು ಇನ್ನಿತರರಿದ್ದರು.



ಹಸಿರು ಕ್ರಾಂತಿಯ ಹರಿಕಾರ, ಮಾಜಿ ಉಪಪ್ರಧಾನಿ ಡಾ.ಬಾಬು ಜಗಜೀವನ್ ರಾಮ್ ಜಯಂತಿ ಅಂಗವಾಗಿ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಮೈಸೂರಿನ ರೈಲ್ವೆ ನಿಲ್ದಾಣದ ಸಮೀಪದಲ್ಲಿನ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ನಮನ ಸಲ್ಲಿಸಿದರು. ಈ ವೇಳೆ ಮೈಸೂರು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಉಪಾಧ್ಯಕ್ಷ ಬಸವಣ್ಣ, ಮಾಜಿ ಪಾಲಿಕೆ ಸದಸ್ಯ ಸಿದ್ದಪ್ಪ, ಸುನಂದ್ ಕುಮಾರ್, ಕಾರ್ಮಿಕ ಸಂಘಟನಾ ಅಧ್ಯಕ್ಷ ಜಿ.ಸಿದ್ದರಾಜು, ಬಾಬು ಜಗಜೀವನ್ ರಾಮ್ ನಿಗಮದ ನಿರ್ದೇಶಕ ಕೆ.ರಾಮು, ಆಶ್ರಯ ಸಮಿತಿ ಸದಸ್ಯ ಗುಣಶೇಖರ್, ಕಾಂಗ್ರೆಸ್ ಯುವ ಮುಖಂಡರಾದ ಮಧುರಾಜ್, ಗಣೇಶ್, ಸುರೇಶ್, ನಾಗಮಹದೇವ, ಅಭಿಷೇಕ್, ಕನಕಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.

## ತ್ರಿವಿಧ ದಾಸೋಹಿ ಡಾ.ಶಿವಕುಮಾರ ಸ್ವಾಮಿಗಳ ಜಯಂತಿ ಆಚರಣೆ



ಮೈಸೂರು ಶರಣ ಮಂಡಳಿ ವತಿಯಿಂದ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ತ್ರಿವಿಧ ದಾಸೋಹಿ ಡಾ.ಶಿವಕುಮಾರ ಸ್ವಾಮೀಜಿ ಅವರ 118 ನೇ ಜಯಂತಿ ಆಚರಿಸಲಾಯಿತು.

ಮೈಸೂರು, ಏ.5(ಜಿಎ)–ಮೈಸೂರು ಶರಣ ಮಂಡಳಿ ವತಿಯಿಂದ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ತ್ರಿವಿಧ ದಾಸೋಹಿ ಡಾ.ಶಿವಕುಮಾರ ಸ್ವಾಮೀಜಿ ಅವರ 118 ನೇ ಜಯಂತಿ ಆಚರಿಸಲಾಯಿತು.

ಈ ವೇಳೆ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಮಾತನಾಡಿ, ಶಿವಕುಮಾರ ಸ್ವಾಮೀಜಿಯವರು ವಿಶ್ವದ ಅತ್ಯಂತ ಶ್ರೇಷ್ಠ ಸಂತರಲ್ಲಿ ಒಬ್ಬರಾಗಿದ್ದಾರೆ. ಜಾತ್ಯತೀತ, ಧರ್ಮಾತೀತವಾಗಿ ಎಲ್ಲ ಮಕ್ಕಳಿಗೂ ಅನ್ನ, ಅಕ್ಷರ ದಾಸೋಹ ವ್ಯವಸ್ಥೆ ಕಲ್ಪಿಸಿದರು. ಈಗಲೂ ಅವರು ಅಂದು ಹಚ್ಚಿದ ಒಲೆ ಸುಮಾರು ಹತ್ತು ಸಾವಿರ ವಿದ್ಯಾರ್ಥಿಗಳಿಗೆ ಅನ್ನ ನೀಡುತ್ತಿದೆ. ಇವರಿಂದಾಗಿ ಸಿದ್ದಗಂಗೆ ಮಠದಲ್ಲಿ ಕಲಿತ ಸಾವಿರಾರು ವಿದ್ಯಾರ್ಥಿಗಳು ವಿಶ್ವದಾದ್ಯಂತ ಉನ್ನತ ಹುದ್ದೆ ಅಲಂಕರಿಸಿದ್ದಾರೆ ಎಂದರು.

ವಿಶ್ವದ ಶ್ರೇಷ್ಠ ಸಂತರ ಸಾಲಿಗೆ ಶಿವಕುಮಾರ ಸ್ವಾಮೀಜಿ ಸೇರಿದ್ದು, ಅವರಿಂದ ಧರ್ಮಾತೀತವಾಗಿ ಎಲ್ಲರೂ ಶಿಕ್ಷಣ ಪಡೆದುಕೊಂಡಿದ್ದಾರೆ. ಬಸವಣ್ಣ ಅವರ ಚಿಂತನೆ ಅಳವಡಿಸಿಕೊಂಡಿದ್ದ ಅವರು ಜೋಳಿಗೆ ಹಾಕಿಕೊಂಡು 85 ವಿದ್ಯಾರ್ಥಿಗಳಿಂದ ಆರಂಭವಾದ ಮಠವಿಂದು 10 ಸಾವಿರಕ್ಕೂ ಅಧಿಕ ಮಕ್ಕಳಿಗೆ ಶಿಕ್ಷಣದ ಹೆಮ್ಮರವಾಗಿದೆ ಎಂದು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್ ಮಾತನಾಡಿ, ಶಿವಕುಮಾರ ಸ್ವಾಮೀಜಿಯವರು ವಿಶ್ವ ಕಂಡ ಶ್ರೇಷ್ಠ ಆಧ್ಯಾತ್ಮಿಕ ನಾಯಕ, ಮಹಾ ಮಾನವತಾವಾದಿಯಾಗಿದ್ದರು. ತಮ್ಮ ಕಾರ್ಯಗಳ ಮೂಲಕ ನಡೆದಾಡುವ ದೇವರೆಂದೇ ಖ್ಯಾತರಾಗಿದ್ದಾರೆ ಎಂದು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಸಮಾಜ ಸೇವಕ ಜೈಶಂಕರ್, ಮಂಡಳಿ ಅಧ್ಯಕ್ಷ ಮೂಗೂರು ನಂಜುಂಡಸ್ವಾಮಿ, ಬಸವರಾಜೇಂದ್ರ ಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.



ಬಾಬು ಜಗನ್ ಜೀವನ್ ರಾವ್ ರವರ 118ನೇ ಜನ್ಮದಿನಾಚರಣೆ ಅಂಗವಾಗಿ ಜಾತ್ಯಾತೀತ ಜನತಾದಳದ ನಗರ ಹಿರಿಯ ಉಪಾಧ್ಯಕ್ಷ ಫಾಲ್ಕನ್ ಬೋರೇಗೌಡ, ಚಾಮರಾಜ ಕ್ಷೇತ್ರದ ಅಧ್ಯಕ್ಷ ಪಿ. ಮಂಜುನಾಥ್, ಕಾರ್ಯದರ್ಶಿ ಪ್ರಕಾಶ್, ಸಂಘಟನಾ ಕಾರ್ಯದರ್ಶಿ ದೇವರಾಜು ಮತ್ತಿತರರು ಬಾಬೂ ಜಗಜೀವನರಾಮ್ ಪ್ರತಿಮೆಗೆ ಹಾರ ಹಾಕಿ, ನಮನ ಸಲ್ಲಿಸಿದರು.

# ಕಲುಷಿತ ನೀರಿನಿಂದ ಉಂಟಾಗುವ ಆರೋಗ್ಯ ಸಮಸ್ಯೆ ತಡೆಗೆ ಕ್ರಮ

## ಜಿಲ್ಲಾಸ್ಪತ್ರೆಗೆ ಪಾಲಿಕೆ ಆಯುಕ್ತರ ಭೇಟಿ, ಪರಿಶೀಲನೆ

ಮೈಸೂರು, ಏ. 5(ಆರ್‌ಕೆ)– ಬೇಸಿಗೆ ತಾಪಮಾನ ಹೆಚ್ಚಾಗಿರುವುದರಿಂದ ಕಲುಷಿತ ನೀರಿನಿಂದ ಉಂಟಾಗಬಹುದಾದ ಆರೋಗ್ಯ ಸಮಸ್ಯೆ ತಡೆಗಟ್ಟಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ತಿಳಿಸಿದ್ದಾರೆ.



ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಶನಿವಾರ ಜಿಲ್ಲಾಸ್ಪತ್ರೆಗೆ ಭೇಟಿ ನೀಡಿ, ಪರಿಶೀಲಿಸಿದರು.

ಪೂರೈಕೆಯಾಗುವ ಕಲುಷಿತ ನೀರು ಕುಡಿದು ಆಸ್ಪತ್ರೆ ಸೇರಿರುವ ಅಥವಾ ನೀರಿನಿಂದುಂಟಾಗುವ ರೋಗ ಲಕ್ಷಣಗಳಿರುವ ಪ್ರಕರಣಗಳ ಬಗ್ಗೆ ಅವರು ಇಂದು ಇಂಜಿನಿಯರ್‌ಗಳು, ಆರೋಗ್ಯ ಶಾಖೆ ಸಿಬ್ಬಂದಿಗಳೊಂದಿಗೆ ಮೈಸೂರಿನ ಮೇಟಗಳ್ಳಿ ಬಳಿಯ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ ವೈದ್ಯಕೀಯ ಅಧೀಕ್ಷಕ ಡಾ. ಅಮರನಾಥ್‌ರಿಂದ ಮಾಹಿತಿ ಪಡೆದುಕೊಂಡರು.

ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ನೀರಿನಿಂದ ಕಾಣಿಸಿಕೊಳ್ಳುವ ರೋಗಿಗಳ ಸಂಖ್ಯೆ ಕಡಿಮೆಯಾಗಿದ್ದು, ಕಾಲರಾದಂತಹ ಸಾಂಕ್ರಾಮಿಕ ರೋಗಕ್ಕೆ ಚಿಕಿತ್ಸೆ ನೀಡಲು ಪೂರಕ ಔಷಧಿ, ವಾರ್ಡ್, ಸಿಬ್ಬಂದಿಗಳೊಂದಿಗೆ ಪೂರ್ಣ ಪ್ರಮಾಣದಲ್ಲಿ ಸಿದ್ಧತೆ ಮಾಡಲಾಗಿದೆ ಎಂದು ಡಾ. ಅಮರನಾಥ್ ತಿಳಿಸಿದರು.

ಈ ಸಂಬಂಧ ಡಾ. ಅಮರನಾಥ್, ವೈದ್ಯರುಗಳೊಂದಿಗೆ ಪಾಲಿಕೆ ಆಯುಕ್ತರು ಸಭೆ ನಡೆಸಿದರು. ಅಗತ್ಯ ಮುಂಜಾಗ್ರತಾ ಕ್ರಮ ವಹಿಸಿ ಆಸ್ಪತ್ರೆಗೆ ಬರುವ ರೋಗಿಗಳಲ್ಲಿ ಕಾಲರಾದಂತಹ ರೋಗ ಲಕ್ಷಣಗಳು ಕಂಡು ಬಂದಲ್ಲಿ ತಪಾಸಣೆ ನಡೆಸಿ ಚಿಕಿತ್ಸೆಗೆ ಸರ್ವ ರೀತಿಯಲ್ಲೂ ಸಿದ್ಧತೆ ಮಾಡಿಕೊಳ್ಳುವಂತೆಯೂ ಆಸಿಫ್ ವೈದ್ಯರಿಗೆ ತಿಳಿಸಿದರು.

## ಮನೆ ಬಾಡಿಗೆಗೆ ಇದೆ

**30x40, 2 BHK, Solar Facility**

ವಿಜಯನಗರ 4th Stage, 2nd Phase ಮರಿಮಲ್ಲಪ್ಪ ಕಾಂಪೌಂಡ್ ಹತ್ತಿರ, ಮೈಸೂರು. ಸಂಪರ್ಕಿಸಿ:

**9606779254**
**9845772961**

## ತಕ್ಷಣ ಬೇಕಾಗಿದ್ದಾರೆ

(JK) ಮೇಟಗಳ್ಳಿ, ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು SSLC, ITI, Pass or Fail (JK ಸುತ್ತಮುತ್ತ ಏರಿಯಾದಲ್ಲಿರುವವರಿಗೆ– ಮಂಟಿ, ಬಸವನಗುಡಿ, ಮೇಟಗಳ್ಳಿ) ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. (Age limit 18-40) ಸಂಬಳ: 15000/– ಅನುಕೂಲತೆ: ESI, PF, Canteen ಸೌಲಭ್ಯವಿರುತ್ತದೆ.

**6362491336, 8105651601**

## ಸೈಟ್ ಮಾರಾಟಕ್ಕಿದೆ

**40x55**

ದಕ್ಷಿಣ ದಿಕ್ಕು 160 ಅಡಿ ರಸ್ತೆಗೆ ಆಫೀಸು ಅಥವಾ ಕ್ಲಿನಿಕ್ ಮಾಡಿ ಅದರ ಮೇಲೆ ಮನೆ ನಿರ್ಮಿಸಿಕೊಳ್ಳಲು ಸೂಕ್ತವಾಗಿದೆ. ವಿಳಾಸ: ಬೋಗಾದಿ ಗದ್ದಿಗೆ ರಸ್ತೆ ರಿಂಗ್ ರೋಡ್‌ಯಿಂದ ಒಂದು ಕಿಲೋಮೀಟರ್ ದೂರದಲ್ಲಿದೆ

**8277585900**

## ಜಮೀನುಗಳು ಮಾರಾಟಕ್ಕಿವೆ

ಮೈಸೂರು ತಾ॥ ಜಯಪುರ ಹೋ॥ಯಲ್ಲಿ ಲೇಔಟ್ ಮಾಡಲು 1 ಎಕರೆ 4 ಗುಂಟೆ 3 ಎಕರೆ 7 ಗುಂಟೆ 20 ಗುಂಟೆ ಕೃಷಿ ಜಮೀನು 1 ಎಕರೆ 28 ಗುಂಟೆ 1 ಎಕರೆ 26 ಗುಂಟೆ ಮತ್ತು 30 ಗುಂಟೆ 19 ಗುಂಟೆ ಜಮೀನುಗಳು ಮಾರಾಟಕ್ಕಿವೆ. ರಿಂಗ್ ರಸ್ತೆಯಿಂದ 8 ರಿಂದ 15 ಕಿ.ಮೀ. ದೂರದಲ್ಲಿ ಇದೆ.

**9945661696, 9663793666**

## 2.5 BHK HOME INTERIORS @ ₹ 2.5 Lakh*

Home Space Mart

*T&C Apply

✆91089 23123

## ಸೈಟುಗಳು ಮಾರಾಟಕ್ಕಿದೆ

**30x50 | 40x60**

ಪೂರ್ವ ದಿಕ್ಕಿನ ಸೈಟುಗಳು ಮಾರಾಟಕ್ಕೆ ಲಭ್ಯವಿದೆ. ಮೈಸೂರು–ಮಡಿಕೇರಿ ರಸ್ತೆ

ಕರೆಮಾಡಿ: 8310416287

## Muda approved A khata SITE FOR SALE

50 feet x 92 feet, total 4570 sq feet.

Situated in Bogadi Road, just 100 meters to proposed peripheral ring road. Site No. 94, Bogadi Road, PARAMAHAMSA NAGARA Layout, K. HEMMANAHALLI VILLAGE, ILAWALA HOBLI, MYSORE TALUK. Contact owner Manohar N: 9916063269

Price Rs. 3000 per square feet

## ಕೆಲಸದವರು ಬೇಕಾಗಿದ್ದಾರೆ

**ಅಡುಗೆ ಮಾಡುವವರು**

#71 , ಐಶ್ವರ್ಯ ನಗರ, ಕುವೆಂಪುನಗರ, ಮೈಸೂರು - 570023

ಬೆಳಿಗ್ಗೆ ಮತ್ತು ಸಂಜೆ

₹15000/- ವರೆಗಿನ ಸಂಬಳ

**8951192064**

## FOR SALE

**North East Corner Site**

measuring 2580 sqft., in Vijaynagar 2nd Stage, Mysore, *Brokers Excuse*

Contact: 9342831000

## GSA SWIMMING SUMMER CAMP

J.P. Nagar, Mysore

Join now for a Special Summer Discount

₹ 6,500/- for 2 months!

Open to all age groups (4 years and above).

*Contact:*

99165 30016 / 99161 03012

INDOOR SWIMMING POOL AVAILABLE

## FARM PLOTS Nanjangud

5600 Sft with 2 squares House, just 100 feet from National Highway (Gundlupete Road) 3 Kms from Hulla Halli Circle, Nanjangud. Fully fenced, Water and electrical lines available. Ready to move in. Rs 700/ sft.

**Call: 74117 96800**

## HOUSE FOR SALE

**20x30 Dimension,**

West Facing Ground & First Floor house at Ramakrishnanagar, E&F Block, Mysore.

Call : 82966 22445

Brokers Excused

## ಸಾಲ/LOANS

* House/Site Purchase
* Construction Loan
* House / Site Mortgage Loan for MUDA, Corporation & Revenue Property.

**77605-98705**

## WANTED

Mechanical / Civil Engineer (Male) Diploma / BE Completed 2 to 3 Years experience For Construction Company

**7997779904**

## Well Equipped RUNNING RESTAURANT For Sale

in Gokulam Main Road, V.V.Mohalla, Mysore.

**Call : 94498 20748**

## COMMERCIAL PROPERTY FOR SALE

3900 sqft

NARAYANA SHASTRI MAIN ROAD (Near Siddappa Circle, MG Road) Opposite to SHUBHAM Appartment

**9535802186**

## WANTED

Office Cum Residence Around 1200 Sft ( 2BR) Preferably Ground Floor in and around Kuvempungr, Saraswatipuram, Vijayanagar 4th Block, Gokulam, JP-NAGAR for Rent/ Lease

Contact: 9972087409

## ಬೇಕಾಗಿದ್ದಾರೆ

1. ವರದಿಗಾರರು } ಅನುಭವಕ್ಕೆ ಆದ್ಯತೆ
2. ಡಿಟಿಪಿ ಆಪರೇಟರ್ } ಪೇಜ್ ಮೇಕರ್, ಕೋರಲ್ ಡ್ರಾ, ಫೋಟೋಷಾಪ್

ಆಸಕ್ತರು ಕೂಡಲೇ ಸಂಪರ್ಕಿಸಿ ಮಧ್ಯಾಹ್ನ 3 ರಿಂದ 5.30ರವರೆಗೆ

ವ್ಯವಸ್ಥಾಪಕ ಸಂಪಾದಕರು
' ಮೈಸೂರು ಮಿತ್ರ ' ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಇಂಡಸ್ಟ್ರಿಯಲ್ ಎ ಲೇಔಟ್, ಬನ್ನಿಮಂಟಪ, ಮೈಸೂರು - 15

## FOR SALE

**40x60 Site**

South facing, Opp. to Park, near Ring Road. Site No. 12365, Vijayanagar 4th Stage, 2nd Phase.

**Price: Rs. 1.60 Crore.**

**Mob: 8884133677**

## FOR SALE

**30x45 Site**

North facing. Close to 80 Feet Road, Vijayanagar 4th Stage, attached to Basavanahalli. E-khatha ready. Bank loan available.

**Mob: 7899214181**

## LEADS KENDRIYA VIDYALAYA

Gayathripuram, 2nd Stage, 2nd Phase, Opp. to St. Antony Chruch, Mysore-19

**WALK IN INTERVIEW FOR ACADEMIC 2025-26**

Require Trained, Dedicated, Excellent communication skill Teachers

* **PGT/TGT-** Maths, Science, Social Science, English, Kannada, Hindi
* **PRT -** Maths, English, Evs, Kannada, Hindi, PET, Drawing, Music
* **Nursery Teachers -** NTT, Diploma in Montessori
* **Office work -** Clerical post with Computer knowledge
* **Graduates / Post-Graduates** without BEd in any field are also encouraged
* **House Keepers, Cooks, Ayas** (Only Ladies)

**ADMISSION OPEN FOR LKG to CLASS 10**

Contact with Resume Timings: 10:30am to 12 noon Working days Only

**Ph. No: 96111 19622, 98807 11561**

## WANTED TEACHERS

* MONTESSORI TEACHERS
* P.U.C, D.Ed., / B.A., B.Ed., (Kannada, English and Hindi for 1st to 5th Std.)
* B.A, / M.A, B.Ed., (English language and Social Science - 6th to 10th Std.)
* B.Sc., / M.Sc., B.Ed., (Maths / Science - 6th to 10th Std.,)
* Drawing and Craft Teacher • Computer Teacher

Trained Teachers with fluency in English, salary on the basis of experience and subject competency.

Apply within 5 days

Address : SRI GNANESHWARI VIDYASAMSTHE
P-1, 8th Main, HEBBAL 1st Stage, Mysore-16
Phone No. : 0821- 2302072
E-mail : srigNaneshwari.vidyasamsthe@gmail.com

## ಮೈಸೂರು ನಗರದಲ್ಲಿ ರಜಾ ದಿನಗಳಲ್ಲಿ ಕರೋಕೆ ಹಾಡುಗಾರಿಕೆ ಕಲಿಯಿರಿ

ತರಗತಿ ವಿಶೇಷತೆಗಳು

1) ನುರಿತ ಹಾಡುಗಾರರು
2) ಬಹು ಭಾಷೆಗಳಲ್ಲಿ
3) ಸೈದ್ಧಾಂತಿಕ ತರಗತಿಗಳು (ಥಿಯೆರಿ)
4) ಪ್ರಾಯೋಗಿಕ (ಪ್ರಾಕ್ಟಿಕಲ್)
5) ವೇದಿಕೆ ಗಾಯನ 6) ಕಡಿಮೆ ಶುಲ್ಕ

ಕರೋಕೆ ಕಾಮತ್: **9611317443**

## WANTED

Join a Leading Developer & Construction Company in Mysore! We are looking for dynamic individuals to join our growing team at SPACE8 Housing.

1. Marketing Associate
2. Tele Sales Executives
3. Accountant

Experience in Real Estate & Construction companies is preferred. Freshers are also welcome.

**Space8 Housing** Contact: 95355-85-355
Email: space8housing@gmail.com, space8@gmail.com
Website: www.space8.in

## ಇಂಪೀರಿಯಲ್ ಸಿಟಿ

HP HYLAND PROPERTIES

ಮೆಗಾ ರೆಸಿಡೆನ್ಸಿಯಲ್ ವಿಲ್ಲಾ ಟೌನ್‌ಶಿಪ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು

MUDA LIMITS

ಮಹಾಶಿವರಾತ್ರಿ ಹಬ್ಬದ ಶುಭಾಶಯಗಳು

ಬುಕಿಂಗ್ ಪ್ರಾರಂಭವಾಗಿದೆ

ಇಲವಾಲ ಸ್ಯಾಟ್‌ಲೈಟ್ ಬಸ್ ನಿಲ್ದಾಣದಿಂದ ಕೇವಲ 4 ಕೀ.ಮೀ

**30x40 | 30x50**
**40x60 | 50x80**

ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು

ಕೇವಲ ₹749/ ಪ್ರತಿ ಚದರ ಅಡಿ

ಸುಲಭ 4 ಕಂತುಗಳ ಸೌಲಭ್ಯವಿದೆ

ಹೈಲ್ಯಾಂಡ್ ಪ್ರಾಪರ್ಟೀಸ್
ಕಾಳಿದಾಸ ರಸ್ತೆ, ವಿಜಯನಗರ 1ನೇ ಹಂತ, ಮೈಸೂರು

**95133 01854**
**88840 71010**

## ಮೈಸೂರು ಮಿತ್ರ

### ವಾರ್ಷಿಕೋತ್ಸವ ವಿಶೇಷ ಸಂಚಿಕೆ

"ಮೈಸೂರು ಮಿತ್ರ" ತನ್ನ ಓದುಗರು ಹಾಗೂ ಜಾಹೀರಾತುದಾರರ ಸೇವೆಯಲ್ಲಿ ಏಪ್ರಿಲ್ 16, 2025ಕ್ಕೆ 45 ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, 46ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸುಸಂದರ್ಭದಲ್ಲಿ ವರ್ಣರಂಜಿತ ವಿಶೇಷಾಂಕವನ್ನು ಹೊರತರಲಾಗುತ್ತಿದೆ. ಹಾಗಾಗಿ ಜಾಹೀರಾತುದಾರರಿಗೆ ಇದೊಂದು ಸುಸಮಯ. ಮುದ್ರಣದ ದೃಷ್ಟಿಯಿಂದ ತಮ್ಮ ಜಾಹೀರಾತುಗಳು ಏಪ್ರಿಲ್ 10, 2025 ರೊಳಗೆ ತಲುಪುವಂತೆ ಮಾಡಲು ಕಳಕಳಿಯ ಮನವಿ.

**ಪ್ರಧಾನ ಕಛೇರಿ**

0821-2496522, 2496523, 0821-2496520 (5 ಲೈನುಗಳು)
ಮರಿಯ ಫರ್ನಾಂಡೀಸ್, ಜಾಹೀರಾತು ವ್ಯವಸ್ಥಾಪಕರು: 9448525060
ಜಾಯ್ ಆಂಥೋಣಿ ಡೋವ್: 8951668960
ಪ್ರೇಮಾ: 9880549879

ಕೆ.ಆರ್. ಸರ್ಕಲ್ ಕಚೇರಿ: 0821-2431774
ದೇವರಾಜ ಅರಸ್ ರಸ್ತೆ ಕಚೇರಿ: 0821-2428695

**ಕೊಡಗು** – ಪ್ರಸಾದ್, ಸೀತಾ ನಿಲಯ, ಮಡಿಕೇರಿ ರೇಂಜ್ ಫಾರೆಸ್ಟ್ ಹತ್ತಿರ, ಹೊಸ ಬಡಾವಣೆ, ಮಡಿಕೇರಿ 9731469871

**ಮಂಡ್ಯ** – ಕೆ. ಮೋಹನ್‌ರಾಜ್ 8762960325

**ಶ್ರೀರಂಗಪಟ್ಟಣ** – ವಿನಯ್ ಕಾರೇಕುರ, ಶ್ರೀರಂಗಪಟ್ಟಣ 9686893234

**ಹುಣಸೂರು** – ಕೆ. ಕೃಷ್ಣ (ಕೆ.ಕೆ.), EWS 204, KHB ಕಾಲೋನಿ, ಕಲ್ಕುಣಿಕೆ, ಹುಣಸೂರು. 9448720626

**ಚಾಮರಾಜನಗರ** – ಸಿದ್ದಲಿಂಗಸ್ವಾಮಿ, ಸಿ.ಹೆಚ್.ಆರ್. ಕಾಂಪ್ಲೆಕ್ಸ್, ಸರ್ಕಾರಿ ಆಸ್ಪತ್ರೆ ಎದುರು, ಚಾಮರಾಜನಗರ 9242265657

**ಟಿ.ನರಸೀಪುರ** – ಕುಮಾರ್, ಸಾರ್ವಜನಿಕ ಆಸ್ಪತ್ರೆ ರಸ್ತೆ, ಆರ್ಯ ಮಹಲ್ ಛತ್ರದ ಎದುರು, ಟಿ. ನರಸೀಪುರ. 9986719590

**ಗುಂಡ್ಲುಪೇಟೆ** – ಸೋಮಶೇಖರ್, ದ.ರಾ. ಬೇಂದ್ರೆ ನಗರ, ಅಶ್ವಿನಿ ಲೇಔಟ್, ಗುಂಡ್ಲುಪೇಟೆ. 9845995426

**ಕೆ.ಆರ್. ನಗರ** – ಮಂಜುನಾಥ, ವಾರ್ಡ್ ನಂ.17, ಕನಕನಗರ Extn. ಮುಳ್ಳೂರು ರಸ್ತೆ, ಕೆ.ಆರ್.ಟೌನ್ 9483084345

**ಮಳವಳ್ಳಿ** – ಶಿವಶಂಕರ, ನಂ.47, 1ನೇ ಕ್ರಾಸ್, ಎನ್.ಇ.ಎಸ್ ಮಳವಳ್ಳಿ ಟೌನ್–571430 9632407806

**ಕೊಳ್ಳೇಗಾಲ** – ಎಸ್.ರಾಜು, ಮೈಸೂರು ಮಿತ್ರ ರಿಪೋರ್ಟರ್ #101, ಹುರುಳಿಕೇರಿ ಬೀದಿ, ಕೊಳ್ಳೇಗಾಲ 9916621007

**ಹಾಸನ** – ಆರ್.ಎನ್.ಸೋಮೇಶ್‌ಗೌಡ, ಹೋಲಿ ಚಿಲ್ಡ್ರನ್ ಶಾಲೆ ಹತ್ತಿರ, ಜಯನಗರ, 1ನೇ ಹಂತ, 2ನೇ ಕ್ರಾಸ್, ಹಾಸನ. 9448401175

**ಕುಶಾಲನಗರ** – ರಘು ಹೆಬ್ಬಾಳೆ, ಮೈಸೂರು ಮಿತ್ರ ರಿಪೋರ್ಟರ್ C/o ಮನು ಪ್ರೆಸ್, ಐ.ಬಿ.ರಸ್ತೆ, ಕುಶಾಲನಗರ 9845698401

**ಜಯಪುರ** – ಬಿಳಿಗಿರಿ, ಜಯಪುರ 9945479288

**ಪಿರಿಯಾಪಟ್ಟಣ** – ವಿರೇಶ್, ಪಿರಿಯಾಪಟ್ಟಣ 8660057128

**ವಿರಾಜಪೇಟೆ** – ಮಂಜುನಾಥ, ವಿರಾಜಪೇಟೆ 9900949353

**ಯಳಂದೂರು** – ವಿ.ನಾಗರಾಜು, ಮೈತ್ರಿ ಮೆಡಿಕಲ್ಸ್, ಬಳೆಪೇಟೆ, ಯಳಂದೂರು 9844349191

**ಕೆ.ಆರ್.ಪೇಟೆ** – ಶ್ರೀನಿವಾಸ, ಅಗ್ರಹಾರ ಬಾಚಹಳ್ಳಿ, ಕೆ.ಆರ್.ಪೇಟೆ 9449326847, 7022757438

**ಹೆಚ್.ಡಿ.ಕೋಟೆ** – ಮಂಜುನಾಥ ಎಸ್., ಹೆಚ್.ಡಿ.ಕೋಟೆ 9483574452

**ಕೆ.ಎಂ.ದೊಡ್ಡಿ** – ಸತೀಶ್ ಎ.ಎಲ್, ಕೆ.ಎಂ.ದೊಡ್ಡಿ 9242120338

**ನಂಜನಗೂಡು** – ರಂಗಸ್ವಾಮಿ, ನಂ.4565, ಕಬಿನಿ ಕಾಲೋನಿ ಹಿಂಭಾಗ, ನೀಲಕಂಠ ನಗರ, ನಂಜನಗೂಡು ಟೌನ್–571301 9901602226

**ಹುಣಸೂರು** – ಹೆಚ್.ಆರ್. ಕೃಷ್ಣಕುಮಾರ್ (ಜಿನ್ ರಾಮೇಗೌಡ), ನಂದಿನಿ ಮಾರಾಟ ಕೇಂದ್ರ, ಮಾರುತಿ ಪೆಟ್ರೋಲ್ ಬಂಕ್ ಹತ್ತಿರ, ಹಳೆಯ ಬಿ.ಎಂ. ರಸ್ತೆ ಹತ್ತಿರ, ಹುಣಸೂರು 9060406093

**ಕೊಳ್ಳೇಗಾಲ** – ನಾಗೇಂದ್ರ ಸ್ವಾಮಿ, ನಂ.7ಎ, 684, 14 ನೇ ಕ್ರಾಸ್, ಬಸವೇಶ್ವರ ನಗರ, ಕೊಳ್ಳೇಗಾಲ 9448576247, 7899849858

## 9ನೇ ವರ್ಷದ ಸವಿನೆನಪು



**ಶ್ರೀ.ಬಿ.ಬೋರೇಗೌಡ್ರು (ಗಂಡೈದ)**

(ಶ್ರೀಮತಿ ನಿಂಗಮ್ಮ ಮತ್ತು ಲೇಟ್ ಕೆ.ಬೋರಯ್ಯನವರ ಮಗ, ಕೆ.ಜಿ.ಕೊಪ್ಪಲ್, ಮೈಸೂರು)
ಮಾಲೀಕರು: ಶ್ರೀ ಕಾಲಭೈರವೇಶ್ವರ ಕನ್ವೆನ್ಷನ್ ಹಾಲ್

ನಿಮ್ಮ ಅಗಲಿಕೆಯ ನೋವಿನ ಛಾಯೆ ನಮ್ಮಲ್ಲಿ ಶಾಶ್ವತ ನೋವನ್ನು ತಂದಿದೆ.
ನಿಮ್ಮ ನೆನಪಿನಲ್ಲೇ ಜೀವನವಿಡಿ ಇರುವ ಹಾಗೂ ನಿಮ್ಮ ಆತ್ಮಕ್ಕೆ ಶಾಂತಿ ಕೋರುವ.

**ದುಃಖತಪ್ತರು:**

ಮೃತರ ತಾಯಿ ಶ್ರೀಮತಿ ನಿಂಗಮ್ಮ ಮತ್ತು ಲೇಟ್ ಕೆ.ಬೋರಯ್ಯನವರ ಮಕ್ಕಳು, ಮೃತರ ಪತ್ನಿ ಶ್ರೀಮತಿ ಹೆಚ್.ಎಸ್. ಪುಷ್ಪಲತಾ ಮತ್ತು ಮಕ್ಕಳಾದ ಬಿ.ಚಂದನ, ಬಿ.ಶರತ್‌ಗೌಡ, ಅರವಿಂದನಗರ ಹಾಗೂ ಬಂಧು–ಮಿತ್ರರು

## CSIR - CFTRI

cftri – Giving Food a Future

ಸಿಎಸ್‌ಐಆರ್ - ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾಲಯ, ಮೈಸೂರು - 570 020, ಭಾರತ
सीएसआईआर – केंद्रीय खाद्य प्रौद्योगिक अनुसंधान संस्थान, मैसूरु - 570 020, भारत
CSIR - Central Food Technological Research Institute, Mysuru - 570 020, India

### Recruitment Notice

CSIR–Central Food Technological Research Institute (CFTRI), Mysuru, a constituent laboratory of Council of Scientific and Industrial Research (CSIR), Ministry of S&T ,Govt. of India, invites online applications from Indian citizens for the following positions:

| Advertisement No. | Name of Position | No. of Vacancies | Pay Level (as per 7th CPC) | #Age limit | Opening & Closing dates of Online Application |
|---|---|---|---|---|---|
| Rec. 02/2025 | Junior Secretariat Assistant | 10** | Level-02 (₹ 19,900-63,200) | 28 Years | Commences from 07-04-2025(Monday) 10:00 AM to 07-05-2025 (Wednesday) till 11:59 PM |
| | Junior Stenographer | 06** | Level -04 (₹ 25,500-81,100) | 27 Years | |
| Rec. 03/2025 | Technical Assistant | 18 | Level -06 (₹ 35,400-1,12,400) | 28 Years | Commences from 10-04-2025 (Thursday) 10:00 AM to10-05-2025 (Saturday) till 11:59 PM |

**Please see the detailed advertisement for cadre wise vacancies & reservations

# Upper age limit as on the last date of online application & please see the detailed advertisement for age relaxations

For detailed advertisement, Terms & Conditions and to apply ONLINE please visit official CFTRI website **https://cftri.res.in** under Recruitments or **https://recruitment.cftri.res.in** All further announcements/details pertaining to this process/updates/corrigendum/ addendum etc. will be published/provided only on CFTRI official website **https://cftri.res.in** from time to time.

Sd/-
Controller of Administration